ಕನ್ನಡ ಸಂಸ್ಕೃತಿ: ಶಂಬಾ ಜೋಶಿಯವರ ಆಲೋಚನೆಗಳು

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ

ಸಂಶೋಧನೆ

ಜಿ.ವಿ. ರಾಜಣ್ಣ

ಮಾರ್ಗದರ್ಶನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶಂಬಾ ಅಧ್ಯಯನ ವೇದಿಕೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ಕಮಲಾಪುರ - ೫೮೩ ೨೨೧

ಸೆಪ್ಟೆಂಬರ್ - ೧೯೯೭

ಸಂಪೂರ್ಣ ಸಂ.ಕ. ೮೯೭

2

64

64

ಕನ್ನಡ ಸಂಸ್ಕೃತಿ: ಶಂಬಾ ಜೋಶಿಯವರ ಆಲೋಚನೆಗಳು

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ

ಸಂಶೋಧನೆ
ಜಿ.ವಿ. ರಾಜಣ್ಣ

ಮಾರ್ಗದರ್ಶನ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶಂಬಾ ಅಧ್ಯಯನ ವೇದಿಕೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-೫೮೩ ೨೨೧
ಸೆಪ್ಟೆಂಬರ್ - ೧೯೯೭

ಸಂಶೋಧಕರ ಪ್ರಮಾಣ ಪತ್ರ

"ಕನ್ನಡ ಸಂಸ್ಕೃತಿ - ಶಂಬಾ ಜೋಶಿಯವರ ಆಲೋಚನೆಗಳು" -ಎಂಬ ಶೀರ್ಷಿಕೆಯ ಈ ನಿಬಂಧವನ್ನು *ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ* ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಜಿ.ವಿ. ರಾಜಣ್ಣ)
ಸಂಶೋಧನಾ ವಿದ್ಯಾರ್ಥಿ ಎಂ.ಫಿಲ್
ಶಂಬಾ ಅಧ್ಯಯನ ವೇದಿಕೆ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

ದಿನಾಂಕ: ೨೦.೦೯.೧೯೯೭
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಜಿ.ವಿ. ರಾಜಣ್ಣ ಅವರು **"ಕನ್ನಡ ಸಂಸ್ಕೃತಿ: ಶಂಬಾ ಜೋಶಿಯವರ ಆಲೋಚನೆಗಳು"** ಎಂಬ ಶೀರ್ಷಿಕೆಯ ಪ್ರೌಢ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ್ದಾರೆ. ಪ್ರಸ್ತುತಃ ನಿಬಂಧದ ಯಾವುದೇ ಭಾಗ ಇದುವರೆಗೂ ಯಾವ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ)
ಮಾರ್ಗದರ್ಶಕರು
ಶಂಬಾ ಅಧ್ಯಯನ ವೇದಿಕೆ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

ದಿನಾಂಕ: ೨೦.೦೯.೧೯೯೭
ಸ್ಥಳ : ವಿದ್ಯಾರಣ್ಯ

ಓದುವ ಮುನ್ನ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗಾಗಿ ಸಂಶೋಧನೆ ಮಾಡಲು ಅನುವು ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಅವರಿಗೆ,

ನನ್ನ ಎಂ.ಫಿಲ್ ಅಧ್ಯಯನಕ್ಕೆ ಗಟ್ಟಿಯಾದ ತಳಪಾಯ ಹಾಕಿ ಕೊಡುತ್ತಾ, ತಪ್ಪುಗಳನ್ನು ತಿದ್ದಿ ಪ್ರೀತಿಯಿಂದ ಮಾರ್ಗದರ್ಶನ ನೀಡಿದ ಆತ್ಮೀಯ ಗುರುಗಳು, ಅಧ್ಯಯನಾಂಗದ ನಿರ್ದೇಶಕರೂ ಆದ, ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ,

ಎಂ.ಫಿಲ್. ಅಧ್ಯಯನದ ಅವಧಿಯಲ್ಲಿ ಸಲಹೆ ಸಹಕಾರ ನೀಡಿದ ವಿಶ್ವವಿದ್ಯಾಲಯದ ಅಧ್ಯಾಪಕರುಗಳು ಹಾಗೂ ಅಧ್ಯಯನದ ತಾತ್ವಿಕತೆಯನ್ನು ಬೋಧಿಸಿದ ಎಲ್ಲಾ ಗುರುಗಳಿಗೆ ಮತ್ತು ಗ್ರಂಥಾಲಯದ ಸಿಬ್ಬಂದಿ ವರ್ಗಕ್ಕೆ,

ಶಂಬಾ ಬಗೆಗೆ ವಿಶೇಷವಾಗಿ ಅಧ್ಯಯನ ಮಾಡಿರುವ ಡಾ. ಕೆ.ವಿ.ನಾರಾಯಣ, ಡಾ. ಬಸವರಾಜ ಕಲ್ಗುಡಿ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಹಾಗೂ ಇನ್ನೂ ಮುಂತಾದ ವಿದ್ವಾಂಸರುಗಳಿಗೆ,

ನನ್ನ ಓದನ್ನು ಮೆಚ್ಚಿ ಪ್ರೋತ್ಸಾಹಿಸುವ ಮೇಷ್ಟ್ರಾದ ಶ್ರೀ ರುದ್ರಮುನಿ ಸ್ವಾಮಿ ಅವರಿಗೆ,

ನನ್ನ ಆತ್ಮೀಯ ಸಹಪಾಠಿಗಳಾದ, ಸ್ನೇಹಿತ ಪ್ರಭು ಹಾಗೂ ಗೆಳತಿ ಚೇತನ ಅವರಿಗೆ

ನನ್ನ ಅಧ್ಯಯನ ಕಾಲದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಲಹೆ-ಸಹಕಾರ ನೀಡಿದ ಹಿರಿಯ ಸಂಶೋಧನ ಮಿತ್ರ ಶ್ರೀ ಗಂಗಾಧರಯ್ಯ, ಮಿತ್ರರಾದ ರೇವಯ್ಯ ಒಡೆಯರ, ನಾಗಭೂಷಣ ಪಾಟೀಲ ಹಾಗೂ ಸಂಶೋಧನಾ ಸಹಪಾಠಿಗಳಿಗೆ,

ಪ್ರೀತಿಯಿಂದ ಆಶೀರ್ವಾದಿಸುವ ಅಪ್ಪ,-ಅಮ್ಮ, ಭಾವ ಶ್ರೀ.ಜಿ.ಸಿ.ತಿಪ್ಪೇಸ್ವಾಮಿ, ಸಹೋದರಿ ಕವಿತಾ, ತಮ್ಮನಾದ ಬಾಬು, ಪುಟಾಣಿಗಳಾದ ವಿಜಯ್, ವಿದ್ಯಾ, ವಿನಯ್ ಹಾಗೂ ನನ್ನವರೆಲ್ಲರಿಗೆ

ಅಂದವಾಗಿ ಮುದ್ರಿಸಿಕೊಟ್ಟ ಸಂಧ್ಯಾ ಕಂಪ್ಯೂಟರ್ಸ್‌ರವರಿಗೆ.

ಅನಂತ ಅನಂತ ವಂದನೆಗಳು.

ಪರಿವಿಡಿ

- ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪೀಠಿಕೆ

ಶಂಬಾ ಜೋಶಿಯವರು ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ತಮ್ಮದೇ ಆದ ದಾರಿಯನ್ನು ನಿರ್ಮಿಸಿಕೊಂಡವರು. 'ಕನ್ನಡ ಸಂಸ್ಕೃತಿ' ಕುರಿತು ಪ್ರಾರಂಭಿಕ ಚಿಂತಕರಲ್ಲಿ ಅವರೂ ಒಬ್ಬರು. ವಿಭಿನ್ನ ರೀತಿಯ ಆಲೋಚನೆ ಹಾಗೂ ಸಂಶೋಧನಾ ಮಾರ್ಗದಿಂದಾಗಿ, ಅವರನ್ನು ವಿಶಿಷ್ಟವಾಗಿ ಗುರುತಿಸಲಾಗಿದೆ. ಅವರ ಬಹುತೇಕ ಗ್ರಂಥಗಳಲ್ಲಿ ಸಂಸ್ಕೃತಿಯನ್ನು ಕುರಿತು ಅದರಲ್ಲಿಯೂ 'ಕಂನಾಡ ಸಂಸ್ಕೃತಿ' ಕುರಿತ ವಿಷಯವೇ ಅಧಿಕವಾಗಿ ಪ್ರಸ್ತಾಪಗೊಂಡಿದೆ ಹಾಗೂ ಚರ್ಚೆಗೆ ಬಂದಿದೆ. ಈ ಮೂಲಕ ಭಾರತೀಯ, ಮಾನವನ ಸಂಸ್ಕೃತಿಯ ಕಡೆಗೆ ಅವರ ದೃಷ್ಟಿ ನೆಟ್ಟಿದೆ. 'ಸಂಸ್ಕೃತಿ' ಕುರಿತ ಅವರ ಪರಿಕಲ್ಪನೆ ವೈಶಿಷ್ಟ್ಯಪೂರ್ಣವಾದುದಷ್ಟೆ. ಒಟ್ಟು ಮಾನವ ಜೀವನವಿಧಾನವನ್ನು ಅವರ ನಡೆವಳಿಯನ್ನು ಸಂಸ್ಕೃತಿಯೆಂದು ಗ್ರಹಿಸಿ; ಇಂದಿನ ಮಾನವನ ವರ್ತನೆಗೆ ಕಾರಣವಾದ, ಕಾರಣಮೀಮಾಂಸೆಯನ್ನು 'ನಿನ್ನೆ'ಯಲ್ಲಿ ಗುರುತಿಸುವ ಹಾಗೂ 'ನಾಳೆ'ಯನ್ನು ನೋಡುವ ಬಗೆಯನ್ನು ಅವರಲ್ಲಿ ಕಾಣಬಹುದಾಗಿದೆ. ಸಂಸ್ಕತಿ ಜಡವಲ್ಲ; ಅದು ಜೀವನ. ವ್ಯಷ್ಟಿನೆಲೆಯ ಸಂಸ್ಕೃತಿಗೆ ಸಾಮಾಜಿಕ ಸಂದರ್ಭದಲ್ಲಿ ಬೆಲೆಯಿರುವುದಿಲ್ಲ; ಅದು ಸಮಷ್ಟಿ ನಲೆಯಲ್ಲಿ ನಿಂತಾಗ ಬೆಲೆ ಪಡೆದುಕೊಳ್ಳುತ್ತದೆ. ಸಂಸ್ಕೃತಿ ಅಧ್ಯಯನ ಎಂದರೆ 'ಗತ' ಕಾಲದ ಅಧ್ಯಯನವಲ್ಲ; ವರ್ತಮಾನದ ಸಂಗತಿ-ವಿಸಂಗತಿ ಅರ್ಥಮಾಡಿಕೊಳ್ಳುವ ಸಾಧನವೂ ಆಗಿರುತ್ತದೆ. ನಿನ್ನೆ-ಇಂದು-ನಾಳೆಗಳ ಸಂಗಮದ ಕ್ರಿಯೆಯಲ್ಲಿ ಸಂಸ್ಕೃತಿಗೆ ಬೆಲೆ ಬರುತ್ತದೆ ಎನ್ನುವ ಶಂಬಾ ಅವರಿಗೆ ಸಂಸ್ಕೃತಿ ಅಧ್ಯಯನವು ಜೀವನ ನೆಲೆಯ ಸಮೂಹದ ಮರುಸೃಷ್ಟಿಯೇ ಆಗಿದೆ. ಇದನ್ನು ಈ ಅಧ್ಯಯನದಲ್ಲಿ ವಿಶೇಷವಾಗಿ ಚರ್ಚೆಯಾಗಿದೆ. ಈ ಹಿನ್ನೆಲೆಯಲ್ಲಿ ಅವರ 'ಕಂನಾಡ ಸಂಸ್ಕೃತಿ' ಕುರಿತ ಪರಿಕಲ್ಪನೆ ಕಂನಾಡಿನ ಜನಾಂಗದ ಜೀವನ ವಿಧಾನಗಳ ಪುನಾ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಉದ್ದೇಶ

ನಾವು ಬಳಸುವಂತಹ ಶಬ್ದಗಳ ಅರ್ಥಗಳು ಬಹುತೇಕವಾಗಿ ಬಳಸುವವರಿಗೆ ತಿಳಿದಿದ್ದರೂ, ಅದರ ವ್ಯುತ್ಪತ್ತಿ-ನಿಷ್ಪತ್ತಿಗಳ ಬಗೆಗೆ ತಿಳಿದಿರುವುದಿಲ್ಲ. ತಿಳಿದಿರುವ ಆವಶ್ಯಕತೆ ಅಷ್ಟಾಗಿರದಿದ್ದರೂ, ಅದರ ಜ್ಞಾನ ಅವಶ್ಯವಾಗಿರುತ್ತದೆ. ಕನ್ನಡ ಸಂಸ್ಕೃತಿ ಬಗೆಗೂ ಇದೇ ಬಗೆಯ ಸಮಸ್ಯೆಯುಂಟು! ಕನ್ನಡ ನಾಡು-ಕರ್ನಾಟಕ ಎಂಬ ರೂಪಗಳು ಸರಿಯೇ? ಇವು ಏನನ್ನು ನಿರ್ದೇಶಿಸುತ್ತವೆ ಎಂಬ ವಿಷಯಗಳತ್ತ ನಾವು ಅಷ್ಟಾಗಿ ಗಮನ ನೀಡಿರುವುದಿಲ್ಲ. ಈ ಚರ್ಚೆ ಬೇರೆ ಬೇರೆ ಸಮಸ್ಯೆಗಳತ್ತ ನಮ್ಮನ್ನು ಕರೆದೊಯ್ಯುತ್ತದೆ. ಆದರೆ, ಮೊದಲು ಕನ್ನಡ ಸಂಸ್ಕೃತಿಯ ವಿವಿಧ ಗ್ರಹಿಕೆಗಳನ್ನು ತಿಳಿಯುವುದು ಒಳಿತು. 'ಕನ್ನಡ ಸಂಸ್ಕೃತಿ' ರೂಪುಗೊಂಡ ಬಗೆ; ಮೂಲ ಜನಾಂಗ ಕುರಿತ ವಿಚಾರ; ಅದು ಸಾಗಿ ಬಂದ ದಿಕ್ಕು; ಸಾಗುವಾಗ ಆದ ಸ್ಥಿತ್ಯಂತರಗಳು; ಭಾಷೆಯ ಮೂಲ ಸ್ವರೂಪ; ಸಂಸ್ಕೃತಿಯೊಳಗೆ ಪೋಷಿಸಿಕೊಂಡು ಬರುತ್ತಿರುವ ದೇವತಾ ಪ್ರತಿಮೆಗಳ ಬಗೆಗಿನ ಅರಿವು; ಇವೆಲ್ಲವನ್ನೂ ತಿಳಿಯುವ ಅಗತ್ಯವಿದೆ. ಇವುಗಳ ಅಧ್ಯಯನದ ಆವಶ್ಯಕತೆಯಿದೆ. ದಿನೇ-ದಿನೇ ನಮ್ಮ ಸಂಸ್ಕೃತಿ-ಸಂಪ್ರದಾಯದತ್ತ ಮೂಢರಾಗಿಯೋ, ಅಂಧಾನುಕರಣಿಗಳಾಗಿಯೋ ಬದುಕುತ್ತಿರುವ ಈ ಯಂತ್ರ ಯುಗದಲ್ಲಿ ನಾಡು-ನುಡಿ-ಸಂಸ್ಕೃತಿ ಬಗ್ಗೆ ಅಭಿಮಾನ ಶೂನ್ಯರಾಗುತ್ತಿರುವ ಇಂದಿನ ಪರಿಸ್ಥಿಯಲ್ಲಿ ನಮ್ಮತನದ ಎಚ್ಚರ ಇರಬೇಕಾದ್ದು ಅವಶ್ಯವೆಂದು ಭಾವಿಸುವುದು ತಪ್ಪಲ್ಲ. ಈ ಹಿನ್ನೆಲೆಯಲ್ಲಿ 'ಕಂನಾಡ ಸಂಸ್ಕೃತಿ' ಕುರಿತು ಚಿಂತಿಸಿದ ಪ್ರಮುಖರಲ್ಲಿ ಶಂಬಾ ಮುಖ್ಯರು. ಅವರ ಚಿಂತನೆಯ ಪ್ರಸ್ತುತತೆಯನ್ನು, ಅವರ ಆಲೋಚನಾ ವಿಧಾನಗಳನ್ನು ಸಂಗ್ರಹಿಸುತ್ತಾ, ಸಮೀಕ್ಷೆ ಮಾಡುವ ಉದ್ದೇಶವನ್ನು ಪ್ರಸ್ತುತ ಪ್ರಬಂಧವು ಹೊಂದಿದೆ.

ವ್ಯಾಪ್ತಿ

"ಕಂನಾಡ ಸಂಸ್ಕೃತಿ -ಶಂಬಾ ಆಲೋಚನೆಗಳು" ಎನ್ನುವ ಪ್ರಬಂಧದ ವ್ಯಾಪ್ತಿ ವಿಶಾಲವಾದದ್ದು. ಅದು ನಾನಾ ಆಯಾಮಗಳನ್ನು ಹೊಂದಿದೆ. ಶಂಬಾ ಕನ್ನಡ ಸಂಸ್ಕೃತಿ ಮೂಲಕ ಭಾರತೀಯ ಹಾಗೂ ಮಾನವ ಸಂಸ್ಕೃತಿಯ ಕಡೆಗೆ ಅನ್ವೇಷಣೆಗೆ ತೊಡಗಿಕೊಂಡರಷ್ಟೆ. ಅವರೆಡರ ನಡುವೆ ಅವರ ಕೃತಿಗಳಲ್ಲಿ ಸಾಮ್ಯ ಕಂಡುಬರುತ್ತದೆ. ಇಲ್ಲಿ 'ಕಂನಾಡ ಸಂಸ್ಕೃತಿ'ಯ ಬಗ್ಗೆ ಅವರ ಆಲೋಚನೆಗಳನ್ನು ಮಾತ್ರ ಗ್ರಹಿಸಲು ಪ್ರಯತ್ನಿಸಲಾಗಿದೆ. ಈ ವಿಷಯಕ್ಕೆ ಪೂರಕವಾಗಿ 'ಕನ್ನಡ ಸಂಸ್ಕೃತಿ' ಕುರಿತ ಚಿಂತಕರ ಚಿಂತನೆಗಳನ್ನು ಆನುಷಂಗಿಕವಾಗಿ ಪ್ರಸ್ತಾಪಿಸಲಾಗಿದೆ. ಈ ರೀತಿಯ ಪ್ರಸ್ತಾಪ ಶಂಬಾ ಅವರ 'ಕಂನಾಡ

ಸಂಸ್ಕೃತಿ' ಅಧ್ಯಯನದ ಗ್ರಹಿಕೆಗೆ ಪೂರ್ವಭಾವಿಯಾದ ಹಿನ್ನೆಲೆಯಾಗುತ್ತದೆಂದು ಭಾವಿಸಬಹುದು. ಮುಖ್ಯವಾಗಿ ಇತರ ಸಂಸ್ಕೃತಿ (ಕನ್ನಡ) ಚಿಂತಕರನ್ನು ಸ್ಥೂಲವಾಗಿ ಗ್ರಹಿಸುತ್ತ ಶಂಬಾ ಅವರಿಗಿಂತ ಭಿನ್ನವಾಗಿ ಯಾವ ರೀತಿಯಲ್ಲಿ ಈ ಪರಿಕಲ್ಪನೆಯನ್ನು ಬಳಸಿಕೊಂಡಿದ್ದಾರೆ ಎನ್ನುವುದನ್ನು ಹೇಳಲು ಬಯಸಿದ್ದೇನೆ. ಅಲ್ಲದೆ ಕಂನಾಡ ಸಂಸ್ಕೃತಿಯ ಎಲ್ಲಾ ವಿಚಾರಗಳನ್ನು ಹೇಳುವುದು ಈ ಪ್ರಬಂಧದ ವ್ಯಾಪ್ತಿಗೆ ನಿಲುಕದ ಮಾತು.

ಸ್ವರೂಪ

ಪ್ರಸ್ತುತ ಪ್ರಬಂಧವನ್ನು ಅಧ್ಯಯನ ಸೌಲಭ್ಯಕ್ಕಾಗಿ ಐದು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಮೊದಲ ಅಧ್ಯಾಯ: 'ಪ್ರಸ್ತಾವನೆ' ಎಂದಿದ್ದು, ಭಾರತೀಯ ಮತ್ತು ಕನ್ನಡ ಸಂಸ್ಕೃತಿ ಚಿಂತಕರಲ್ಲಿ ಪ್ರಮುಖರನ್ನು ಮುಖ್ಯವಾಗಿ ಗಮನಿಸಿ ಅವರ ಚಿಂತನೆಗಳನ್ನು ಸ್ಥೂಲವಾಗಿ ತಿಳಿಯುವ ಪ್ರಯತ್ನ ಮಾಡಲಾಗಿದೆ. ಇದರ ಜೊತೆಗೆ ಶಂಬಾ ಅವರ 'ಸಂಸ್ಕೃತಿ' ಚಿಂತನೆಯನ್ನು ಕುರಿತು ಅನ್ವಯಿಕವಾಗಿ ಅಲ್ಲಲ್ಲಿ ಹೇಳಲಾಗಿದೆ. ಎರಡನೇ ಅಧ್ಯಾಯವು ಮೊದಲ ಅಧ್ಯಾಯವನ್ನು ವಿಸ್ತರಿಸುತ್ತಾ 'ಕನ್ನಡ ಸಂಸ್ಕೃತಿ' ಚಿಂತಕರಲ್ಲಿ ಕೆಲವರನ್ನು ಆರಿಸಿಕೊಂಡು ಅವರ ಚಿಂತನೆಯನ್ನು ಗ್ರಹಿಸುವ ಯತ್ನಮಾಡಿದೆ. ಇವರ ಜೊತೆಗೆ ಶಂಬಾ ಅವರನ್ನು ಇತರರಿಗಿಂತ ಬೇರೆಯಾಗಿ ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, ಕನ್ನಡ, ಕರ್ಣಾಟಕ, ಕರ್ನಾಟಕ ಶಬ್ದಗಳ ವ್ಯುತ್ಪತ್ತಿ-ನಿಷ್ಪತ್ತಿ ಕುರಿತ ಚರ್ಚೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಈ ಪದಗಳ ಬಗೆಗೆ ಶಂಬಾ ಅವರ ನಿಲುವನ್ನು ವಿವರಿಸುವ ಪ್ರಯತ್ನ ಮಾಡಿದೆ. ನಾಲ್ಕನೆಯ ಅಧ್ಯಾಯವು ಶಂಬಾ ಅವರ 'ಕಂನಾಡ ಸಂಸ್ಕೃತಿ' ಕುರಿತ ಆಲೋಚನೆಗೆ ಸಂಬಂಧಿಸಿದ್ದಾಗಿದೆ. ಇದರಲ್ಲಿ ಉಪ-ಶೀರ್ಷಿಕೆಗಳನ್ನು ಮಾಡಿಕೊಂಡು ಅವರು ಗ್ರಹಿಸಿಕೊಂಡ ಕಂನಾಡ ಸಂಸ್ಕೃತಿಯನ್ನು ವಿವಿಧ ವಸ್ತುನೆಲೆಗಳ ಮೂಲಕ ವಿವರಿಸಲು ಪ್ರಯತ್ನಿಸಲಾಗಿದೆ. ಪ್ರತಿಯೊಂದು ಉಪ ಶೀರ್ಷಿಕೆಗಳು ಇಲ್ಲಿ ಅಂತರ್ ಸಂಬಂಧವನ್ನು ಹೊಂದಿವೆ.

ಪ್ರಸ್ತುತ ಅಧ್ಯಯನದಿಂದ 'ಕಂನಾಡ ಸಂಸ್ಕೃತಿ' ಬಗೆಗೆ ಗ್ರಹಿಸಿದ ನಿಲುವನ್ನು 'ಸಮಾರೋಪ'ದಲ್ಲಿ ಹೇಳಲಾಗಿದೆ. ಇಲ್ಲಿ ಸಂಸ್ಕೃತಿ ಅಧ್ಯಯನ ಕುರಿತಂತೆ ಇನ್ನು ಮುಂದೆ ಆಗಿರುವ, ಆಗಬೇಕಾದ ವಿಷಯಗಳತ್ತ ಗಮನವಿರಿಸಿ ಶಂಬಾ ಅವರನ್ನು ಅರ್ಥಮಾಡಿಕೊಳ್ಳುವ ಬಗೆಯನ್ನು ವಿವರಿಸಲಾಗಿದೆ. ಪ್ರಸ್ತುತ ಪ್ರಬಂಧ ರಚನೆಗೆ ಮುಖ್ಯವಾಗಿ ಶಂಬಾ ಅವರು ಬರೆದ ಪುಸ್ತಕಗಳೇ ಆಧಾರವಾಗಿದೆ. ಶಂಬಾ ಅವರ ಬಗೆಗೆ

ಇದುವರೆಗೆ ಪ್ರಕಟವಾದ ವಿದ್ವಾಂಸರ ಬಹುತೇಕ ಲೇಖನಗಳನ್ನು ಪ್ರಬಂಧ ರಚನೆಯ ಸಂದರ್ಭದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆ. ಇತರೆ ಪುಸ್ತಕಗಳನ್ನು, ಪುಸ್ತಕಗಳ ಉಲ್ಲೇಖಗಳನ್ನು ಅಥವಾ ಟಿಪ್ಪಣಿಯನ್ನು ಬಳಸಿಕೊಂಡಾಗ ಅಂತಹ ಪುಸ್ತಕದ ಹೆಸರು, ಸಂಪಾದನೆ ಮತ್ತು ಸಂಪಾದಕರ ಬಗ್ಗೆ ತಿಳಿಸಲಾಗಿದೆ. ಪುಟ ಸಂಖ್ಯೆಯನ್ನು ಸಾಧ್ಯವಾದಷ್ಟು ಹಾಕಲು ಪ್ರಯತ್ನಿಸಲಾಗಿದೆ. ಒಂದು ಪುಸ್ತಕವನ್ನು ಓದಿ ಟಿಪ್ಪಣಿ ಮಾಡಿಕೊಂಡ ಸಂದರ್ಭದಲ್ಲಿ ಪುಟಸಂಖ್ಯೆಯನ್ನು ಕೊಡದೆ, ಪುಸ್ತಕದ ಹೆಸರನ್ನು ಮಾತ್ರ ನೀಡಲಾಗಿದೆ. ಪ್ರತಿ ಅಧ್ಯಾಯದ ಕೊನೆಗೆ ಆ ಅಧ್ಯಾಯದಲ್ಲಿ ಬಳಸಿದ ಪುಸ್ತಕಗಳ ಸೂಚಿಯನ್ನು ಮತ್ತು ಪ್ರಬಂಧದ ಕೊನೆಗೆ ಒಟ್ಟು ಗ್ರಂಥಸೂಚಿಯನ್ನು ಅಕಾರಾದಿಯಾಗಿ ನೀಡಲಾಗಿದೆ.

ಈ ಪ್ರಬಂಧದಲ್ಲಿ ಮೇಲಿಂದ ಮೇಲೆ ಬರುವ ಕನ್ನಡ-ಕರ್ನಾಟಕ ಸಂಸ್ಕೃತಿ ಎಂಬ ಪದಗಳನ್ನು ಒಂದೇ ಅರ್ಥದಲ್ಲಿ ಕಾಣಲಾಗಿದ್ದು, ಆದಷ್ಟು ಶಂಬಾ ಅವರ ಪುನರ್ ಸೃಷ್ಟಿಯಾದ ಕಂನಡ, ಕಂನುಡಿ, ಕನ್ನಾಡು ಎಂಬ ಪದಗಳನ್ನು ವಿಶೇಷವಾಗಿ ಬಳಸಿಕೊಳ್ಳಲಾಗಿದೆ. ಜೊತೆಗೆ ಕಂನಾಡು-ಕಂನುಡಿ ಕುರಿತ ಪರಿಕಲ್ಪನೆಯನ್ನು ಸ್ಥೂಲವಾಗ ಗ್ರಹಿಸುವ ಹಾಗೂ ವಿಸ್ತರಿಸುವ ಪ್ರಯತ್ನ ಮಾಡಿದೆ.

ಅಧ್ಯಾಯ ೧

ಪ್ರಸ್ತಾವನೆ

'ಸಂಸ್ಕೃತಿ' ಕುರಿತಾದ ಚರ್ಚೆ ನಿನ್ನೆ ಇಂದಿನದಲ್ಲ. ಈ ಚಿಂತನ ೧೯ನೆಯ ಶತಮಾನದಲ್ಲಿ ಆರಂಭವಾಯಿತೆನ್ನಬಹುದು. ಆದರೂ ಸಂಸ್ಕೃತಿಗೆ ಒಮ್ಮತದ ವ್ಯಾಖ್ಯಾನವಾಗಲಿ, ಅದರ ಅರ್ಥವ್ಯಾಪ್ತಿಯಾಗಲಿ, ಯಾರಿಂದಲೂ ನಿರ್ಧರಿತವಾಗಿಲ್ಲ. 'ಸಂಸ್ಕೃತಿ'ಯೆಂಬ ಪರಿಕಲ್ಪನೆಯ ವ್ಯಾಪ್ತಿ ಎಷ್ಟು ವಿಶಾಲವಾದದ್ದೋ ಅಷ್ಟೇ ಸಂಕೀರ್ಣವಾದದ್ದೂ ಕೂಡ. ಈ ಚರ್ಚೆ ಹಳತಾದುದೂ ಅಲ್ಲ; ದಿನ ದಿನಕ್ಕೂ ಇದರ ಚರ್ಚೆ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಲೇ ಹೋಗುತ್ತಿದೆ. ಇದರ ಚರ್ಚೆ ಸ್ಥಳೀಯವಾಗಿ, ಅಷ್ಟೇ ಅಲ್ಲಿ ಇಡೀ ವಿಶ್ವ ಈ ಪದದ ಬಗ್ಗೆ ನಿತ್ಯ ಒಂದಿಲ್ಲೊಂದು ಕಾರಣದಿಂದ ಚಿಂತನೆಗೆ ಒಳಪಡಿಸಿಕೊಳ್ಳುತ್ತಲೇ ಇದೆ. ಸಂಸ್ಕೃತಿ ಪದದ ಬಹುತ್ವದ ನೆಲೆಯೇ ಈ ಬಗೆಯದೆಂದು ತೋರುತ್ತದೆ.

ಇಂಗ್ಲೀಷ್‌ನ Culture ಎಂಬ ಪದಕ್ಕೆ ಸಂಸ್ಕೃತದ 'ಸಂಸ್ಕೃತಿ' ಎಂಬ ಪದವನ್ನು ಸಂವಾದಿಯಾಗಿ ಬಳಸಿಕೊಳ್ಳಲಾಗಿದೆ. ಇದಕ್ಕೂ ಹಿಂದೆ (೧೯ನೇ ಶ.) ಸಂಸ್ಕೃತಿ ಪದ ನಮ್ಮಲ್ಲಿ ಇತ್ತು. ಆದರೆ, Culture ಎಂಬ ಪದವು ಸಂಸ್ಕೃತದ 'ಸಂಸ್ಕೃತಿ' ಪದದಷ್ಟು ಅರ್ಥವ್ಯಾಪ್ತಿ ವೈಶಾಲ್ಯತೆಯನ್ನು ಪಡೆದಿರಲಿಲ್ಲ. ಪಾಶ್ಚಿಮಾತ್ಯರಲ್ಲಿ ಈ ಪರಿಭಾಷೆಯು ಎರಡು-ಮೂರು ಶತಮಾನಗಳಿಂದ ಚರ್ಚೆಗೆ ಒಳಗಾಗುತ್ತಲೇ ಇತ್ತು. ಈ ಪರಿಭಾಷೆಯನ್ನ ಕುರಿತು ಇಂಗ್ಲೀಷ್, ಗ್ರೀಕ್, ಫ್ರೆಂಚ್, ಭಾಷೆಗಳಲ್ಲಿ ಉದ್ಗ್ರಂಥಗಳೇ ರಚನೆಯಾಗಿವೆ. ಮ್ಯಾಥ್ಯೂ ಅರ್ನಾಲ್ಡ್ ಅವರ "Culture and Anarchy" ಪುಸ್ತಕ ಹೊರಬಂದಾಗಲಂತೂ ಇಡೀ ವಿಶ್ವವೇ ಈ ಪದದ ಅರ್ಥದ ಬಗೆಗೆ ತಲೆಕೆಡಿಸಿಕೊಳ್ಳಲಾರಂಭಿಸಿತ್ತು. ಪಶ್ಚಿಮ ದೇಶದ ವಿಶ್ವವಿದ್ಯಾಲಯಗಳಲ್ಲಿ ಆ ಹೊತ್ತು ಈ ಸಾಂಸ್ಕೃತಿಕ ಪದದ ಬಗ್ಗೆ ಬಿಸಿ ಬಿಸಿ ಚರ್ಚೆಗಳೂ ನಡೆದಿವೆ.

ವಸಾಹತು ಶಿಕ್ಷಣನೀತಿಯಿಂದಾಗಿ ಭಾರತದಲ್ಲಿ ಸಂಸ್ಕೃತಿ ಕುರಿತಾದ ಚಿಂತನೆಗಳು ಆರಂಭಗೊಂಡವು. ಭಾರತೀಯ ಸಂಸ್ಕೃತಿ ಚಿಂತಕರ ವಿಚಾರಗಳನ್ನು ಮೂರು ರೀತಿಯಾಗಿ ವಿಭಜಿಸಿಕೊಂಡು ಸಂಸ್ಕೃತಿಯ ಸಂಕಥನವನ್ನು ವಿವರಿಸಿಕೊಳ್ಳಲು ಶಕ್ಯವಿದೆ.

೧. ಆಧ್ಯಾತ್ಮಿಕ ಸಂಸ್ಕೃತಿ ಸಂಕಥನ

೨. ಸಾಮಾಜಿಕ ಸಂಸ್ಕೃತಿ ಸಂಕಥನ

೩. ಚಾರಿತ್ರಿಕ ಸಂಸ್ಕೃತಿ ಸಂಕಥನ

ಆಧ್ಯಾತ್ಮಿಕ ಸಂಸ್ಕೃತಿ ಸಂಕಥನವನ್ನು ರಾಮಕೃಷ್ಣರು, ವಿವೇಕಾನಂದರು, ದಯಾನಂದ ಸರಸ್ವತಿ, ಶ್ರೀ ಅರವಿಂದರು, ಡಾ. ರಾಧಾಕೃಷ್ಣನ್, ಗಾಂಧೀಜಿ ಮುಂತಾದವರ ಸಂಸ್ಕೃತಿ ವಿವೇಚನೆಯನ್ನು ಈ ನೆಲೆಯಲ್ಲಿ ವಿವರಿಸಬಹುದು. ಬಹುತೇಕವಾಗಿ ಇವರಿಗೆ 'ಸಂಸ್ಕೃತಿ' ಎಂಬುದು 'ಅಂತರಂಗ'ಕ್ಕೆ ಸಂಬಂಧಿಸಿದ್ದಾಗಿದೆ. ವೇದ, ಗೀತೆ, ಪುರಾಣ, ರಾಮಾಯಣ, ಮಹಾಭಾರತಗಳು ಪ್ರಾಚೀನ ಭಾರತೀಯ ಸಂಸ್ಕೃತಿಯ ಮುಖ್ಯ ಕುರುಹುಗಳೆಂದು ಗುರುತಿಸಿ ಅಲ್ಲಿಯ ಆದರ್ಶವನ್ನೇ ಎತ್ತಿ ಹೇಳುವ ಪ್ರಯತ್ನ ಇಲ್ಲಿ ಮುಖ್ಯವಾಗಿರುತ್ತದೆ. ಭಾರತೀಯ ಸಂಸ್ಕೃತಿಯನ್ನು 'ಹಿಂದೂ' ಸಂಸ್ಕೃತಿಯೆಂದು ಕರೆದು ಜಾಗತಿಕ ಮಟ್ಟದಲ್ಲಿ ಅದಕ್ಕೆ ಒಂದು ಮಹತ್ವದ ಸ್ಥಾನವನ್ನು ಇವರಲ್ಲಿ ಕೆಲವರಾದರೂ ಒದಗಿಸಿಕೊಡುತ್ತಾರೆ.

ಡಾ. ಎಸ್. ರಾಧಾಕೃಷ್ಣನ್ ಅವರು ತಮ್ಮ ಎರಡು ಕೃತಿಗಳಲ್ಲಿ 'ಸಂಸ್ಕೃತಿ' ಪದವನ್ನು ಬಹುಬಗೆಯಾಗಿ ವಿವರಿಸಿದ್ದಾರೆ. The creation of Culture ಮತ್ತು Religion and Culture ಪುಸ್ತಕಗಳಲ್ಲಿ ಸಂಸ್ಕೃತಿಯ ಬಗೆಗೆ ಹೇಳಿದ್ದಾರೆ. ಡಾ. ರಾಧಾಕೃಷ್ಣನ್ ಅವರು ಹಿಂದೂಧರ್ಮವನ್ನು ಪುನರುತ್ಥಾನ ಗೊಳಿಸುವ ಪ್ರಯತ್ನದಲ್ಲಿ ವೇದಾಂತದ ಮೌಲ್ಯಗಳನ್ನು ಬಳಸಿಕೊಂಡು; ಭಾರತೀಯ ಸಂಸ್ಕೃತಿಯನ್ನು ವ್ಯಾಖ್ಯಾನ ಮಾಡುತ್ತಾರೆ. ಅವರ The creation of Culture ಪುಸ್ತಕದ What is Culture? ಎಂಬ ಅಧ್ಯಾಯದಲ್ಲಿ ಹಿಂದೂಧರ್ಮದ ಪವಿತ್ರ ಗ್ರಂಥಗಳಾದ ಗೀತೆ, ವೇದ, ಸ್ಮೃತಿ, ಪುರಾಣಗಳಲ್ಲಿ ಆಗಿಹೋದ ಅಲೌಕಿಕ ನಂಟುಗಳನ್ನು ಪ್ರಸ್ತುತ ಜಗತ್ತಿಗೆ ಹಚ್ಚಿ ವ್ಯಾಖ್ಯಾನಿಸತೊಡಗುತ್ತಾರೆ. ಬದುಕು ಅಧ್ಯಾತ್ಮ ಸಹಿತವಾಗಿರಬೇಕು. 'ವಸುದೈವ ಕುಟುಂಬಕಮ್ ' ಎಂಬ ಉಪನಿಷತ್ತಿನ ವ್ಯಾಖ್ಯೆ ಸಾರ್ವತ್ರಿಕ ಅಭಿಪ್ರಾಯವಾಗಬೇಕು. ಭಾರತೀಯ ಸಾಂಸ್ಕೃತಿಕ ಮೌಲ್ಯಗಳು ಉಪನಿಷತ್ತಿನಲ್ಲಿ ಬರುವ ಅಲೌಕಿಕ ಅಧ್ಯಾತ್ಮ ಚಿಂತನೆಯನ್ನು ಒತ್ತಿ ಹೇಳುತ್ತವೆ. ಭಾರತ ಆಧ್ಯಾತ್ಮಸಂಸ್ಕೃತಿ ಮರುಹುಟ್ಟನ್ನು ಚಿಂತಿಸುವ ಯತ್ನದಲ್ಲಿ ಅವರ ಪ್ರಯತ್ನ ಕಂಡುಬರುತ್ತದೆ. ಲೌಕಿಕ ಸತ್ಯಾಸತ್ಯತೆಗಳಲ್ಲಿ ಉತ್ತಮವೆನಿಸುವುದನ್ನು ಸಂಸ್ಕೃತಿಯೆಂದು ಕರೆದು, ಮನುಷ್ಯನು ಮಾನವೀಯತೆಯೊಂದಿಗೆ ಬದುಕಬೇಕಾದರೆ, ಧಾರ್ಮಿಕ ಸನಾತನ ಪರಂಪರೆ ಅವನಿಗೆ ಪ್ರಭಾವ ಬೀರಿರಲೇಬೇಕು. ವಿಷ್ಣುವಿನ ಹತ್ತು ಅವತಾರಗಳನ್ನು ಈ ನಿಟ್ಟಿನಲ್ಲಿ ಅರ್ಥೈಸಿದ್ದಾರೆ. ಅನಾದಿಕಾಲದಿಂದ ಮನುಷ್ಯನ ಜೀವನವನ್ನು ಪಾವನವಾಗಿಸಿದ ಸೂತ್ರಗಳೆಲ್ಲವುಗಳ ಮೊತ್ತವನ್ನು ಸಂಸ್ಕೃತಿ ಎಂದು ಅವರು ವ್ಯಾಖ್ಯಾನಿಸಿ ಕರೆದಿದ್ದಾರೆ.

ಸಂಸ್ಕೃತಿಗೆ ಸಾವಿರದಷ್ಟು ವರ್ಷಗಳ ಇತಿಹಾಸವುಂಟಷ್ಟೆ. ಕಾಲ ಗತಿಸಿದರೂ ಸಂಸ್ಕೃತಿ ಗತಿಸದು. ಅದು ನಿತ್ಯ ನಿರಂತರವಾದ್ದು. ಮಾನವ ಇತಿಹಾಸದ ಪರಿಪ್ರೇಕ್ಷದ ಸುತ್ತ ಸಂಸ್ಕೃತಿಯ ಕವಚವಿದೆ. ಸಂಸ್ಕೃತಿ ಉತ್ತಮ ಸಂಸ್ಕಾರವುಳ್ಳದ್ದು. ಆ ಉತ್ತಮ ಸಂಸ್ಕಾರವು ಅಧ್ಯಾತ್ಮದ ಗರ್ಭದಲ್ಲಿದೆ ಎನ್ನುವ ಪಂಡಿತ ಮದನಮೋಹನ ಮಾಲವೀಯ ಅವರ ವ್ಯಾಖ್ಯೆಯನ್ನೇ ಡಾ. ಸರ್ವೆಪಲ್ಲಿ ರಾಧಾ ಕೃಷ್ಣನ್ ಪುನರುಚ್ಚರಿಸಿದ್ದಾರೆಂದು ತೋರುತ್ತದೆ. ಒಟ್ಟಾರೆಯಾಗಿ ಆಧ್ಯಾತ್ಮಿಕ ಸಂಸ್ಕೃತಿ ಸಂಕಥನ ಚಿಂತನೆಗಳು ಅಲೌಕಿಕ ಜೀವನಕ್ಕೆ ಬೆಲೆ ಕೊಡುತ್ತ, ಮೋಕ್ಷದ, ಆದರ್ಶದ ಭಾವನೆಗಳಲ್ಲಿ ಸಂಸ್ಕೃತಿಯನ್ನು ವ್ಯಾಖ್ಯಾನಿಸಿಕೊಳ್ಳುವ ಪ್ರಯತ್ನ ಮಾಡುತ್ತವೆ.

ಚಾರಿತ್ರಿಕ ಸಂಸ್ಕೃತಿ ಸಂಕಥನವು ಇತಿಹಾಸದ ಪುನರಾವಲೋಕನವನ್ನು ಮುಖ್ಯ ಆಧಾರವನ್ನಾಗಿ ಸ್ವೀಕರಿಸಿರುತ್ತದೆ. ಇತಿಹಾಸವನ್ನು ಹಿಂದಿರುಗಿ ನೋಡುವುದರ ಜೊತೆ-ಜೊತೆಗೆ ಸಂಸ್ಕೃತಿಯನ್ನು ವಿವರಿಸಿಕೊಳ್ಳುವ ಪ್ರಯತ್ನ ಇಲ್ಲಿ ಪ್ರಾಧಾನ್ಯತೆ ಪಡೆದು ಮುಖ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೆಹರು ಅವರ ಚಿಂತನೆಯನ್ನು ಸ್ಥೂಲವಾಗಿ ಗ್ರಹಿಸಲಾಗಿದೆ.

ಪಂಡಿತ ಜವಹಾರಲಾಲ್ ನೆಹರು ಮುತ್ಸದ್ದಿ ರಾಜಕಾರಣಿ. ಭಾರತೀಯ ಸಂಸ್ಕೃತಿ, ಕಲೆ, ಇತಿಹಾಸದ ಬಗ್ಗೆ ತಮ್ಮದೇ ಆದ ನಿಲುವುಗಳನ್ನು ಹೊಂದಿದ್ದರು. ಅವರು ಪಾಶ್ಚಾತ್ಯ ಆಧುನಿಕ ದೃಷ್ಟಿ ಹಾಗೂ ಪೌರಾತ್ಯ ತಾತ್ವಿಕ ದೃಷ್ಟಿಗಳೆರಡರಲ್ಲಿ ಏಕತ್ವ ಪಡೆದಿದ್ದರು. ಅವರ 'ಭಾರತ ದರ್ಶನ ಭಾಗ-೧' (Discovery of India) ಗ್ರಂಥದಲ್ಲಿ ಇಡೀ ವಿಶ್ವಕ್ಕೆ ಬೆಳಕಾಗಿದ್ದ ಶಕ್ತಿಯಾವುದು? ಅದನ್ನು ಹೇಗೆ ಗಳಿಸಿತ್ತು? ಹಾಗೂ ಅದನ್ನು ಹೇಗೆ ಕಳೆದುಕೊಳ್ಳಲಾಯಿತು? ಯಾವ ದೌರ್ಬಲ್ಯಗಳಿಂದ ವಿದೇಶಿ ಜನರ ದಾಳಿಗಳಿಗೆ ಭಾರತವು ತುತ್ತಾಯಿತು ಎಂಬುದನ್ನು ಆಳವಾಗಿ ವಿವೇಚಿಸಿದ್ದಾರೆ.

'ಹಿಂದೂಧರ್ಮ' ಎಂದರೇನು? ಎಂಬ ಬಗ್ಗೆ ಈ ರೀತಿ ಹೇಳುತ್ತಾರೆ. ಹಿಂದೂಧರ್ಮ ಮತ ದೃಷ್ಟಿಯಿಂದ ಅಸ್ಪಷ್ಟ ಹಾಗೂ ಅನಿರ್ದಿಷ್ಟ; ಬಹುಮುಖಿ; ಯಾರಿಗೆ ಏನು ಬೇಕಾದರೂ ಆಗಿ ಕಾಣಬಹುದು. ಅದರಲ್ಲಿ ಅತ್ಯುತ್ಕೃಷ್ಟ-ಕನಿಷ್ಟ ಎಂಬ ಸಂಪ್ರದಾಯಗಳಿವೆ. ಅದರ ಮುಖ್ಯ ತಿರುಳು ತಾನೂ ಬಾಳಿ ಇತರರು ಬಾಳಲ್ಲೆಂಬುದು. ಅದರ ಹೆಗ್ಗುರುತು ಸತ್ಯವೊಂದೇ. ಬೌದ್ಧ ಜೈನ ಮತಗಳು ಹಿಂದೂಮತಗಳಲ್ಲ; ವೈದಿಕ ಧರ್ಮವಂತೂ ಖಂಡಿತ ಅಲ್ಲ (ಪು.೫೬). ಆದ್ದರಿಂದ 'ಭಾರತೀಯ ಸಂಸ್ಕೃತಿ'ಯನ್ನು 'ಹಿಂದೂ ಸಂಸ್ಕೃತಿ' ಎಂದು ವ್ಯಾಖ್ಯಾನಿಸುವುದೂ ವಿವರಿಸುವುದೂ ತಪ್ಪು. ಪುರಾತನ ಗ್ರಂಥಗಳಲ್ಲಿ ಕಾಣುವ ವಿವಿಧ

ಭಾವನೆಗಳೇ ಆ ಸಂಸ್ಕೃತಿಯ ಮುಖ್ಯ ಸಂದೇಶವಾದರೂ ಅದನ್ನು 'ಹಿಂದೂ' ಎಂದು ಕರೆಯುವುದು ಸರಿಯಲ್ಲ. ಸನಾತನ ಧರ್ಮ ಮತ್ತು ದರ್ಶನಗಳು ಒಟ್ಟು ಜೀವನದ ಮಾರ್ಗಸೂಚಿಯಾಗಿದ್ದಾಗ, ಹಿಂದೂ ಧರ್ಮ ಮತ್ತು ಭಾರತೀಯ ಸಂಸ್ಕೃತಿ ಒಂದೇ ಎನ್ನಬಹುದು. ದರ್ಶನ ದೃಷ್ಟಿಯಿಂದಲೇ ಭಾರತೀಯ ಸಂಸ್ಕೃತಿ ಮತ್ತು ಜೀವನ ಪ್ರಗತಿಗೆ ಮುಖ್ಯ ಕಾರಣವಾಗಿದೆ. ಪ್ರತಿ ಪರದೇಶದ ದಾಳಿಯಿಂದ ನಮ್ಮ ಸಂಸ್ಕೃತಿಯು ಆ ಧಾಳಿಯನ್ನು ಎದುರಿಸಲು ಅಂತರ್ಗತ ಮಾಡಿಕೊಳ್ಳುವ ಒಂದು ಹೊಸ ಶಕ್ತಿ ಅದರ ಅಂತರಂಗದಲ್ಲಿ ಹುಟ್ಟುತ್ತಿತ್ತು ಎನ್ನುತ್ತಾರೆ.

ಭಾರತೀಯ ಸಂಸ್ಕೃತಿಯು ಜೀವನ ನಿರಸನ ಭಾವನೆಯನ್ನು ಹೊಂದಿದೆ ಎಂಬ ಅಭಿಪ್ರಾಯವನ್ನು ನೆಹರು ಬಲವಾಗಿ ಅಲ್ಲಗಳೆಯುತ್ತಾರೆ. ಪರಲೋಕದ ಚಿಂತನೆಯಲ್ಲಿಯೇ ಮಗ್ನವಾದ ಯಾವ ಸಂಸ್ಕೃತಿಯು ಸಾವಿರಾರು ವರ್ಷಗಳು ಬಾಳಿ ಬದುಕಲು ಸಾಧ್ಯವಿಲ್ಲ (ಪುಟ ೬೩). ಭಾರತದ ಮೇಲೆ ಎಷ್ಟೆಲ್ಲ ಧಾಳಿಗಳು ನಡೆದಿದ್ದರೂ, ವಿವಿಧ ದೇಶಗಳ ಸಂಪರ್ಕವಿದ್ದಾಗಲೂ ' ಮೂಲ ಸಂಸ್ಕೃತಿ 'ಉಳಿದಿರಬೇಕಾದರೆ ಆ ರೀತಿ ಉಳಿಯಲು ಅದಕ್ಕೆ ಒಂದು ಅಮೃತತತ್ವವನ್ನು ಕೊಟ್ಟು ಜೀವನ ರಹಸ್ಯವನ್ನರಿಯುವಂತೆ ಮಾಡಿದ ಯಾವುದೋ ಒಂದು ಅಂತಶ್ಶಕ್ತಿ ಆ ಸಂಸ್ಕೃತಿಯೊಳಗೆ ಇರಬೇಕು. ಏಕೆಂದರೆ: ಅದರ ಈ ಮೂರು, ನಾಲ್ಕು ಅಥವಾ ಸಾವಿರ ವರ್ಷಗಳ ಸಾಂಸ್ಕೃತಿಕ ಪ್ರಗತಿ ಮತ್ತು ಅವಿಚ್ಛಿನ್ನತೆಯು ಅದ್ಭುತವಾಗಿವೆ (ಪುಟ ೬೮) ಎಂದು ಅಭಿಪ್ರಾಯಪಡುತ್ತಾರೆ.

ನೆಹರು 'ಭಾರತೀಯ ಸಂಸ್ಕೃತಿ' ಯ ಬೇರನ್ನು ಕಂಡುಕೊಳ್ಳುವುದು ಅದರ ಚಾರಿತ್ರಿಕ ಏಕತೆಯ ನಿಟ್ಟಿನಲ್ಲಿ. ಪಾರಂಪರಿಕ ಮೌಲ್ಯಗಳು ಯಾರ ಪ್ರವೇಶದಿಂದಾಗಲೀ, ಯಾವ ಪ್ರಭಾವದಿಂದಾಗಲೀ ಬೇರೆಯಾಗದೆ ಉಳಿದು ತಾತ್ಕಾಲಿನ ಬದುಕಿಗೆ ಹೊಂದಿಕೆಯಾಗುವಂತೆ ಬದಲಾಗುತ್ತದೆ ಮಾತ್ರವಲ್ಲ; ಸನಾತನತ್ವವನ್ನು ಅನೂಚಾನವಾಗಿ ಉಳಿಸಿಕೊಂಡು ಹೋಗುತ್ತಲೇ ಇರುತ್ತದೆ. ಇಂತಹ ಪಾರಂಪರಿಕ ಮೌಲ್ಯಗಳ ಒಟ್ಟು ಮೊತ್ತವನ್ನು' ಭಾರತೀಯ ಸಂಸ್ಕೃತಿ ' ಎಂದು ಕರೆಯಬಹುದೆಂದು ಹೇಳುತ್ತಾರೆ.

ಈ ರೀತಿಯ ವ್ಯಾಖ್ಯೆಯನ್ನು ಪರಿಶೀಲಿಸಿದಲ್ಲಿ ಕೆಲವು ಸತ್ಯಾಂಶಗಳು ಹೊರಡುತ್ತವೆ. ಭಾರತದ ಮೇಲೆ ಗ್ರೀಕರು, ಹೂಣರು, ಆಫ್‌ಘನ್ನರು, ಶಕರು, ಮೊಗಲರು, ಅವರಾದ ತರುವಾಯ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಹಾಗೂ ಬ್ರಿಟಿಷರು ಇಷ್ಟೆಲ್ಲ ಹೊರಗಣ ಸಂಸ್ಕೃತಿ ದಾಳಿಮಾಡಿದಾಗಲೂ ಭಾರತದ ಅತ್ಯುತ್ತಮ ಮೌಲ್ಯಗಳು ಜನರ ನಡವಳಿಕೆಯಲ್ಲಿ ಉಳಿದಿವೆ. ಇಂತಹ ಅಮೃತತತ್ವವನ್ನು ನೆಹರು ಭಾರತೀಯ ಸಂಸ್ಕೃತಿ ಎಂದು ಹೇಳಿದ್ದಾರೆ.

ಸಾಮಾಜಿಕ ಸಂಸ್ಕೃತಿಯ ಸಂಕಥನವನ್ನು ಜೆ.ಪಿ. ಲೋಹಿಯಾ, ಆಚಾರ್ಯ ನರೇಂದ್ರದೇವ, ಗಾಂಧೀಜಿ ಮುಂತಾದವರ ಚಿಂತನೆಯ ವಿಷಯಗಳಲ್ಲಿ ಇದನ್ನು ಗ್ರಹಿಸಬಹುದು. ಇಂದಿನ ಸಮಾಜ ಸಮಸ್ಯೆಗಳ ಕುರಿತ ಚಿಂತನೆಯ ಮೂಲಬೇರುಗಳು ನಿನ್ನೆಯಲ್ಲಿರುತ್ತವೆ. ಸಾಮಾಜಿಕ ಅನಿಷ್ಟಗಳಿಗೆ ಸಾಮಾಜಿಕ ಕಾರ್ಯಕಾರಣ ಸರಪಳಿಯ ಕೊಂಡಿಗಳನ್ನು ತಿಳಿಯುವುದರ ಮೂಲಕ ಸಾಮಾಜಿಕ ಸಂಸ್ಕೃತಿಯ ಕುರಿತ ಚಿಂತನೆಯು ರೂಪು ಪಡೆಯುತ್ತದೆ. ಇದು ವಿವಿಧ ಮಜಲುಗಳನ್ನು ಹೊಂದಿರುತ್ತದೆ. "ಯಾವುದೆ ಕಾಲದಲ್ಲಾಗಲೀ ಯಾವುದೆ ದೇಶದಲ್ಲಾಗಲೀ, ಮಾನವರು ಮಾನವೀಯತೆಯ ಬಗೆಗೆ ಮಾಡುವ ಚಿಂತನೆಯು ಸಾಮಾಜಿಕ ಚಿಂತನೆ ಎನಿಸಿಕೊಳ್ಳುತ್ತದೆ" ಎಂದು ಜಿ.ಬಿ.ಗಿಟ್ಲರ್ ಅಭಿಪ್ರಾಯ ಪಡುತ್ತಾರೆ.

ಪ್ರತಿಯೊಂದು ಸಮಾಜವು ಪರಿಪೂರ್ಣವಾಗಿ ಬೆಳೆದಿರುವುದಿಲ್ಲ. ವಿಘಟನೆ ಮತ್ತು ಪ್ರಕ್ರಿಯೆ ನಿರಂತರವಾಗಿರುತ್ತದೆ. ಹಳೆಯ ಮೌಲ್ಯಗಳನ್ನು ವಿರೋಧಿಸುವ ಹೊಸ ಮೌಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳುವ ಸಂಘರ್ಷ ಆರಂಭವಾಗುತ್ತದೆ. ಇಂತಹ ಸಂದರ್ಭದಲ್ಲಿ, ಸಮಾಜ ಚಿಂತಕರು ಅನೇಕ ಚಳುವಳಿಗಳ ಮೂಲಕ ಹೊಸ ವಿಚಾರಧಾರೆಯನ್ನು ರೂಪಿಸಲು ಪ್ರಯತ್ನಿಸಿರುವುದನ್ನು ಇತಿಹಾಸದುದ್ದಕ್ಕೂ ಕಾಣಬಹುದಾಗಿದೆ. ನರೇಂದ್ರದೇವ - ಅವರು ಮಾರ್ಕ್ಸ್‌ವಾದ ಭಾರತಕ್ಕೆ ಯಾವ ರೀತಿಯಿಂದಲೂ ಉತ್ತರಕೊಡಲಾರದು; ವ್ಯಕ್ತಿ ಮತ್ತು ಸಮಾಜದ ಬದಲಾವಣೆಗೆ ಸಮಾಜವಾದವೇ ಸರಿಯಾದ ದಾರಿಯೆಂದು ಗುರುತಿಸುತ್ತಾರೆ. ಸಂಸ್ಕೃತಿಯು ಮಾನವನಲ್ಲಿಯ ಸಾಮಾಜಿಕ ಅಭಿವ್ಯಕ್ತಿ ಮಾತ್ರವಲ್ಲದೆ ಅದರ ಪರಂಪರಾಗತ ಇತಿಹಾಸದುದ್ದಕ್ಕೂ ಮಾನವರು ಕೈಗೊಂಡ ಸಮಷ್ಟಿಸಾಧನೆ. ಸಂಸ್ಕೃತಿ ಪ್ರಗತಿ ಮತ್ತು ಸಮಾಜ ಬದಲಾವಣೆ ಇವುಗಳಲ್ಲಿ ಸಾಮ್ಯತೆ ಇದೆ. ಇದರಲ್ಲಿ ಯಾವುದೇ ವ್ಯತ್ಯಾಸವಾದರೂ ಸಮಾಜದ ಸ್ವಾಸ್ಥ್ಯ ಕೆಡುತ್ತದೆ. ಸಂಸ್ಕೃತಿಯ ಪುರೋಹಿತಗಾಮಿ ನಿಯಮವನ್ನು ವಿರೋಧಿಸುತ್ತ ಸಾಮಾಜಿಕ ಮಾನವೀಯತೆ ಭಾರತೀಯ ಸಂಸ್ಕೃತಿಯ ತಳಹದಿಯಾಗಬೇಕು ಎನ್ನುತ್ತಾರೆ.

ಇವರ ಸಮಕಾಲೀನರಾದ ಶ್ರೀ ಜಯಪ್ರಕಾಶ ನಾರಾಯಣ, ಶ್ರೀ ರಾಮಮನೋಹರ ಲೋಹಿಯ ಕೂಡ ಸಮಾಜವಾದದ ಚಿಂತಕರಾಗಿದ್ದು ಸಮಾಜದ ಚಿಂತನೆಗೆ ಅನೇಕ ಚಳುವಳಿಗಳ ಮೂಲಕ ಹೊಸ ಆಯಾಮುಗಳನ್ನು ನೀಡತೊಡಗಿದ್ದರು. ಒಟ್ಟಾರೆ ಈ ಸಮಾಜಸುಧಾರಕರು ಸಂಸ್ಕೃತಿಯನ್ನು ಜನತಾಂತ್ರಿಕತೆಯ ನೆಲೆಯಿಂದ ವಿವರಿಸಿಕೊಳ್ಳುವ ಪ್ರಯತ್ನವನ್ನು ಮಾಡಿದರೆಂದು ಹೇಳಬಹುದು.

ಈ ಶತಮಾನದ ಆರಂಭದ ದಶಕಗಳಲ್ಲಿ ಸಂಸ್ಕೃತಿ ಪದದ ಚಿಂತನೆ ಬೇರೆ ಬೇರೆ ಆಯಾಮಗಳನ್ನು ಪಡೆದುಕೊಂಡಿತು. ಭಾರತೀಯ ಭಾಷೆಗಳಲ್ಲೆಲ್ಲಾ ಸಂಸ್ಕೃತಿಯ ಬಗೆಗೆ ವ್ಯಾಪಕ ಚರ್ಚೆಗಳಾರಂಭವಾದವು.

ಅದು ಕೇವಲ ಪ್ರಚಲಿತ ಸಮಾಜದ ಚರ್ಚೆಗಳಲ್ಲ; ಬಹು ಪ್ರಾಚೀನವಾದ ಚರ್ಚೆ. ಕ್ರಿ.ಪೂ. ಶತಮಾನಗಳ ಭಾರತೀಯ ಸಂಸ್ಕೃತಿಯ ಚರ್ಚೆ ಆರಂಭವಾಯಿತು. ಸಂಸ್ಕೃತಿ (culture) ಮತ್ತು ನಾಗರೀಕತೆ (Civilization) ಈ ಎರಡು ಪರಿಭಾಷೆಗಳನ್ನು ಬೇರೆ ಬೇರೆ ಶಾಸ್ತ್ರೀಯ ಅಧ್ಯಯನಗಳ ನೆಲೆ ಹಿನ್ನೆಲೆಯಲ್ಲಿ ವ್ಯಾಪಕವಾಗಿ ಚರ್ಚೆಗಳು ನಡೆಯತೊಡಗಿದವು. ಸಮಾಜಶಾಸ್ತ್ರೀಯ, ಮಾನವಶಾಸ್ತ್ರೀಯ, ಮುಂತಾದ ಅಂತರ್‌ಶಿಸ್ತೀಯ ಅಧ್ಯಯನಗಳು ನಡೆಯತೊಡಗಿದವು. ಪ್ರಾದೇಶಿಕ ಹಾಗೂ ದೇಶೀಯಚಿಂತನೆಗಳು ಪ್ರಾದೇಶಿಕತೆಗೆ ಹೊಂದಿಕೊಂಡಂತೆ ನಡೆಯತೊಡಗಿದವು. ಭಾಷಾವಾರು ಪ್ರಾಂತ್ಯದ ಸಂಸ್ಕೃತಿ ಚಿಂತನೆಗಳು ಬಂದದ್ದು ಈ ನಿಟ್ಟಿನಲ್ಲಿಯೇ. ಹೀಗೆ ವಿಭಿನ್ನ ದೃಷ್ಟಿಕೋನದಿಂದ ಸಂಸ್ಕೃತಿ ವ್ಯಾಖ್ಯಾನ ಈ ಶತಮಾನದ ಎರಡು ಮೂರನೆಯ ದಶಕಗಳಲ್ಲಿ ಆರಂಭವಾಯಿತು.

ಭಾರತವು ಬಹುಭಾಷೆಗಳ ಹಾಗೂ ಹಲವು ಸಂಸ್ಕೃತಿಗಳ ವೈವಿಧ್ಯದ ತವರಷ್ಟೆ. ರಾಷ್ಟ್ರದೊಳಗಣ ಭೂಪ್ರದೇಶ ಒಂದಾಗುವ ಮನಸ್ಸು ವಸಾಹತುಕಾಲಘಟ್ಟದ ಸಂದರ್ಭದಲ್ಲಿ ಜನರಲ್ಲಿ ಮೂಡತೊಡಗಿತು. ಭಾಷಾವಾರು ಪ್ರಾದೇಶಿಕ ಸಂಸ್ಕೃತಿಯ ರಚನೆಗೆ ಸ್ಥಳೀಯ ವಿದ್ವಾಂಸರು ಗಾಢವಾಗಿ ತೊಡಗಿದರು. ತನ್ಮೂಲಕ ಭಾಷಾವಾರು ಸಂಸ್ಕತಿಯ ಹಿರಿಮೆಯನ್ನು ಮೆರೆಸುತ್ತಾ ಪರಂಪರೆಯನ್ನು ವಿಜೃಂಭಿಸುತ್ತಾ ಹೊರಟರು. ಪರಸ್ಪರರ ಈ ಶೀತಲಸಮರದಲ್ಲಿ ' ಭಾರತೀಯ ಸಂಸ್ಕೃತಿ 'ಯಲ್ಲಿ ಹೊಸ - ಹೊಸ ಹೊಳಹುಗಳು ಕಂಡುಬರತೊಡಗಿದವು. ಆಯಾ ಭಾಷೆಯ ವಿದ್ವಾಂಸರು ತಮ್ಮ ಪರಂಪರೆ. ಸಂಸ್ಕೃತಿಯನ್ನು ಹುಡುಕಲು ಹೊರಟರು. ಇಂತಹವರೆಂದರೆ ಮಂ.ಗೋವಿಂದ ಪೈ. ಆಲೂರು ವೆಂಕಟರಾವ್, ದೇವುಡು, ಡಿ.ವಿ.ಜಿ, ಮುಳಿಯ ತಿಮ್ಮಪಯ್ಯ, ಶಂಬಾ ಜೋಶಿ ಮುಂತಾದವರು.

ಭಾರತೀಯ ಸಂಸ್ಕೃತಿಯ ಒಂದು ಅಂಗ ಕನ್ನಡ ಸಂಸ್ಕೃತಿ. ಈ ಪರಂಪರೆಗೆ ಇಂದು-ನಿನ್ನೆಯ ಇತಿಹಾಸವಿಲ್ಲ. ಈ ಇತಿಹಾಸದ ಹರಹು ದೀರ್ಘಕಾಲದಿಂದ ಇದೆ. ಹಿಂದೂ ಸಂಸ್ಕೃತಿಯಷ್ಟೇ ಹಳತಾದುದು ಕನ್ನಡ ಸಂಸ್ಕೃತಿ. ಇಂತಹ ವಿಷಯಗಳನ್ನು ಬೇರೆ ಬೇರೆ ಸಂಶೋಧಕರು ವಿಭಿನ್ನ ರೀತಿಯಲ್ಲಿ ಕಂಡುಕೊಂಡರು ಎಂಬುದನ್ನು ಇಲ್ಲಿ ಸ್ಥೂಲವಾಗಿ ಅವಲೋಕಿಸಬಹುದು.

ಡಿ.ವಿ.ಜಿ ಅವರಲ್ಲಿ ಸಂಸ್ಕೃತಿ ಕುರಿತಾದ ಚರ್ಚೆ ಸಮನ್ವಯ ದೃಷ್ಟಿಯುಳ್ಳದ್ದು. ಅದು ಒಂದು ಬಗೆಯ ಆತ್ಮಶಿಕ್ಷಣ, ಬರಿಯ ಮನಸ್ಸಿನ ವ್ಯಾಪಾರವಲ್ಲ. ಒಬ್ಬ ವ್ಯಕ್ತಿ ಸುಸಂಸ್ಕೃತನಾಗಬೇಕಾದರೆ, ಸಮಾಜ ಜೀವಿಯಾಗಿ ಮಾತ್ರ ಸಾಧ್ಯ. ಬುದ್ಧಿ, ಹೃದಯವ್ಯಾಪಾರಗಳ ಸಮರಸವೂ ಪರಿಪೂರ್ಣವೂ ಆದ ಹೊಂದಾಣಿಕೆ ಅಥವಾ ಸಮನ್ವಯ ಅಗತ್ಯ. ಮ್ಯಾಥ್ಯೂ ಆರ್ನಾಲ್ಡ್, ಎಮರ್‌ಸನ್, ಕಾರ್ಡಿನಲ್

ನ್ಯೂಮನ್ ಇವರ ಸಂಸ್ಕೃತಿ ವ್ಯಾಖ್ಯಾನಗಳನ್ನು ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿಟ್ಟು ಡಿ.ವಿ.ಜಿ.ಯವರು ವಿಶ್ಲೇಷಣೆ ಮಾಡುತ್ತಾರೆ. "ಆತ್ಮದ ಅನ್ವೇಷಣೆಯೇ ಜೀವನದ ಗುರಿ" ಎಂಬುದೇ ಸಂಸ್ಕೃತಿಯ ಪರಿಪೂರ್ಣತ್ವ ಎಂದು ಡಿ.ವಿ.ಜಿ. ಗ್ರಹಿಸಿದ್ದಾರೆ. ಮ್ಯಾಥ್ಯೂ ಅರ್ನಾಲ್ಡ್‌ನು ಮನುಷ್ಯ ಸ್ವಭಾವಕ್ಕೆ ಸೌಂದರ್ಯವನ್ನು ಬೆಲೆಯನ್ನು ಕೊಡುವ ಎಲ್ಲಾ ಶಕ್ತಿಗಳ ಸುಸಂಗತ ವಿಕಾಸವೇ ಸಂಸ್ಕೃತಿ ಎನ್ನುತ್ತಾ ವೈಯಕ್ತಿಕ ವಿಕಾಸಕ್ಕೆ ಬೆಲೆಯನ್ನು ನೀಡಿದರೆ, Study of perfection ಎನ್ನುವ ಪೂರ್ಣತೆಯ ಕಲ್ಪನೆಯನ್ನು ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ಇಟ್ಟು ನೋಡುವುದು ಡಿ.ವಿ.ಜಿ.ಯವರ ಉದ್ದೇಶವಾಗಿತ್ತು. ಡಿ.ವಿ.ಜಿ.ಯವರಿಗೆ ಸಮನ್ವಯ ಎಂದರೆ ಅನುಗೂಡಿರುವುದು. ನಮ್ಮ ವಿಚಾರಕ್ಕೆ ಬರುವ ಪ್ರತಿಯೊಂದು ಪ್ರಶ್ನೆಯಲ್ಲಿಯೂ ಭಿನ್ನಾಭಿಪ್ರಾಯಗಳು ಕಾಣಬರುವುದು ಸಹಜ. ಹಾಗೆ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಅವುಗಳನ್ನು ಪರೀಕ್ಷಿಸಿ ಅದರಲ್ಲಿನ ಸತ್ಯಾಂಶಗಳನ್ನು ಶೇಖರ ಮಾಡಿ ಒಂದು ಹದದಲ್ಲಿ ಅವುಗಳನ್ನು ಹೊಂದಿಸಬೇಕು ಅಂಥ ಹದದ ಹೊಂದಾಣಿಕೆಯೇ ಸಮನ್ವಯ ಎನ್ನುತ್ತಾರೆ. ಮೇಲಿನ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳನ್ನು ಪುರಾಣ ಪ್ರಸಿದ್ಧ ಪುರುಷರಾದ ವಾಲ್ಮೀಕಿ, ಮನು, ಭಾಸ ಇವರ ಪರಿಸರದಲ್ಲಿಯೂ ಪ್ರಸ್ತಾಪಿಸುತ್ತಾ ರಾಮ, ಭರತ, ಅರ್ಜುನ ಮುಂತಾದವರ ಪಾತ್ರ ವಿಶ್ಲೇಷಣೆಯನ್ನು ಡಿ.ವಿ.ಜಿ.ಯವರು ಮಾಡುತ್ತಾರೆ.

ದೇವುಡು ನರಸಿಂಹ ಶಾಸ್ತ್ರಿಗಳು ಭಾರತೀಯ ಸಂಸ್ಕೃತಿಯನ್ನು ವೈದಿಕ ಸಂಸ್ಕೃತಿಯೇ ಎಂದು ಗ್ರಹಿಸುತ್ತಾ ಅದು ಎಲ್ಲಾ ಉಳಿದ ಪ್ರಾದೇಶಿಕ ಸಂಸ್ಕೃತಿಗಳಿಗೆ 'ಮಾರ್ಗ' ಪರಂಪರೆಯದಾದ್ದು ಎಂದು, ಉಳಿದ ಸಂಸ್ಕೃತಿಗಳು 'ದೇಶಿ' ಪರಂಪರೆಯವು ಎಂದು ಗುರುತಿಸುತ್ತಾರೆ. ಸಾಮಾನ್ಯವಾಗಿ ಈ ರೀತಿ ಅಭಿಪ್ರಾಯಗಳು ವ್ಯಾಖ್ಯಾನಗಳಾಗಿ ನಿಲ್ಲಬಹುದು ಅಷ್ಟೇ.

ಕಪಟರಾಳ ಕೃಷ್ಣರಾವ್ ಅವರು ಒಂದು ದೇಶದ ಸಂಸ್ಕೃತಿಯೆಂದರೆ, ಆ ದೇಶದ ಭಾಷೆ, ತತ್ವಜ್ಞಾನ, ರಾಜ್ಯ ಶಾಸನ ಪದ್ಧತಿ, ಸಂಪ್ರದಾಯ, ವಾಸ್ತು ಶಿಲ್ಪ, ಚಿತ್ರಕಲೆ ಎಂದು ಗುರುತಿಸುತ್ತಾ ಬಾಹ್ಯರೂಪದ ಆಚರಣೆಗಳಿಂದ ಜನಜೀವನದ ಎಲ್ಲಾ ಅವಯವಗಳನ್ನು ಬಿಡಿ-ಬಿಡಿಯಾಗಿ ಮತ್ತು ಒಟ್ಟಾಗಿ ಅಭ್ಯಾಸಮಾಡಿ ಸಂಸ್ಕೃತಿಯ ಚರಿತ್ರೆಯನ್ನು ಕಂಡುಹಿಡಿಯಬೇಕಾಗುತ್ತದೆ ಎನ್ನುತ್ತಾರೆ. ದೇವುಡು ನರಸಿಂಹ ಶಾಸ್ತ್ರಿಗಳಂತೆ ಆಲೂರು ವೆಂಕಟರಾವ್ ಅವರು ಕೂಡಾ ವೈದಿಕ ಸಂಸ್ಕೃತಿಯನ್ನೇ ಹಿಂದೂ (ಭಾರತೀಯ) ಸಂಸ್ಕೃತಿಯೆಂದು ಗ್ರಹಿಸುತ್ತಾ ಕರ್ನಾಟಕ ಅದರ ಒಂದು ಉತ್ತಮಾಂಗ. ಕರ್ನಾಟಕ ಸಂಸ್ಕೃತಿಗೆ ಸೇವೆ ಸಲ್ಲಿಸುವುದರ ಮೂಲಕ ಹಿಂದೂ ಸಂಸ್ಕೃತಿಗೆ ಸೇವೆಸಲ್ಲಿಸುತ್ತಿರುವೆ ಎಂದು ಹೇಳಿಕೊಳ್ಳುತ್ತಾರೆ.

ಮಾಸ್ತಿಯವರು ಸಂಸ್ಕೃತಿಯನ್ನು ದೇವಸ್ಥಾನಗಳಲ್ಲಿ, ಆಚರಣೆಗಳಲ್ಲಿ, ಹಳ್ಳಿಯ ಜನರಲ್ಲಿ, ಅವರ ಮಾತಿನಲ್ಲಿ ಗುರುತಿಸುತ್ತಾರೆ. ಜೈನ, ಬೌದ್ಧ, ವೀರಶೈವ ಮುಂತಾದ ಧರ್ಮಗಳು ಸ್ವತಂತ್ರವಾದವಲ್ಲ. ಅವು ಹಿಂದೂಧರ್ಮದೊಳಗಿಂದಲೇ ಮೂಡಿಬಂದವುಗಳು. ಪಾಶ್ಚಾತ್ಯ ವಿದ್ವಾಂಸರು ಕ್ರೈಸ್ತ ಮತ್ತು ಮುಸ್ಲಿಂ ಧರ್ಮಗಳನ್ನು ಬೇರೆಯೆಂದು ಎಣಿಸುವಂತೆ ಸನಾತನ ಧರ್ಮವನ್ನು ಬೇರೆ ಬೇರೆ ಎಂದು ತಪ್ಪಾಗಿ ಗ್ರಹಿಸಿದ್ದಾರೆ. ಈ ಧರ್ಮ ಒಂದು ಜಾತಿಗೆ ಸೇರಿದುದಲ್ಲ. ಅಂತಯೇ 'ಬ್ರಾಹ್ಮಣಿಕಲ್' ಎಂಬುದನ್ನು ಮಾಸ್ತಿ ಒಪ್ಪುತ್ತಿರಲಿಲ್ಲ. ''ವೇದಾಂತದ ಕಡೆಯ ಎಲ್ಲೆಯಲ್ಲಿ ಸುಳಿಯುವ ಜ್ಞಾನಿಯಿಂದ ಹಿಡಿದು ಸಾಮಾನ್ಯ ಜೀವನದಲ್ಲಿ ಬೀಳುತ್ತಾ-ಏಳುತ್ತಾ ದೇವರನ್ನು ಒಬ್ಬ ಮನುಷ್ಯನಂತೆ ಭಾವಿಸುವ ಅವನ ಕೃಪೆಯನ್ನು ಸಂಪಾದಿಸುವುದಕ್ಕೆ ಅವನಿಗೆ ತೆಂಗಿನಕಾಯಿ ಹೊಡೆಯಬೇಕು ಎನ್ನುವ ಸಾಮಾನ್ಯ ಜ್ಞಾನಿಯವರೆಗೆ ಎಲ್ಲಾ ಮಟ್ಟದ ಸಂಸ್ಕಾರದ ಜನಕ್ಕೂ ಸ್ಥಳವಿದೆ. ಮಾನವನ ಹೃದಯದ ಎಲ್ಲಾ ಭಾಗಕ್ಕೂ ಒಂದು ಅವಕಾಶವಿದೆ; ಅಲ್ಲಿಂದ ಮುಂದಕ್ಕೆ ಒಯ್ಯಲು ದಾರಿಯಿದೆ''. ಈ ಎಲ್ಲಾ ಉತ್ತಮಾಂಶಗಳನ್ನು ಒಳಗೊಂಡು ಹೆಚ್ಚು ಜನರದಾಗಿ ನಿಂತದ್ದನ್ನು 'ಸ್ಮಾರ್ತಮತ' ಎಂದು ಕರೆಯುತ್ತಾರೆ. ನಾಗರೀಕತೆಯಲ್ಲಿ ಸಂಸ್ಕೃತಿ ಇರುತ್ತದೆ. ನಾಗರೀಕತೆ ನಾಶವಾದಂತೆ, ಸಂಸ್ಕೃತಿ ಬೇರೆ ದೇಹವನ್ನು ಹುಡುಕಿಕೊಳ್ಳುತ್ತದೆ ಎನ್ನುತ್ತಾ 'ಸಂಸ್ಕೃತಿ' ಅವಿನಾಶಿಯಾದುದ್ದು; ಅಂತರಂಗಕ್ಕೆ ಸಂಬಂಧಿಸಿದ್ದು ಎನ್ನುವ ಅಭಿಪ್ರಾಯಕ್ಕೆ ಬರುತ್ತಾರೆ.

ಶ್ರೀ ಶಿವರಾಮ ಕಾರಂತರು 'ಯಕ್ಷಗಾನ ಬಯಲಾಟ' ಕೃತಿಯ ಮುನ್ನುಡಿಯಲ್ಲಿ ಸಂಸ್ಕೃತಿ ಎಂಬುದು ಮಾನವನ ಸಂಪ್ರದಾಯಿಕ ನಡವಳಿಕೆ-ಶೀಲಗಳಿಗೆ, ಭಾವ ಪ್ರಕಟಣೆಗಳಿಗೆ ಬರುವಂಥ ಒಂದು ವಿಶಿಷ್ಟ ರೂಪ ಎಂದಿದ್ದಾರೆ. ಇದು ಒಂದೆರಡು ದಿನಗಳಲ್ಲಿ ಮೊಳೆತು ಚಿಗುರಿ ಹೂಬಿಟ್ಟು ಫಲವನ್ನೀಯುವ ಘಟನೆಯಲ್ಲ. ಬದಲು ಅನೇಕ ಶತಮಾನಗಳಲ್ಲಿ ಅಲ್ಲಿಯ ಜನಜೀವನವು ನಡೆದು ಬಂದುದರ ಪರಿಣಾಮ ಎನ್ನುತ್ತ ಅಂತರಂಗದ ಪ್ರಾಮುಖ್ಯತೆಗೆ ಬೆಲೆ ನೀಡುತ್ತಾರೆ. ಹಾಗೂ ಸಂಸ್ಕೃತಿ ರೂಪ ಪಡೆಯಲು ಒಂದು ಪರಿಸರ ಕಾಲ ಅವಶ್ಯವೆಂದು; ಅದರಲ್ಲಿ ಸಾಹಿತ್ಯ ಕಲೆಗಳು ಮತ - ಧರ್ಮಗಳು ಪ್ರಾಧಾನ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯ ಪಡುತ್ತಾರೆ.

ಡಾ. ಹೆಚ್. ತಿಪ್ಪೇರುದ್ರಸ್ವಾಮಿ ಅವರು '' ಕರ್ನಾಟಕ ಸಂಸ್ಕೃತಿ ಸಮೀಕ್ಷೆ ''ಯಲ್ಲಿ ಮಾನವನಿಗೆ ಅಂತರಂಗ - ಬಹಿರಂಗವೆಂಬ ಎರಡು ಮುಖಗಳಿವೆಯೆಂದು, ಅವೆರಡೂ ಭಿನ್ನವಾದ ಅರ್ಥವನ್ನು ಸೂಚಿಸುತ್ತವೆ ಎನ್ನುತ್ತಾರೆ. ಅಂತರಂಗವೆಂಬುದು 'ಸಂಸ್ಕೃತಿ'ಯಾದರೆ; ಬಹಿರಂಗ 'ನಾಗರೀಕತೆ' ಎಂದು ಸೂಚಿಸುತ್ತದೆ ಇವೆರಡಕ್ಕೂ ವ್ಯತ್ಯಾಸಗಳನ್ನು ಹೇಳುತ್ತ ಹೋಗುತ್ತಾರೆ. ನಾಗರೀಕತೆ ನಾಶವಾಗಬಹುದು;

ಸಂಸ್ಕೃತಿ ನಾಶವಾಗುವಂಥದ್ದಲ್ಲ ಅದು ಅಂತರಂಗಕ್ಕೆ ಸಂಬಂಧಿಸಿದ್ದು ಎಂಬ ಅಭಿಪ್ರಾಯವನ್ನು ಹೊಂದುತ್ತಾರೆ. ಡಾ. ಎಂ. ಚಿದಾನಂದ ಮೂರ್ತಿಯವರು ''ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'' ಗ್ರಂಥದಲ್ಲಿ ಸಂಸ್ಕೃತಿಗೆ ಸಂಬಂಧಿಸಿದ ವ್ಯಾಖ್ಯಾನಗಳನ್ನು ಕಲೆ ಹಾಕುತ್ತಾ ಪೌರಾತ್ಯ - ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೋಢೀಕರಿಸಿದ್ದಾರೆ. 'ಸಂಸ್ಕೃತಿಯೆಂದರೆ ಒಂದು ಸಮಾಜದ ಜೀವನ ವಿಧಾನ ಆಚಾರ ವ್ಯವಹಾರಗಳು ಅದರ ಸಂಸ್ಥೆಗಳು, ಆಲೋಚನ ವಿಧಾನಗಳು' ಎನ್ನುತ್ತ ಟಿ.ಎಸ್. ಇಲಿಯೆಟ್‌ನ ವಾದಸರಣಿಯನ್ನು ಅನುಸರಿಸುತ್ತಾರೆ.

ಡಾ. ಅರವಿಂದ ಮಾಲಗಿತ್ತಿ ಅವರು ಕನ್ನಡ ಸಂಸ್ಕೃತಿ ಚಿಂತಕರ ಚಿಂತನೆಗಳನ್ನು ಮೂರು ಭಾಗವಾಗಿ ಚರ್ಚಿಸಿದ್ದಾರೆ. ವಸ್ತುಪರ ಸಂಸ್ಕೃತಿ ಹುಡುಕಾಟದಲ್ಲಿ ಒಂದು ವಸ್ತುವಿನ ವಿಚಾರವನ್ನು ಶೋಧಿಸುವುದು ಮುಖ್ಯವಾಗಿರುತ್ತದೆ. ಇಲ್ಲಿ ವ್ಯಷ್ಟಿ ಪ್ರಜ್ಞೆಗಿಂತ - ಸಮಷ್ಟಿ ಪ್ರಜ್ಞೆಗೆ, ವಿಶಾಲ ಮನೋಭಾವಕ್ಕೆ ಹೊತ್ತುಕೊಡಲಾಗುತ್ತದೆ ಎಂದು ಗುರುತಿಸುತ್ತಾರೆ. ವಸಾಹತು ಕಾಲಘಟ್ಟದಲ್ಲಿ ಈ ರೀತಿಯ ಸಂಸ್ಕೃತಿ ಹುಡುಕಾಟ ನಡೆದಿತ್ತು ಎಂದು ಮೇಲಿನ ವಿದ್ವಾಂಸರ ಚಿಂತನೆಗಳಿಂದ ಸ್ಥೂಲವಾಗಿ ತಿಳಿಯಬಹುದು. ಈ ಮಾತು ಭಾರತೀಯ ಸಂಸ್ಕೃತಿ ಕುರುತಾದ ಚಿಂತನಕ್ಕೂ ಅನ್ವಯಿಸುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಶಂಬಾ ಈ ನಿಟ್ಟಿನಿಂದ ಹೊರತಾದವರಲ್ಲ ಎಂಬುದನ್ನು ಗಮನಿಸಬಹುದು.

ಪಾಶ್ಚಾತ್ಯ ಪೌರಾತ್ಯ ವಿದ್ವಾಂಸರು ಸಂಸ್ಕೃತಿ ರಚನೆಗೆ ' ಲಿಖಿತ ' ದಾಖಲೆಗಳನ್ನು ಆಕಾರಗಳನ್ನಾಗಿ ಬಳಸಿಕೊಂಡಿದ್ದಾರೆ. ಭಾರತೀಯ ಸಂಸ್ಕೃತಿ ವ್ಯಾಖ್ಯಾನ ಸಂದರ್ಭಗಳಲ್ಲಿ ವೇದಗಳಿಗೆ ಮಹತ್ವ ನೀಡಿರುವುದು ಕಾಣಬರುತ್ತದೆ. ಅಂದರೆ 'ಏಕಮುಖಿ 'ಸಂಶೋಧನೆಗೆ ಮೊರೆಹೋಗಲಾಗಿದೆ. ಬಹುತೇಕವಾಗಿ ಸಂಸ್ಕೃತಿ ಚಿಂತನೆಗಳು ಅನಾದಿ ಕಾಲದಿಂದ ಇಂದಿನವರೆಗೆ ಹೀಗೆಯೇ ಎಣಿಕೆಗೊಳ್ಳುತ್ತಿರುವುದು ಕಾಣಬರುತ್ತದೆ. ಇಂದಿನ ಸಂಸ್ಕೃತಿ ಆದರ್ಶವಾದ್ದೆಂದು, ಅದರ ಮೌಲ್ಯಗಳಿಗೆ ತಲೆಬಾಗುವುದು, ಅದನ್ನು ಬಾಳಿನ ಉಸಿರೆಂದು ನಂಬಿಕೊಂಡು ಬರಲಾಗುತ್ತದೆ. ಶಂಬಾ ಇಂತಹ ಕಾಲದಲ್ಲಿ ಬದುಕಿ ತಮ್ಮ ಚಿಂತನೆಯನ್ನು ಬೇರೊಂದು ನೆಲೆಯಲ್ಲಿ ಗ್ರಹಿಸಿರುವುದು ಆಶ್ಚರ್ಯವೆನಿಸುತ್ತದೆ.

ವಸಾಹತು ಕಾಲಘಟ್ಟದಲ್ಲಿ ಸಂಶೋಧನೆ ಎನ್ನುವುದು ರಾಜಕೀಯ ಇತಿಹಾಸದ ಮೂಲಕ ಸಮಾಜ ವ್ಯವಸ್ಥೆಯನ್ನು ನಿರ್ಮಿಸುವುದಾಗಿತ್ತು. ಇತಿಹಾಸವೆಂದರೆ, ರಾಜ - ಮಹಾರಾಜರ - ರಾಜಪರಿವಾರದವರ ಜೀವನವೇ ಆಗಿತ್ತು. ' ಮಾರ್ಗಮುಖಿ ' ಸಂಶೋಧನೆಯ ಸಂದರ್ಭದಲ್ಲಿ ' ದೇಶೀಮುಖಿ' ಸಂಶೋಧನೆಗೆ

ತೊಡಗಿದ್ದು ಶಂಬಾ ಅವರ ವಿಶಿಷ್ಟತೆ. ಅಲಿಖಿತ ದಾಖಲೆಗಳು, ಜನರ ನಡೆವಳಿ - ನುಡಿವಳಿ, ಪುರಾಣ, ಸ್ಥಳನಾಮಗಳ, ದೈವತಾ ಪ್ರತಿಮೆಗಳ ಮೂಲಕ ಮಾನವ ಇತಿಹಾಸವನ್ನು ನಿರ್ಮಿಸಿ ತೋರಿಸುತ್ತಾರೆ. ನವೋದಯದ ಭಾವುಕತೆಯಿಂದ ಹೊರಬಂದು ಕಂದಮಿಳರ ಜಲ- ಅಗ್ನಿ ತತ್ವದಿಂದ ನಮ್ಮ ಸಂಸ್ಕೃತಿ ನಿರ್ಮಾಣವಾಗಿದೆ. 'ಭಾರತದ ಸಂಸ್ಕೃತಿ 'ಯನ್ನು ಅವರ ದೈವತಾ ನೆಲೆಯಲ್ಲಿ ಕಾಣಬಹುದು. ವಿವಿಧ ಪಾತಳಿಗಳ ಮೂಲಕ 'ಕನ್ನಡ ಸಂಸ್ಕೃತಿ' ರೂಪಗೊಂಡಿದ್ದನ್ನು ಖಚಿತವಾಗಿ ನಿರೂಪಿಸುತ್ತಾರೆ.

ಶಂಬಾ ಅವರ ಸಂಸ್ಕೃತಿ ಗ್ರಹಿಕೆ ಮೇಲಿನವರಿಗಿಂತ ಸಂಪೂರ್ಣ ಭಿನ್ನ. ಅವರ ಪ್ರಕಾರ 'ಸಂಸ್ಕೃತಿ' ಯನ್ನು ತಪ್ಪು- ತಪ್ಪಾಗಿ ಗ್ರಹಿಸಲಾಗಿದೆ. ಅದರ ಅರ್ಥಗ್ರಹಣವನ್ನು ತಮಗೆ ಸರಿಕಂಡಂತೆ ಬಳಸಲಾಗಿದೆ. ಭೂತದಿಂದ ವರ್ತಮಾನವನ್ನು ಹೀಗೆಳೆಯುವುದಲ್ಲ, ವರ್ತಮಾನದ ಸಂಗತಿಗಳಿಂದ ಭೂತವನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗುತ್ತದೆ. ಏಕೆಂದರೆ, ನಿನ್ನೆ- ಇಂದು-ನಾಳೆ ಚಕ್ರೀಯ ಗತಿಯಲ್ಲಿರುವುದರಿಂದ ಇಂದಿನ ಮೂಲಕ 'ನಿನ್ನೆ 'ಯನ್ನು ಗ್ರಹಿಸುತ್ತಾ, 'ನಾಳೆ' ಯನ್ನು ಕುರಿತು ಚಿಂತಿಸುವುದು ಶಂಬಾ ಅವರ ಅಧ್ಯಯನದ ನಿಲುವಾಗಿದೆ.

ಶಂಬಾ ಸಂಸ್ಕೃತಿಯನ್ನು ಗ್ರಹಿಸುವುದು ವರ್ತಮಾನದ ನಡೆ - ನುಡಿವಳಿಗಳಲ್ಲಿ. ಭಾಷಿಕವಲ್ಲದ ಅಲಿಖಿತ ಸಾಮಗ್ರಿಗಳ ಮೂಲಕ ಸಂಸ್ಕತಿಯ ಅಂತರಂಗವನ್ನು ತಡಕಲು ಹೋಗಿರುವುದು ಅವರ ವಿಶಿಷ್ಟತೆ. 'ವೈದಿಕ ಸಂಸ್ಕೃತಿ' ಯೇ ಭಾರತೀಯ ಸಂಸ್ಕೃತಿ ಎಂಬ ಗ್ರಹಿಕೆಯನ್ನು ಅಲ್ಲಗೆಳೆಯುತ್ತಾ, ಅದನ್ನು ಹೇಗೆ ತಮ್ಮ ಅನುಕೂಲಕ್ಕಾಗಿ ತಿರುಚಲಾಗಿದೆ ಎಂಬುದನ್ನು ಸಿದ್ಧಪಡಿಸುತ್ತಾರೆ. ವೈದಿಕ (ವೇದ ಇತ್ಯಾದಿ) ಸಾಹಿತ್ಯದಲ್ಲಿ ಬರುವ ಅನೇಕ ಭಾಷಿಕ ಆಧಾರಗಳು, ಸ್ಥಳನಾಮಗಳು, ಪುರಾಣಗಳ ಮೂಲಕ ವೈದಿಕವಲ್ಲದ ಒಂದು ಸಂಸ್ಕೃತಿ ಈ ದೇಶದಲ್ಲಿತ್ತು ಎಂದೂ ಅದು ದ್ರಾವಿಡ ಜನಾಂಗವಾಗಿರಬೇಕೆಂದೂ ಅದನ್ನು 'ಕಂದಮಿಳ' ಎಂದು ಕರೆಯಬಹುದು ಎನ್ನುತ್ತಾರೆ. ' ಹಟ್ಟಿಕಾರ'ರೇ ಕಂದಮಿಳರು ಇವರೇ ಮೂಲಿಗರು ಎಂದು ಸಾಧಿಸುತ್ತಾರೆ. ದ್ರಾವಿಡ (ಕಂದಮಿಳ) ದೇವರುಗಳು ಆರ್ಯೀಕರಣ ಹೊಂದುತ್ತಾ ಅಲ್ಲಿಯವೇ ಆಗಿವೆ. ಅನೇಕ ಅಂಶಗಳು ಕೂಡ ಆರ್ಯೀಕರಣ ಹೊಂದಿರುವುದನ್ನು ಶಿವ - ರುದ್ರ, ಮಲ್ಲಾರಿ- ಖಂಡೋಬ, ಮಾಳ್ಹಸ ಮುಂತಾದ ದೇವರುಗಳ ನೆಲೆಯನ್ನು ಶೋಧಿಸುತ್ತಾ ಹೋಗುತ್ತಾರೆ. 'ಕಂದಮಿಳ' ಸಂಸ್ಕೃತಿ 'ಕನ್ನಡ ಸಂಸ್ಕೃತಿ'ಯೇ ಆಗಿದೆ ಎಂಬ ನಿರ್ಧಾರಕ್ಕೆ ಬರುತ್ತಾರೆ. ಇದರ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

ಸಮಾಜ ಮತ್ತು ಮಾನವ ಶಾಸ್ತ್ರೀಯ ಸಂಬಂಧದಲ್ಲಿ 'ಸಂಸ್ಕೃತಿ 'ಕುರಿತು ವಿಭಿನ್ನ ರೀತಿಯ ಅಭಿಪ್ರಾಯಗಳು ಹೊರಹೊಮ್ಮಿದವು. ವಸಾಹತು ಕಾಲಘಟ್ಟದ ಅನಂತರದ ಸಮಯದಲ್ಲಿ ಸಂಸ್ಕೃತಿಯ ಬಗೆಗಿನ ಆದರ್ಶಗಳನ್ನು ಬದಿಗಿಟ್ಟು ಅದರ ಆಳ, ಸ್ವರೂಪವನ್ನು ಅರಿಯುವ ಪ್ರಯತ್ನ ನಡೆತೊಡಗಿತು ಎನ್ನಬಹುದು. ಅದು ವರೆಗಿನ ಕೇವಲ 'ವೈದಿಕ' ಸಂಸ್ಕೃತಿಯೇ ಭಾರತೀಯ ಸಂಸ್ಕೃತಿ ಎಂಬ ಜ್ಞಾನವನ್ನು ವಿಮರ್ಶೆಗೆ ಒಡ್ಡಲಾಗಿತ್ತು. ವೈದಿಕವಲ್ಲದ ಸಂಸ್ಕೃತಿಯನ್ನು ಕುರಿತು ಶೋಧ ಆರಂಭವಾಗಿತ್ತು. ಈ ಹಿನ್ನೆಲೆಯಲ್ಲಿ ಜನಪದ ಸಂಸ್ಕೃತಿಯೊಂದರ ಹುಡುಕುವಿಕೆಗೆ ತೊಡಗಿದರು. ಮೂಲ ಸಂಸ್ಕೃತಿಯಿಂದ ಭಿನ್ನವಾದ ಸಂಸ್ಕೃತಿಗೆ ಪ್ರತಿ, ಉಪ, ಪರ್ಯಾಯ ಎಂಬಂಥ ಹಲವು ಪದಗಳು ಹುಟ್ಟಿಕೊಂಡವು. ತಮ್ಮ ಜನಾಂಗ, ಪರಿಸರ, ಪ್ರಾದೇಶಿಕತೆಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳತೊಡಗಿದಂತೆ ಈ ಪರ್ಯಾಯ ಪದಗಳು ಹುಟ್ಟಿರಬಹುದು ಎನಿಸುತ್ತದೆ. ಸದ್ಯಕ್ಕೆ ಆ ವಿಚಾರಗಳು ಹಲವಾರು ದಾರಿಗಳ ಆಕ್ರಮಣದಲ್ಲಿ ಇರುವುದರಿಂದ; ಶಂಬಾ ಜೋಶಿಯವರ ಸಮಕಾಲೀನ ಸಂಸ್ಕೃತಿ ಚಿಂತಕರ ಹಿನ್ನೆಲೆಯನ್ನು ನೋಡುವ ಪ್ರಯತ್ನ ಈವರೆಗೆ ಮಾಡಲಾಗಿದೆ.

ಅಧ್ಯಾಯ ೩

"ಕನ್ನಡ ಸಂಸ್ಕೃತಿ" - ವಿವಿಧ ಚಿಂತಕರು ಕಂಡಂತೆ

ಕನ್ನಡ ನಾಡು ಸಾವಿರಾರು ವರುಷಗಳ ಭವ್ಯ ಪರಂಪರೆಯನ್ನು ವೈವಿಧ್ಯಮಯವಾದ ಸಂಸ್ಕೃತಿಯನ್ನು ಹೊಂದಿದೆ. ಭಾರತಾಂತರ್ಗತವಾಗಿರುವ ಕನ್ನಡ ನಾಡು ನಿಸರ್ಗಸಂಪತ್ತು, ಕಲಾ ಶ್ರೀಮಂತಿಕೆಯನ್ನು ಮೆರೆದಿದೆ. ಹೀಗೆ ಪ್ರಾಚೀನ ಕಾಲದಿಂದ ರೂಪುಗೊಂಡು ಬಂದಂತಹ ಸಾಂಸ್ಕೃತಿಕ ಪರಂಪರೆಯನ್ನು ಕನ್ನಡಿಗರಾದ ನಾವು ಮರೆತಿದ್ದೇವೆ. ಇತಿಹಾಸದ ದಿನಗಳ ನೆನಪು ನಮಗಿಲ್ಲ. ನಿಜವಾದ ಇತಿಹಾಸವನ್ನು ದುರ್ಲಕ್ಷಿಸಿದ್ದರಿಂದಲೇ ನಾವಿಂದು ಈ ಕೀಳುಸ್ಥಿತಿಗೆ ತಲುಪಿದ್ದೇವೆ. ಅದರಲ್ಲೂ ಮುಖ್ಯವಾಗಿ "ನಾಡಿನ ಏಳಿಗೆಗಾಗಿ ಹೆಣಗುವವರಿಗೆ ಇತಿಹಾಸ -ಸಂಸ್ಕೃತಿಗಳ ಸಾಮಾನ್ಯ ಜ್ಞಾನವಾದರೂ ಇರಲೇಬೇಕು" ಎಂಬ ಶಂಬಾ ಅವರ ವಿಚಾರ ಪ್ರಸ್ತುತವಾದುದು. ವಸಾಹತು ಕಾಲಘಟ್ಟದಲ್ಲಿ ಇಂತಹ ಸಂದರ್ಭವೊಂದು ಭಾರತದೆಲ್ಲೆಡೆ ರೂಪುಗೊಂಡಿತು. ಈ ಹಿನ್ನಲೆಯಲ್ಲಿ ಕನ್ನಡದ ಬಗೆಗಿನ ಎಚ್ಚರವನ್ನು ಉಂಟುಮಾಡಿದವರಲ್ಲಿ ಕೆಲವರನ್ನು ಅವರ ಚಿಂತನೆಗಳನ್ನು ಉದಾಹರಿಸಬಹುದು. ಇದು ಅವರ ಬಗೆಗಿನ ವಿಮರ್ಶೆಯಾಗಲಿ, ವಿಶ್ಲೇಷಣೆಯಾಗಲಿ ಅಲ್ಲ. ಕೇವಲ ಅವರ 'ಕನ್ನಡ ಸಂಸ್ಕೃತಿ' ಕುರಿತಾದ ವಿಚಾರಗಳ ಸಮೀಕ್ಷೆಯಾಗಿದೆ.

೧. ಆಲೂರು ವೆಂಕಟರಾವ್ ಅವರ ವಿಚಾರಗಳು

ನಮ್ಮ ನಾಡಿನ ಭಾಷೆ-ಸಂಸ್ಕೃತಿ ವಿಚಾರಗಳ ನೆಲೆಯಲ್ಲಿ ಚಿಂತನೆ ಮಾಡಿದ ಪ್ರಮುಖ ಚಿಂತಕರಲ್ಲಿ ಶ್ರೀ ಆಲೂರು ವೆಂಕಟರಾವ್ ಅವರು ಪ್ರಮುಖರು. ಕರ್ನಾಟಕಕ್ಕೆ ಒಂದು ಪರಂಪರೆಯಿದೆ, ಇತಿಹಾಸವಿದೆ ಅದರ ವಿಸ್ಮೃತಿ ಇಲ್ಲದಿರುವುದೇ ಕನ್ನಡ ನಾಡಿನ ದುಸ್ಥಿತಿಗೆ ಕಾರಣವೆಂದು ಗುರುತಿಸಿ, ಇತಿಹಾಸದ ಮಹಾನ್ ವ್ಯಕ್ತಿಗಳನ್ನು, ಸಂಸ್ಕೃತಿ ಘಟನೆಗಳನ್ನು ಉದಾಹರಣೆಯಾಗಿ ನೀಡುತ್ತ ಕನ್ನಡಿಗರನ್ನು ಎಚ್ಚರಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು.

ಆಲೂರರು ಕನ್ನಡ-ಕನ್ನಡಿಗ-ಕರ್ನಾಟಕ ಎಂಬ ಪರಿಕಲ್ಪನೆಗಳನ್ನು, ಭಾಷೆ-ಜನ-ಪ್ರದೇಶ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ಕರ್ನಾಟಕದ ಮೂಲಕವೇ ಭಾರತ ಮತ್ತು ವಿಶ್ವವನ್ನೊಳಗೊಂಡ ದೃಷ್ಟಿಯನ್ನು ಹರಿಸಿದ್ದಾರೆ. "ನಾನು ಮೊದಲು ಕನ್ನಡಿಗ, ಆಮೇಲೆ ಭಾರತೀಯ" ಎಂಬುದು ಅವರ ನಿಲುವು. ಹರಿದು ಹಂಚಿಹೋದ ಕರ್ನಾಟಕವನ್ನು 'ಸಾಂಸ್ಕೃತಿಕ'ವಾಗಿ ಒಗ್ಗೂಡಿಸಲು ಪ್ರಯತ್ನಿಸುತ್ತ ಆ ಮೂಲಕ ರಾಜಕೀಯ ಏಕೀಕರಣವನ್ನು ಮಾಡಲು ಸಾಧ್ಯವೆಂದು ನಂಬಿದ್ದರು. 'ಕರ್ನಾಟಕತ್ವ' ಎಂಬುದು ಅವರ ವಿಶಿಷ್ಟ ವಿಚಾರ. ಅವರಿಗೆ "ಕರ್ನಾಟಕತ್ವವೆಂದರೆ ಕೇವಲ ದೇಶಾಭಿಮಾನವಲ್ಲ; ಕೇವಲ ಭಾಷಾಭಿಮಾನವಲ್ಲ; ಕೇವಲ ಇತಿಹಾಸ ಅಭಿಮಾನವಲ್ಲ. ಇವೆಲ್ಲವನ್ನೂ ಮೀರಿದ, ಇವೆಲ್ಲವನ್ನೂ ಒಳಗೊಂಡ ಪರಿಶುದ್ಧ ಭಾವನೆಯಾಗಿದೆ. ಕರ್ನಾಟಕ ಸಂಸ್ಕೃತಿ ಮರಾಠಿ ಸಂಸ್ಕೃತಿಗಿಂತ ಅಂತಸತ್ವದಲ್ಲಿ ಬಲಿಷ್ಠವಾದುದು ಮತ್ತು ಸಮೃದ್ಧವಾದುದು" ಮರಾಠಿಗಳ ಮಹಾ ಪ್ರಚಾರದಿಂದಾಗಿ ತನ್ನತನ ಸ್ವಾಭಿಮಾನ ಕಳೆದುಕೊಂಡ ಕನ್ನಡಿಗರನ್ನು ಎಚ್ಚರಿಸಲು "ಕರ್ನಾಟಕದ ಗತವೈಭವ" "ಕರ್ನಾಟಕದ ವೀರಗಲ್ಲುಗಳು" ಕೃತಿಗಳನ್ನು ಬರೆದು ಪ್ರಕಟಿಸಿದರು. ಬ್ರಿಟಿಷರ ಆಡಳಿತ ಕಾಲದಲ್ಲಿ ಕನ್ನಡ-ನಾಡು-ನುಡಿ-ಸಂಸ್ಕೃತಿಗಳಷ್ಟೇ ಅಲ್ಲದೆ ರಾಜಕೀಯವಾಗಿ, ಭೌಗೋಳಿಕವಾಗಿಯೂ ಕರ್ನಾಟಕ ಛಿದ್ರವಾಗಿತ್ತು. ಇವನ್ನೆಲ್ಲ ಒಂದು ಗೂಡಿಸಿ ಅಖಂಡ ಕರ್ನಾಟಕದ ಕಲ್ಪನೆಯನ್ನು ಮೊದಲಿಗೆ ಜನತೆಯ ಮುಂದಿಡುವ ಕಾರ್ಯವನ್ನು ಆಲೂರರು ಮಾಡಿದರು. ರಾಷ್ಟ್ರೀಯತ್ವಕ್ಕೂ ಮತ್ತು ಕರ್ನಾಟಕಕತ್ವಕ್ಕೂ ಅವರಿಗೆ ಭೇದವಿಲ್ಲ. ಅವರಿಗೆ ಕರ್ನಾಕತ್ವವೆಂದರೆ, ಹಿಂದುತ್ವ-ವೀರತ್ವ, ವೈಭವತೆ, ಸಾಮ್ರಾಜ್ಯವಾದ ಬಲಿಷ್ಠ ಪ್ರಭುತ್ವ. ಕರ್ನಾಟಕ ಸಂಸ್ಕೃತಿ ಕುರಿತ ಅವರ ಎಲ್ಲಾ ವಿಚಾರಗಳು ವೈದಿಕ ನೆಲೆಯಲ್ಲಿರುವುದನ್ನು ಗುರುತಿಸಬಹುದು. ಭಾರತೀಯ ಸಂಸ್ಕೃತಿ ಜ್ಞಾನ ನಮಗೆ ಸಿಗದೇ ಹೋದರೆ ಅದರೊಳಗೆ ಒಂದು ಭಾಗವಾದ 'ಕರ್ನಾಟಕ ಸಂಸ್ಕೃತಿ' ಜ್ಞಾನ ನಮಗೆ ಆಗದು. ಕರ್ನಾಟಕದ ಧರ್ಮ, ಸಾಹಿತ್ಯ, ಕಲೆ, ಸಂಗೀತ ಮುಂತಾದ ಕ್ಷೇತ್ರಗಳು 'ಭಾರತೀಯ ಸಂಸ್ಕೃತಿ'ಯನ್ನು ವಿಶಿಷ್ಟಗೊಳಿಸಿವೆ. ಅವರ ಒಟ್ಟಾರೆ ಚಿಂತನೆಯ ಹಿಂದೆ 'ಹಿಂದುತ್ವದ ರಾಷ್ಟ್ರೀಯವಾದ' ಕೆಲಸ ಮಾಡಿದೆ. ವೇದ, ಉಪನಿಷತ್ತುಗಳನ್ನು ಒಳಗೊಂಡ ಸಂಸ್ಕೃತಿ ಮಾತ್ರ ಭಾರತೀಯ ಮತ್ತು ಕನ್ನಡಿಗ ಆಗಲು ಸಾಧ್ಯವೆಂದು ನಂಬಿಕೊಂಡಿದ್ದರು. ಬಹುತೇಕವಾಗಿ ಶಂಬಾ ಭಿನ್ನರಾಗುವುದು ಈ ನೆಲೆಯಲ್ಲಿಯೇ. ಆಲೂರರಿಗೆ ಕೇವಲ ವ್ಯಷ್ಟಿನೆಲೆಯ ವೈದಿಕ ಮನೋಭಾವ ಮುಖ್ಯವಾಗಿದ್ದು; ಅದರ ಜೊತೆಗೆ ಕರ್ನಾಟಕ, ಕನ್ನಡ ಸಂಸ್ಕೃತಿಯ ಬಗ್ಗೆ ವಿಶ್ಲೇಷಣೆಗೆ ತೊಡಗುತ್ತಾರೆ. ಸಮಷ್ಟಿಯ ಜನಪದ ಪ್ರಜ್ಞೆಯನ್ನು ಗುರುತಿಸುವುದಿಲ್ಲ.

ಆಲೂರರ "ಕರ್ನಾಟಕ ಗತವೈಭವ"(೧೯೧೭) ಕೃತಿಯು ಕನ್ನಡ-ನಾಡು-ನುಡಿಯ ಬಗೆಗೆ ಓಂಕಾರ ಮಂತ್ರವಾಯಿತು. ಅಂದಿನ ಕರ್ನಾಟಕ ಏಕೀಕರಣ ಮತ್ತು ಸಾಹಿತ್ಯದ ದೃಷ್ಟಿಯಿಂದ ಮಹತ್ವದ್ದೆನಿಸಿತು. ಕನ್ನಡಿಗರಿಗೆ, ಅವರ ಇತಿಹಾಸವನ್ನು ದರ್ಶಿಸುತ್ತಾ, ಅವರೊಳಗೆ ಅಖಂಡ ಕರ್ನಾಟಕದ ಕಲ್ಪನೆಯನ್ನು ಜಾಗೃತಗೊಳಿಸಿತು. ಮುಂದಿನ ಎಲ್ಲಾ ಕನ್ನಡ ಸಂಸ್ಕೃತಿ-ಇತಿಹಾಸ ಸಂಶೋಧಕರಿಗೆ ಈ ಕೃತಿ 'ಕೈ ಕಂಬ'ವಾಯಿತು. ಅವರ ಅನೇಕ ವಿಚಾರಗಳು ಮುಂದಿನ ವಿದ್ವಾಂಸರಲ್ಲಿ ದೃಢಪಟ್ಟಿವೆ. ಉದಾಹರಣೆ - ನರ್ಮದಾ ತೀರದ ವರೆಗೆ ಕನ್ನಡ ಮೇರೆಯನ್ನು, ಮಹಾರಾಷ್ಟ್ರ ಕನ್ನಡ ಪ್ರದೇಶವೆಂದು ಗುರುತಿಸಿದ್ದು. ನಾಡಿನಲ್ಲಿ ಆಗಿ ಹೋದ ರಾಜರಾಣಿಯರು, ವಚನಕಾರರು, ದಾಸರು, ಯತಿ-ಮುನಿಗಳು, ಸಾಹಿತ್ಯ, ಕಲೆ, ಗುಡಿ-ಗೋಪುರಗಳ ಮೂಲಕ 'ಗತವೈಭವ'ವನ್ನು ನೆನೆಪಿಸುತ್ತಾ ಕನ್ನಡಿಗರನ್ನು ಎಚ್ಚರಗೊಳಿಸುವಲ್ಲಿ ಮೊದಲ ಪ್ರಯತ್ನ ಮಾಡಿದರು.[೧]

೨. ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರ ವಿಚಾರಗಳು

ಮಾಸ್ತಿ ವೆಂಕಟೇಶ ಅಯ್ಯಂಗಾರರ ಪ್ರಕಾರ 'ಸಂಸ್ಕೃತಿ' ಎಂಬುದು ಜನರ ಜೀವನದ ಅನುಭವಗಳಿಂದ ರೂಪುಗೊಂಡಿದ್ದು. ಅದು ದೇಶದಲ್ಲೆಲ್ಲ ಒಂದೇಯಾಗಿರಲಾರದು. ಕೆಲವೊಮ್ಮೆ ಸಾಮ್ಯ ಕಂಡುಬಂದರೂ, ಬೇರೆ ಬೇರೆ ಭಾಗದಲ್ಲಿ ಪ್ರಾದೇಶಿಕವಾಗಿ ವೈಶಿಷ್ಟ್ಯವನ್ನು ಪಡೆದಿರುತ್ತದೆ. ಈ ಹಿನ್ನೆಲೆಯಲ್ಲಿ 'ಕರ್ನಾಟಕ ಸಂಸ್ಕೃತಿ'ಯನ್ನು ಗುರುತಿಸಬೇಕಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಸಂಸ್ಕೃತಿ ಅಧ್ಯಯನದ ಆವಶ್ಯಕತೆ ಏಕೆಂದರೆ ದೇಶದಲ್ಲಿ ತೀವ್ರವಾಗಿ ಬದಲಾವಣೆಯಾಗುತ್ತಿರುವುದರಿಂದ ಹೊಸ ಹೊಸ ವಿಚಾರಗಳು, ಆಲೋಚನೆಗಳು ಬೆಳೆಯತೊಡಗಿದಂತೆ ನಮ್ಮ ಸಂಸ್ಕೃತಿ ಬಗೆಗಿನ ಕಾಳಜಿಗಳು ಕಡಿಮೆಯಾಗಿ, ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸತೊಡಗಿದ್ದೇವೆ; ನಮ್ಮ ಸಂಸ್ಕೃತಿಯೊಳಗಿನ ಗುಣಗಳನ್ನು ಕಂಡುಕೊಳ್ಳುತ್ತಾ ಪಾಶ್ಚಾತ್ಯ ಸಂಸ್ಕೃತಿಯ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ನಮ್ಮ ನಾಡು, ಸಂಸ್ಕೃತಿಯ ಬಗೆಗೆ ಅಧ್ಯಯನ, ಚಿಂತನೆ ಅವಶ್ಯವೆನ್ನುತ್ತಾರೆ.

ಕಾವೇರಿಯಿಂದ ಗೋದಾವರಿಯವರೆಗಿನ ಈ ನಾಡಿನಲ್ಲಿ ಅನೇಕ ಧರ್ಮ-ಪಂಥಗಳು, ಮಹಾನ್ ದಾರ್ಶನಿಕರು ಹುಟ್ಟಿ ಬಂದಿದ್ದಾರೆ. ನಮ್ಮ ಸಂಸ್ಕೃತಿ ಇತರ ಪ್ರಾದೇಶಿಕ ಸಂಸ್ಕೃತಿಗಳಿಗಿಂತ ಭಿನ್ನವಾಗಿದ್ದರೂ ಅವುಗಳ ಪ್ರಭಾವದಿಂದಲೂ ತನ್ನ ವೈಶಾಲ್ಯವನ್ನು ಹೆಚ್ಚಿಸಿಕೊಂಡಿದೆ. ಕರ್ನಾಟಕ ಸಂಗೀತ, ದ್ರಾವಿಡ ಶಿಲ್ಪ ಶೈಲಿ, ನಮ್ಮ ನಾಡಿನಲ್ಲೇ ಹುಟ್ಟಿವೆ. ಇಲ್ಲಿಯ ಜನ ಓದು ಬರೆಹ ಬಲ್ಲದೆ ಪಂಡಿತರಾಗಿದ್ದಾರೆ. ಹಬ್ಬ-ಹರಿದಿನ, ಧರ್ಮ ಪ್ರವಚನ, ಹರಿಕಥೆಗಳಿಂದ ಜನರ ಶೀಲ-ಸ್ವಭಾವದಲ್ಲಿ ಉನ್ನತ ವಿಚಾರಗಳು

ಬೆಳೆದು ಬಂದಿವೆ. ಗ್ರಾಮ ಜೀವನಕೂಡ ಅಂತಸ್ಸಾಕ್ಷಿಗೆ ಅನುಗುಣವಾಗಿ ನಡೆಯುತ್ತಿತ್ತು. ಬೌದ್ಧ-ಜೈನ ಧರ್ಮಗಳು ಹಿಂದೂ ಧರ್ಮದಿಂದ ಬೇರೆಯಾದವುಗಳಲ್ಲ. ಅಲ್ಲದೆ ಹಿಂದೂ ಧರ್ಮವನ್ನು 'ಬ್ರಾಹ್ಮಣಿಕಲ್' ಎಂಬುದನ್ನು ಅವರು ವಿರೋಧಿಸುತ್ತಾರೆ. ಕನ್ನಡ ನಾಡಿನಲ್ಲಿ ಈ ಧರ್ಮಗಳ ಜೊತೆ ಇತ್ತೀಚೆಗೆ ಬಂದ ಮುಸ್ಲಿಂ, ಕ್ರೈಸ್ತ ಧರ್ಮಗಳಿಂದಲೂ ಕನ್ನಡ ಸಂಸ್ಕೃತಿ ಪ್ರಭಾವಗೊಂಡಿದೆ. ವೀರಶೈವ ಧರ್ಮ ತನ್ನ ತಿಳಿಯಾದ ವಚನ ಭಾಷೆಯ ಮೂಲಕ, ಸರ್ವಜ್ಞನು ತ್ರಿಪದಿಗಳ ಮೂಲಕ, ಹರಿದಾಸ ಪರಂಪರೆಯು ವಾಗ್ಮಿಯ ಕಲೆಯಿಂದ, ಸಾಂಗತ್ಯ ಕೃತಿಗಳ ಮೂಲಕ ಅಂದಿನ ಜನಸಮುದಾಯದ ಮೂಲಕ ರೀತಿ-ನೀತಿಯನ್ನು, ಅವರ ಸಂಸ್ಕೃತಿ-ಪರಂಪರೆಯನ್ನು ಗುರುತಿಸಲು ಪ್ರಯತ್ನಿಸುತ್ತಾರೆ.

ಕೇವಲ ಶಿಷ್ಟ ಸಾಹಿತ್ಯವನ್ನು ಗಮನಿಸದೆ, ಜನಪದ ಸಾಹಿತ್ಯ ಕೂಡ ನಾಡಿನ ಸಂಸ್ಕೃತಿಗೆ ಮಹತ್ವದ ಕೊಡುಗೆ ಕೊಟ್ಟಿದೆ ಎಂದು ಗುರುತಿಸಿದ್ದಾರೆ. ಜನ ಸಾಮಾನ್ಯರ ನೋವು-ನಲಿವುಗಳ ಸಮಯದಲ್ಲಿ ಜನಿಸಿದ ಈ ಸಾಹಿತ್ಯ ಎಲ್ಲಾ ಸಾಹಿತ್ಯಕ್ಕೂ ತಾಯಿ ಬೇರಾಗಿದೆ. ಅವರ ಲಾವಣಿಗಳಲ್ಲಿ, ಗಾದೆ ಮಾತುಗಳಲ್ಲಿ, ಒಗಟುಗಳಲ್ಲಿ, ಸ್ಥಳ ನಾಮಗಳಲ್ಲಿ, ಸಂಸ್ಕೃತಿ ವ್ಯಾಪಕವಾಗಿ ಹರಡಿಕೊಂಡಿದೆ; ಏಕೆಂದರೆ ಸಾಹಿತ್ಯದ ಸೃಷ್ಟಿ ಜನರ ಉದ್ಧಾರಕ್ಕಾಗಿಯೇ ನಿರ್ಮಿತವಾದುದಷ್ಟೆ! ಈ ಎಲ್ಲವುಗಳಲ್ಲಿ ದೋಷವಿಲ್ಲವೆಂದಲ್ಲ; ಗುಣಗಳಿದ್ದ-ಮೇಲೆ ದೋಷಗಳು ಇರಬೇಕಾದ್ದೇ. ದೀಪದ ಕೆಳಗೆ ಕತ್ತಲೆಯಿರುವಂತೆ. ದೋಷಗಳನ್ನು ತಿದ್ದಿಕೊಂಡು, ಹಿರಿಯ ಧ್ಯೇಯಗಳನ್ನು ನಂಬಿಕೊಂಡು ಕೆಲಸ ಮಾಡಿ ನಮ್ಮ ನಾಡಿನ ಜನತೆಯ ಏಳಿಗೆಗಾಗಿ ಅವರಿಗೆ ತಿಳಿಯುವಂಥ ಸಾಹಿತ್ಯ ನಿರ್ಮಿಸಿ ಸಮಾಜದಲ್ಲಿ ತಿಳಿವು ಮೂಡಿಸಬೇಕಾಗಿದೆ. ಹೀಗಾಗುವುದರಿಂದ ನಮ್ಮ ಜನಾಂಗ ಹಿಂದಿನಂತೆ ಹಿರಿದಾಗುತ್ತದೆ ಎಂಬ ನಿರ್ಧಾರಕ್ಕೆ ಬರುತ್ತಾರೆ.

ಒಟ್ಟಾರೆ ಮಾಸ್ತಿಯವರು 'ಕರ್ನಾಟಕ ಸಂಸ್ಕೃತಿ'ಯನ್ನು ಗುರುತಿಸುವಲ್ಲಿ ಶಿಷ್ಟ ದಾಖಲೆಗಳನ್ನಷ್ಟೇ ಗಮನಿಸದೆ ಜಾನಪದ ಸಾಹಿತ್ಯಕಲೆಗೆ ಕೂಡಾ ಮಹತ್ವ ನೀಡುತ್ತಾರೆ. 'ಕನ್ನಡ ಸಂಸ್ಕೃತಿ'ಯನ್ನು ದೇವಸ್ಥಾನಗಳಲ್ಲಿ ಆಚರಣೆಗಳಲ್ಲಿ, ಹಳ್ಳಿಯ ಜನರಲ್ಲಿ, ಅವರಾಡುವ ಮಾತಿನಲ್ಲಿ ಗುರುತಿಸುತ್ತಾರೆ. ಹಿಂದೂ ಧರ್ಮವನ್ನು 'ಬ್ರಾಹ್ಮಣಿಕಲ್' ಎನ್ನದೆ 'ಸ್ಮಾರ್ತಮತ' ಎಂದು ಕರೆದು ಅದು ವೇದಾಂತದ ಕಡೆಯ ಎಲ್ಲೆಯಲ್ಲಿ ಸುಳಿಯುವ ಜ್ಞಾನಿಯಿಂದ ಸಾಮಾನ್ಯ ಜನರ ಆಚರಣೆಗಳ ವರೆಗೂ ಹಬ್ಬಿದೆ. ಅಲ್ಲಿ ಎಲ್ಲರಿಗೂ, ಎಲ್ಲಾ ಮಟ್ಟದ ಸಂಸ್ಕಾರಕ್ಕೂ ಸ್ಥಳವಿದೆ; ಆ ಮತಕ್ಕೆ ಮಾನವನ ಹೃದಯವನ್ನು ತಟ್ಟುವ ಅವಕಾಶವಿದೆ ಎಂದು ಹೇಳುತ್ತಾರೆ. ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸಂಸ್ಕೃತಿ ರೂಪುಗೊಂಡು ಬೆಳೆದಿದೆ ಎಂಬ ನಿಲುವಿಗೆ ಬರುತ್ತಾರೆ.[೨]

೩. ದೇವುಡು ಅವರ ವಿಚಾರಗಳು

ಕರ್ನಾಟಕ ಸಂಸ್ಕೃತಿಯೆಂಬುದು 'ಸಿದ್ಧವಾದ ರೂಪ' ಎಂಬುದನ್ನು ಗ್ರಹಿಸಿದವರಲ್ಲಿ ದೇವುಡು ನರಸಿಂಹಶಾಸ್ತ್ರಿಗಳು ಒಬ್ಬರು. ಸಂಸ್ಕೃತಿ ಎಂಬುದು ಮನೋವಿಕಾಸಕ್ಕೆ ಸಂಬಂಧಿಸಿದ್ದು ಎನ್ನುತ್ತಾ ಸಮಷ್ಟಿಗೆ ಬೆಲೆ ಕೊಡುತ್ತಾರೆ. 'ಕರ್ನಾಟಕ ಸಂಸ್ಕೃತಿ'ಯೆಂದರೆ ಪಂಡಿತ, ಪಾಮರರ, ಕೆಳಗಿನವರ ಸಂಸ್ಕೃತಿಯಲ್ಲ, ಅದು ಜನತೆಯ ಸಂಸ್ಕೃತಿ. ಕನ್ನಡ ಕುಲ-ಕುಲಗಳ ವ್ಯಷ್ಟಿ, ಸಮಷ್ಟಿ, ವ್ಯವಹಾರ ಪ್ರಪಂಚವನ್ನು ಸಂಸ್ಕೃತಿ ದೃಷ್ಟಿಯಿಂದ ಹುಡುಕುವುದು ಅವರಿಗೆ ಮುಖ್ಯವಾಗಿರುತ್ತದೆ. ವೈದಿಕ ಮತ್ತು ಜನತೆಯ ಸಂಸ್ಕೃತಿಯೊಳಗೆ ಅನೇಕ ಸಾಮ್ಯ ಅಂಶಗಳಿವೆ. 'ಜನತೆಯ ಸಂಸ್ಕೃತಿ' ಎಂಬ ಅರ್ಥವನ್ನು ವಿದೇಶಿ ವಿದ್ವಾಂಸರು ಗ್ರಹಿಸಿದ ರೀತಿಯಲ್ಲಿ ಗ್ರಹಿಸಿ ನಮ್ಮ ಸಂಸ್ಕೃತಿಯ ಕುರಿತು ಬರೆಯಲು ಸಾಧ್ಯವಿಲ್ಲ; ಕಾರಣ ನಮ್ಮಲ್ಲಿ ಜೈಮಿನಿ, ರಾಜಶೇಖರದಂಥ ಪ್ರೌಢಕಾವ್ಯಗಳನ್ನೋದುವ ನಿರಕ್ಷರ ಚಾಣಾಕ್ಷರಿದ್ದಾರೆ, ಹಾಡುಕಟ್ಟಬಲ್ಲ ಮಹಾಶಯರಿದ್ದಾರೆ. ಇತರರ ಸಹಾಯವಿಲ್ಲದೆ ಬಾಯಲ್ಲಿ ಹೇಳುವ ಹೆಣ್ಣು ಹೆಂಗಸರಿದ್ದಾರೆ. ಈ ಎಲ್ಲಾ ಕಾರಣಗಳಿಂದ ಸಂಸ್ಕೃತಿಯನ್ನು ಬಿಡಿಯಾಗಿ ಗುರುತಿಸದೆ ಹಿಡಿಯಾಗಿ ಕಾಣಬೇಕು ಎಂಬುದು ಅವರ ನಿಲುವಾಗಿದೆ. ಬ್ರಾಹ್ಮಣನಿಂದ ಹಿಡಿದು ಅತ್ಯಂತ ಕೆಳ ಜಾತಿಯವರೆಗೆ ಇರುವ ನಾನಾ ವಿಚಾರ-ಆಚಾರ, ವ್ಯವಹಾರ, ಆಟ-ಪಾಠ, ರೀತಿ-ನೀತಿ, ನಡೆ-ನುಡಿ, ಉಡುಗೆ-ತೊಡುಗೆ ಇವೆಲ್ಲದರಲ್ಲಿಯೂ ಒಂದು ಬಗೆಯ ಸಾಮ್ಯವನ್ನು ಕಾಣಬಹುದು. ಅಂದರೆ: ಸಂಸ್ಕೃತಿಯ ಏಕ ಜಾತೀಯತೆ ಕಾಣಬರುತ್ತದೆ. ಇದರಿಂದ ಯಾವ ಕುಲವನ್ನು ಇಟ್ಟುಕೊಳ್ಳುವುದು, ಯಾವ ಕುಲವನ್ನು ಬಿಡುವುದು ಎಂಬ ಪ್ರಶ್ನೆ ಬಂದಾಗ ದೇವುಡು ಅವರು ಎಲ್ಲದರ ಸಮಷ್ಟಿ ಪ್ರಜ್ಞೆಯ ಕಡೆ ವಾಲುತ್ತಾರೆ.

ದೇವುಡು ಅವರು ಸಂಸ್ಕೃತಿಯ ಏಕಮುಖ ವಿಶ್ಲೇಷಣೆಗೆ ತೊಡಗದೆ ಬಹುಮುಖೀ ವಿಶ್ಲೇಷಣೆ ಕಡೆಗೆ ದೃಷ್ಟಿ ಹರಿಸುತ್ತಾರೆ. ಕರ್ನಾಟಕ ಸಂಸ್ಕೃತಿಯ ಕುರುಹುಗಳನ್ನು ವೇದಗಳಲ್ಲಿ ಹುಡುಕುತ್ತಾ ಈಗಿನ ಗಂಡಸರ-ಹೆಂಗಸರ, ಉಡುಗೆ-ತೊಡುಗೆಗಳು ವೇದ ಕಾಲದಲ್ಲಿ ಇದ್ದವು ಎಂದು ಜನತೆಯ ಸಂಸ್ಕೃತಿಯನ್ನು ಕುರಿತು ಮಾತನಾಡುತ್ತಾರೆ. 'ಕರ್ನಾಟಕ ಸಂಸ್ಕೃತಿ' ಕೃತಿಯಲ್ಲಿ ನಡೆ-ನುಡಿಗಳಲ್ಲಿ ಸಂಸ್ಕೃತಿಯನ್ನು ಗುರುತಿಸುತ್ತಾ ನುಡಿಯೊಳಗೆ ಹೆಂಗಸರ, ಗಂಡಸರ ಹಾಡುಗಳು ಒಗಟು ಗಾದೆಗಳನ್ನು, ನಡೆಯೊಳಗೆ ಅವರ ಆಚಾರ ಸಂಪ್ರದಾಯಗಳನ್ನು ಕುರಿತಾದವುಗಳಲ್ಲಿ 'ಕನ್ನಡ ಸಂಸ್ಕೃತಿ'ಯನ್ನು ಶೋಧಿಸುತ್ತಾರೆ. ಕರ್ನಾಟಕ ಸಂಸ್ಕೃತಿ ಎಂಬುದು 'ವೈದಿಕ ಸಂಸ್ಕೃತಿ'ಯ ಪ್ರತಿಬಿಂಬ; ವೈದಿಕ ಸಂಸ್ಕೃತಿಯು ಮಾತೃ ಸ್ವರೂಪದಲ್ಲಿದ್ದು ಉಳಿದ ಪ್ರಾದೇಶಿಕ ಸಂಸ್ಕೃತಿಗಳಿಗೆ 'ಮಾರ್ಗ' ರೀತಿಯದಾಗಿದ್ದರೆ, ಇತರೆ ಸಂಸ್ಕೃತಿಗಳು (ಕರ್ನಾಟಕ) 'ದೇಸಿ' ರೀತಿಯವು ಎಂದು ಹೇಳುತ್ತಾರೆ.[೩]

೪. ಡಿ.ವಿ.ಜಿ. ಅವರ ವಿಚಾರಗಳು

ಕನ್ನಡದಲ್ಲಿ 'ಸಂಸ್ಕೃತಿ' ಕುರಿತು ಚಿಂತನೆ ಮಾಡಿದ ಪ್ರಮುಖರಲ್ಲಿ ಡಿ.ವಿ.ಗುಂಡಪ್ಪ ಅವರು ಒಬ್ಬರು. 'ಸಂಸ್ಕೃತಿ'ಯನ್ನು ವ್ಯಕ್ತಿಗತ ನೆಲೆಯಲ್ಲಿ ಗ್ರಹಿಸುತ್ತಾ ವೈಯಕ್ತಿಕ ಅರ್ಥಕ್ಕೆ ಬೆಲೆ ನೀಡುತ್ತಾರೆ. ಸಾಮುದಾಯಿಕ ಸಮಷ್ಟಿಗೆ ವ್ಯಕ್ತಿ ಗುಣೋತ್ಕರ್ಷತೆಯೇ ಕಾರಣ ಎನ್ನುತ್ತಾ ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಸಂಸ್ಕೃತಿ ಕುರಿತು ಚಿಂತಿಸುತ್ತಾರೆ. 'ಭಾರತೀಯ ಸಂಸ್ಕೃತಿ' ಎಂಬುದು ಪ್ರಪಂಚದ ಒಂದು ಭಾಗವಾಗಿದೆ. 'ಪಾಶ್ಚಾತ್ಯ ಸಂಸ್ಕೃತಿ'ಯಲ್ಲಿನ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಂಡು ಇಂದಿನ 'ಸಂಸ್ಕೃತಿ' ರೂಪುಗೊಳ್ಳಬೇಕಾಗಿದೆ. ಪ್ರಪಂಚದ ಇತರ ಭಾಗಗಳೊಂದಿಗೆ ಭಾರತ ಬೆರೆಯಬೇಕಾಗಿರುವುದರಿಂದ. ಇದು ಅನಿವಾರ್ಯತೆ ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಡಿ.ವಿ.ಜಿ ಅವರು ಕನ್ನಡ-ಕರ್ನಾಟಕ ಸಂಸ್ಕೃತಿ ಕುರಿತಂತೆ ಪ್ರತ್ಯೇಕವಾಗಿಯೇನೂ ಹೇಳಿಲ್ಲ. ಕನ್ನಡ ಭಾಷೆ, ಅದರ ಸ್ಥಿತಿ-ಗತಿಗಳನ್ನು ಕುರಿತು ಕೆಲವೊಂದು ಕಡೆ ಭಾಷಣಗಳಲ್ಲಿ ಹೇಳಿದ್ದಾರೆ. 'ಕನ್ನಡದ ಉತ್ಸಾಹ ಕೇವಲ Sentiment ಭಾವಾತಿರೇಕದ ಉದ್ಗಾರವಲ್ಲ. ಅದು ವಿಚಾರಪೂರ್ವಕವಾದ ತತ್ತ್ವಸಿದ್ಧಾಂತ. ಕನ್ನಡ ಭಾಷೆ, ಕನ್ನಡಿಗರ ದಿನಚರಿ ವ್ಯವಹಾರ, ಅವರ ಜ್ಞಾನಾರ್ಜನೆ, ಅವರ ಇಹಲೋಕದ ಯಾತ್ರೆ ಅವರ ಬಂಧ ವಿಮೋಚನೆ. ಅವರ ಜನ್ಮಸಾರ್ಥಕ್ಯ-ಇವೆಲ್ಲ ಕನ್ನಡದ ಮೂಲಕವೇ ಆಗಬೇಕು. ಕನ್ನಡ ಭಾಷೆಯ ಶ್ರೇಯಸ್ಸು ಎಂದರೆ ಕನ್ನಡ ಜನತೆಯ ಶ್ರೇಯಸ್ಸು ಎನ್ನುತ್ತಾರೆ. ಕನ್ನಡ ಅಭಿವೃದ್ಧಿಗಾಗಿ ಆಗಬೇಕಾದ ಕಾರ್ಯಗಳನ್ನು ಕುರಿತು ಯೋಚಿಸಿದ್ದಾರೆ.

೧. ಕನ್ನಡದ ಅಭಿಮಾನಿಗಳ ಸಂಖ್ಯೆ ಮತ್ತು ನಾಡಿನ ವಿಸ್ತಾರವೂ ಬೆಳೆಯಬೇಕು.
೨. ಸರ್ಕಾರವು ಕನ್ನಡವನ್ನು ತನ್ನ ಭಾಷೆಯೆಂದು ಅಂಗೀಕರಿಸಬೇಕು.
೩. ಕನ್ನಡ ಪ್ರದೇಶಗಳು ಒಂದಡೆ ಸೇರಿ ಐಕ್ಯಗೊಳ್ಳಬೇಕು.
೪. ನಾಡಿನ ಕನ್ನಡ ಜನಕ್ಕೆಲ್ಲ ಒಂದು ಪ್ರೌಢ ವಿದ್ಯಾಕೇಂದ್ರ ಏರ್ಪಾಡಗಬೇಕು.

ಈ ವಿಚಾರಗಳು ಪ್ರಸ್ತುತ ಸಂದರ್ಭದಲ್ಲಿ ಯೋಚಿಸಿಬೇಕಾದಂಥವುಗಳೆನ್ನಿಸುತ್ತವೆ. ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿ ಎಂಬ ಹೆಮ್ಮೆ ಅನುಚಿತವಾದ್ದೇನಲ್ಲ. ಇತರ ಸಂಸ್ಕೃತಿ-ಸಾಹಿತ್ಯ-ಪರಂಪರೆಗಳಿಗೆ ಹೋಲಿಸಿದರೆ ನಮ್ಮದು ಯಾವುದರಲ್ಲಿಯೂ ಕಡಿಮೆಯಿಲ್ಲ. ಕಾಲಕಾಲಕ್ಕೆ ಜನರ ಅಭಿರುಚಿಗೆ ತಕ್ಕಂತೆ ಗ್ರಂಥ ರಚನೆಯಾಗಿವೆ. ಇನ್ನೂ ಮುಂದೆ ದೇಶ-ವಿದೇಶಗಳಿಂದ ಮನ್ನಣೆ ಪಡೆಯಬಲ್ಲಂಥ ಕವಿಗಳು, ಸಾಹಿತಿಗಳು, ಕಲಾವಿದರು, ವಿಜ್ಞಾನಿಗಳು ತತ್ತ್ವವೇತ್ತರು ಕನ್ನಡದೊಳಗೆ ಹುಟ್ಟಿ ಬರಬೇಕಾದರೆ "ಕನ್ನಡ

ಭವಿಷ್ಯತ್ತು ಭೂತ ವರ್ತಮಾನಗಳಿಂದ ತೇಜಸ್ವಿಯಾಗಬೇಕಾಗಿದೆ" ಎನ್ನುತ್ತಾ ನಾಡಿನ-ಸಂಸ್ಕೃತಿ-ಭಾಷೆ ಮುಂತಾದವುಗಳ ಬಗ್ಗೆ ಸ್ವತಂತ್ರದೃಷ್ಟಿ ಇರಬೇಕಾದ್ದು ಆಗತ್ಯ ಎಂದು ಗುರುತಿಸುತ್ತಾರೆ.[೪]

೫. ಮುಳಿಯ ತಿಮ್ಮಪ್ಪಯ್ಯ ಅವರ ವಿಚಾರಗಳು

೨೦ನೆಯ ಶತಮಾನದ ಆರಂಭದ ಕನ್ನಡ ಸಾಹಿತ್ಯದಲ್ಲಿ ಅನ್ವೇಷಕ ಪ್ರವೃತಿ ಮತ್ತು ಪ್ರಯೋಗಶೀಲತೆಯಲ್ಲಿ ಮುಳಿಯ ತಿಮ್ಮಪ್ಪಯ್ಯನವರ ಹೆಸರು, ಗುರುತಿಸುವಂಥದ್ದು. ಅವರ ನಾಡೋಜ ಪಂಪ, ಕವಿರಾಜಮಾರ್ಗ ಬಗೆಗಿನ ಸಂಶೋಧನಾ ಗ್ರಂಥಗಳು ಇಂದಿಗೂ ಮೌಲಿಕವಾದವುಗಳು. ನವೋದಯದ ಮನಃಸ್ಥಿತಿಯಲ್ಲಿ ಕಾಣಿಸಿಕೊಂಡರೂ ಅವರಲ್ಲಿ ವಿಶಿಷ್ಟತನ ಗೋಚರವಾಗುತ್ತದೆ. ನಮ್ಮ ಸಂಸ್ಕೃತಿಯ ಬೇರುಗಳನ್ನು ಹಳಗನ್ನಡ ಸಾಹಿತ್ಯಲ್ಲೂ ಕವಿಗಳದಲ್ಲೂ ಹುಡುಕುತ್ತಾರೆ. ಕಾವ್ಯದಿಂದಲೇ ಸಮತಾ ಸಂಸ್ಕೃತಿ ಹರಡುವುದೆಂದು ಅವರು ನಂಬಿದ್ದರು. ಮಾನವನ ಅಂತರಂಗದ ವಿಕಾಸಕ್ಕೆ ಬೆಲೆ ಕೊಡುತ್ತಾ ಅದನ್ನು 'ಸಂಸ್ಕೃತಿ' ಎಂದು ಗುರುತಿಸುತ್ತಾರೆ. ಈ ಅಂತರಂಗದ ವಿಕಾಸಕ್ಕೆ ಕಾವ್ಯದ ಓದೇ ಮುಖ್ಯ ಸಾಧನ. ಈ ಹಿನ್ನೆಲೆಯಲ್ಲಿ ಹಳಗನ್ನಡದ ಪಂಪ, ಆಂಡಯ್ಯ,. ಮುದ್ದಣ್ಣನಂಥ ಕವಿಗಳು ಅವರಿಗೆ ಮುಖ್ಯರಾಗುತ್ತಾರೆ. ಪಂಪಭಾರತದಲ್ಲಿ ಬರುವ ದಮ, ದಯೆ, ದಾನ, ತಪ, ಪಂಚಶೀಲ ಎಂಬ ತತ್ತ್ವಗಳನ್ನು ನಮ್ಮ ಸಂಸ್ಕೃತಿಯಲ್ಲಿ ಗುರುತಿಸಿ ನಮಗೂ ಅನ್ವಯಿಸುವಂಥವು ಎನ್ನುತ್ತಾರೆ. ಮನುಷ್ಯನಲ್ಲಿ ಸಂಸ್ಕೃತಿಯನ್ನು ಒದಗಿಸಲಿಕ್ಕೆ ತಯಾರಾದ ಶಬ್ದಾರ್ಥಗಳ ಸಾಹಿತ್ಯವನ್ನೇ 'ಸಾಹಿತ್ಯಶಾಸ್ತ್ರ' ಎಂದು ಗುರುತಿಸುತ್ತಾರೆ. ಸಾಹಿತ್ಯದೊಡನೆ ಭಾಷಾಶ್ರೇಷ್ಠತೆ, ಕರ್ನಾಟಕದ ಅಖಂಡತೆಯನ್ನು, ಭಾಷೆಯ ಅಖಂಡತೆಯನ್ನು ಎತ್ತಿ ಹಿಡಿದು ನಮ್ಮ ಸಂಸ್ಕೃತಿ ಉದಾತ್ತವಾಗಿ ಹಬ್ಬಬೇಕಾದರೆ ಸಾಹಿತ್ಯ ಸಾರ್ವಜನಿಕವಾಗಬೇಕು. ಅದು ಎಲ್ಲರ ಸೊತ್ತಾಗಬೇಕು -ಎಂದು ಸಾಹಿತ್ಯಕ್ಕೆ ಮುಖ್ಯ ಬೆಲೆ ನೀಡುತ್ತಾರೆ. ಆಂಡಯ್ಯನಲ್ಲಿ ಬರುವ 'ಕನ್ನಡಮೆನಿಪ್ಪಾ' ನಾಡು 'ಬನವಾಸಿ'ಯೇ ಆಗಿದೆ ಎಂದು ಅನ್ವೇಷಿಸುತ್ತಾರೆ. ಕರ್ನಾಟಕ ರಾಜಚರಿತ್ರೆಯನ್ನು ವೈಭವವಾಗಿ, ವಿವರಿಸುತ್ತಾ, ರಾಜ್ಯದ ವೈಶಾಲ್ಯತೆಯನ್ನು ಸೂಚಿಸುತ್ತಾರೆ. ಋಗ್ವೇದದ 'ಬೇಕನಾಟ' ಬಗ್ಗೆ ಹೇಳುತ್ತಾ, 'ನಾಟ'ವೇ ದೇಶಿಯಾಗಿ ನಾಡು-ನಾಡವರ ಎಂದಾಗಿದೆ. ಕೆಳತಳದವರು-ತಮಿಳರೆಂದು ಮುಂದೆ ಅವರನ್ನು ದ್ರಾವಿಡರೆಂದು; 'ಕರುತಳದ' 'ನಾಟ'ರೇ 'ಕರ್ನಾಟಕರು', ಕನ್ನಡಿಗರು ಎಂದು ಅವರು ನಿರ್ಣಯಕ್ಕೆ ಬರುತ್ತಾರೆ. ಇದಕ್ಕೆ 'ಕನ್-ಕಳ್' ಜನಾಂಗಗಳು ಅಸ್ತಿತ್ವದಲ್ಲಿದ್ದವೆಂದು ಹೇಳುತ್ತಾರೆ. 'ವಿಂಧ್ಯಾವಳಿ'ಯಲ್ಲಿ ಮೊದಲು ದೇಸಿಕನ್ನಡ ಇತ್ತೆಂದೂ 'ಗಾಥಾ ಸಪ್ತಶತಿ'ಗೆ ಅದು ಉಗಮ ಸ್ಥಳವಾಗಿರಬೇಕು ಎಂದೂ ಊಹೆ ಮಾಡಿದ್ದಾರೆ. ಮುಂದೆ ಈ ವಿಷಯಗಳಲ್ಲಿ

ಕೆಲವು ಸತ್ಯಗಳನ್ನು ಸಂಶೋಧಕರು ಕಂಡುಕೊಂಡಿರುವುದನ್ನು ಕಾಣಬಹುದು. ಒಟ್ಟಾರೆ ಮುಳಿಯ ತಿಮ್ಮಪ್ಪಯ್ಯನವರು 'ಕರ್ನಾಟಕ ಸಂಸ್ಕೃತಿ'ಯನ್ನು ಸಾಹಿತ್ಯ ನೆಲೆಯಲ್ಲಿ ಗುರುತಿಸುತ್ತಾರೆ ಎನ್ನಬಹುದು.*

೬. ಕಪಟರಾಳ ಕೃಷ್ಣರಾವ್ ಅವರ ವಿಚಾರಗಳು

ಕಪಟರಾಳ ಕೃಷ್ಣರಾವ್ "ಕರ್ನಾಟಕ ಸಂಸ್ಕೃತಿಯ ಸಂಶೋಧನೆ" ಎಂಬ ಕೃತಿಯಲ್ಲಿ, ಭಾರತ ಸಂಸ್ಕೃತಿಯಿಂದ ಕರ್ನಾಟಕ ಸಂಸ್ಕೃತಿಯನ್ನು ಬೇರ್ಪಡಿಸಲು ಬಾರದಿದ್ದರೂ. ಈ ನಾಡ ಜನತೆ ಭಾರತೀಯ ಸಂಸ್ಕೃತಿಗೆ ಕಾಲಕಾಲಕ್ಕೆ ತಮ್ಮ ವಿಶಿಷ್ಟತೆಯನ್ನು ಕೊಟ್ಟಿದ್ದಾರೆ. ಒಂದು ದೇಶದ ಸಂಸ್ಕೃತಿಯನ್ನು ಆ ದೇಶದ ಭಾಷೆ, ಸಾಹಿತ್ಯ, ರಾಜ್ಯಶಾಸನ ಪದ್ಧತಿ, ತತ್ವಜ್ಞಾನ, ಶಿಕ್ಷಣ, ವಾಸ್ತುಶಿಲ್ಪ ಗಾಯನ, ಆರ್ಥಿಕ ಸ್ಥಿತಿ, ಇವೆಲ್ಲವುಗಳಲ್ಲಿ ಕಾಣಬಹುದು. ಒಟ್ಟು ಜೀವನದ ಎಲ್ಲ ಅಂಶಗಳನ್ನು ಬಿಡಿಯಾಗಿ ಅಥವಾ ಒಟ್ಟಾಗಿ ನೋಡಿ ಸಂಸ್ಕೃತಿಯನ್ನು ಗುರುತಿಸಬಹುದು ಎನ್ನುತ್ತಾರೆ.

೭. ಬೇಂದ್ರೆ ಅವರ ವಿಚಾರಗಳು

ದ.ರಾ. ಬೇಂದ್ರೆಯವರು 'ಕರ್ನಾಟಕ ಸಂಸ್ಕೃತಿ' ಕುರಿತ 'ನಿನ್ನೆ'ಗೆ ಮಹತ್ವ ನೀಡದೇ, ಈಗಿನ ವರ್ತಮಾನ ಕಾಲದ ಸುದ್ದಿ ಮುಖ್ಯವಾಗಿರುತ್ತದೆ ಎನ್ನುತ್ತಾರೆ. ಕನ್ನಡ ನಾಡು ಒಂದು ಕಾಲಕ್ಕೆ ಈಗಿನ, ಮಹಾರಾಷ್ಟ್ರ, ಗುಜರಾತ, ತಮಿಳುನಾಡು, ಕೇರಳದ ವರೆಗೂ ತನ್ನ ಸೀಮೆಯನ್ನು ವಿಸ್ತರಿಸಿದ್ದುಂಟು. ಇದು ಇತಿಹಾಸ, ಆಗಿ ಹೋಗಿದ್ದು, ಈಗ ಇದರ ಸುತ್ತ 'ನಾಲ್ಕು' ಭಾಷಿಕ ಸಂಸ್ಕೃತಿಗಳಿವೆ. ಆ ಸಂಸ್ಕೃತಿಗಳೊಡನೆ. ನಮ್ಮ ಮೇರೆಯನ್ನು ಗೌರವ ಆದರಗಳನ್ನು, ಕಾಯ್ದುಕೊಳ್ಳುವುದರಲ್ಲಿಯೇ ನಮ್ಮ ಸಂಸ್ಕೃತಿಯ ಕೆಚ್ಚು ಕಂಡುಬರುತ್ತದೆ. "ಕನ್ನಡ ಸಂಸ್ಕೃತಿ" ಕುರಿತ ಸಂಶೋಧನೆಗೆ ತೊಡಗದೆ 'ಕನ್ನಡ' ಎಂಬ ಆವೇಶದ ಅಭಿಮಾನವು ಭವಿಷ್ಯದಲ್ಲಿ ಏನಾದೀತು ಎಂಬ ಚಿಂತನೆ ಕುರಿತು ಆಲೋಚಿಸುತ್ತೇನೆ ಎಂದು ಬೇಂದ್ರೆಯವರು ಹೇಳುತ್ತಾರೆ. ಸಂಸ್ಕೃತಿಯ ಆರೋಗ್ಯದ ಲಕ್ಷಣವು ಬಿಡಿ ಬಿಡಿಯಾದ ಅಭಿಮಾನಗಳಲಿಲ್ಲ; ಅದು ಇಡಿಯಾಗಿ ಪರಿಪೂರ್ಣತೆಯನ್ನು ಪಡೆಯುವಲ್ಲಿ ಇದೆ. ಕೇವಲ ತಮ್ಮ ವಿಶೇಷಗಳ ಭೇದಗಳಲ್ಲಿಯೇ ಅಭಿಮಾನ ತಾಳಿ ಅಹಂವಿಕೆಯಿಂದ ಕಾದಾಡುವ ಜನವು ವಿಕೃತಿಯ ರುಗ್ಣಾವಸ್ಥೆಯಲ್ಲಿರುತ್ತದೆ. ಇಂತಹ ವಿಕೃತಿಯಿಂದ ಕನ್ನಡ ನಾಡು ಹೊರಬಂದು, ಆಧುನಿಕ ಪ್ರಪಂಚದಲ್ಲಿ ಒಂದು ಸಭ್ಯತೆಯುಳ್ಳ ನಾಗರಿಕತೆಯನ್ನು ಪರಿಪಾಕಗೊಳಿಸುತ್ತಿರುವ ಜನ ಎಂದು ಹೆಸರು ಪಡೆಯುತ್ತಿರುವುದು ಅದರ ಜೀವನ ಧಾಟಿಯ, ಅದರ ಸಂಸ್ಕೃತಿಯ ಕುರುಹು ಎನ್ನುತ್ತಾರೆ. (ಪು.೮೨೩) ಕರ್ನಾಟಕದಲ್ಲಿ

ಇರುವ ಧರ್ಮಗಳು, ಇವುಗಳು ನೆಡೆಸಿದ ತಿಕ್ಕಾಟ ಮುಂತಾದ ಸಮಸ್ಯೆಗಳು ನಮ್ಮ ಸಮಾಜದ ಸಮಸ್ಯೆಗಳಷ್ಟೇ. ಈ ಧರ್ಮಗಳ ಜೊತೆಗೆ ಕರ್ನಾಟಕದಲ್ಲಿ ಇಸ್ಲಾಂ ಮುಸ್ಲಿಂ ಧರ್ಮಗಳು ಅಡಿಯಿಟ್ಟಿವೆ. ಇವೆಲ್ಲವುಗಳೊಂದಿಗೆ ಹೊಂದಿಕೊಂಡು 'ಸಹಿಷ್ಣುತೆ'ಯ ಮನೋಭಾವವನ್ನು ನಮ್ಮ 'ಸಂಸ್ಕೃತಿ' ನಮಗೆ ನೀಡಿದೆ. 'ಸಹಿಷ್ಣುತೆ' ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರಾಂತಗಳಲ್ಲಿ, ಕೆಲವು ಅಂಶಗಳಲ್ಲಿ ಸಾಮ್ಯವಿದ್ದಾಗಲೂ ಅವು ಇಂದು ಸ್ವತಂತ್ರವಾಗಿ ಬೇರೆಯಾಗಿವೆ. ಹೀಗಾಗಲು ಕಾರಣ ಭಾಷೆ ಮತ್ತು ಸಂಸ್ಕೃತಿ ಎಂದು ಗುರುತಿಸುತ್ತಾ; ನಮ್ಮ ಸಂಸ್ಕೃತಿಯೇ ಮೇಲು, ಎಂಬ ಉಚ್ಚಪ್ರಜ್ಞೆಯ ಗೌರವ ತರುವಂಥದ್ದಲ್ಲ. ಎಲ್ಲ ಭಾಷಿಕ ಸಂಸ್ಕೃತಿಗಳ ತಿರುಳು ಭಾರತೀಯವಾಗಿದೆ. ಅವುಗಳ ವಿಶೇಷವಷ್ಟೇ ತಮ್ಮತಮ್ಮದಾಗಿದೆ. ಇಲ್ಲಿಯ ತಾರತಮ್ಯವು ಸತ್ಯಾಸತ್ಯದಲ್ಲಿ ಉಚ್ಚನೀಚತೆಯದಲ್ಲ, ಅದು ಸಿದ್ದತೆಯ ಮತ್ತು ಸಾಧಕತೆಯ ತಾರತಮ್ಯವಾಗಿದೆ ಎಂದು ಹೇಳುತ್ತಾ 'ಭಾರತೀಯ ಸಂಸ್ಕೃತಿ'ಯೇ ಎಲ್ಲ ಸಂಸ್ಕೃತಿಗಳ (ಭಾಷಿಕ) ಮೂಲವಾಗಿದೆ. ಈ ಎಲ್ಲ ಸಂಸ್ಕೃತಿಗಳು ಸೇರಿ ಭಾರತೀಯ ಸಂಸ್ಕೃತಿಯೆಂಬುದು ನಿರ್ಧರಿತವಾಗಿದೆ. ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.[೬]

'ಕರ್ನಾಟಕ ಸಂಸ್ಕೃತಿ' ಬಗ್ಗೆ ವಿಭಿನ್ನ ದೃಷ್ಟಿಕೋನಗಳು ರೂಪು ತಾಳುತ್ತಿದ್ದ ಏಕೀಕರಣದ ಸಮಯದಲ್ಲಿ 'ಕನ್ನಡ ಸಂಸ್ಕೃತಿ' ಈಗಾಗಲೇ ಸಿದ್ಧ ರೂಪದಲ್ಲಿ ಇದ್ದು. ಅದರ 'ಸ್ವರೂಪದ' ಬಗ್ಗೆ ಹುಡುಕಾಟ ನಡೆಯತೊಡಗಿತ್ತು. ಇಂಥಹ ಹುಡುಕಾಟವನ್ನು ಮರಿಯಪ್ಪ ಭಟ್ಟ, ಮಾಸ್ತಿ ವೆಂಕಟೇಶ ಅಯ್ಯಾಂಗಾರ್, ದೇವುಡು ನರಸಿಂಹ ಶಾಸ್ತ್ರಿಗಳಲ್ಲಿ ಗುರುತಿಸಬಹುದು. ಡಿ.ವಿ.ಜಿ., ಆಲೂರು, ಶ್ರೀಕಂಠಶಾಸ್ತ್ರಿ ಮುಂತಾದವರ 'ಸಂಸ್ಕೃತಿ' ಕುರಿತ ಬರೆವಣಿಗೆಗಳಲ್ಲಿಯೂ ಈ ಅಂಶಗಳನ್ನು ಕಾಣಬಹುದು.

ಇದಕ್ಕೆ ಕಾರಣ ಪ್ರಸ್ತುತ ಸಮಯದಲ್ಲಿ ನಡೆಯುತ್ತಿದ್ದ ಕರ್ನಾಟಕ ಏಕೀಕರಣವೇ ಆಗಿದೆ. ಕರ್ನಾಟಕ ಸಂಸ್ಕೃತಿ ಸಿದ್ಧವಾದ ಒಂದು ರೂಪವಾಗಿದ್ದು ಅದು ಇಂದು ಬಿಡಿ-ಬಿಡಿಯಾಗಿದೆ. ಅದೆಲ್ಲವನ್ನು ಒಟ್ಟುಗೂಡಿಸುವ ಏಕೀಕರಣದ ಕನಸನ್ನು ಈ ಚಿಂತಕರ ಚಿಂತನೆಗಳಲ್ಲಿ ಗುರುತಿಸುವುದರ ಜೊತೆಗೆ ನಮ್ಮ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಪ್ರಯತ್ನವನ್ನು ಕಾಣಬಹುದು.

ಈಚಿನ ಸಂಸ್ಕೃತಿ ಚಿಂತಕರ ಗ್ರಹಿಕೆಗಳು

ಇತ್ತೀಚಿನ ಒಂದು ಎರಡು ದಶಕಗಳಲ್ಲಿ "ಸಂಸ್ಕೃತಿ" ಕುರಿತ ಗ್ರಹಿಕೆಯ ದೃಷ್ಟಿಕೋನ ವಿಶಾಲವಾಗಿ ಬೆಳೆಯುತ್ತಿದೆ. 'ಕರ್ನಾಟಕ ಸಂಸ್ಕೃತಿ'ಯನ್ನು ಇದುವರೆಗೆ ಕೇವಲ ವೈಭವದ, ಆದರ್ಶದ ಕುರಿತಾದ

ಚಿತ್ರಣವನ್ನೇ ಗಮನಿಸಿ 'ಸಂಸ್ಕೃತಿ' ಕಟ್ಟಿಕೊಡುವ ಪ್ರಯತ್ನ ನಡೆದಿತ್ತು. ಆಳುವ ವರ್ಗದ ಜೊತೆ-ಜೊತೆಗೆ ಕೈ ಸೇರಿಸಿ ದುಡಿದ ಬಹುಸಂಖ್ಯಾತ ಸಾಮಾನ್ಯರ ನೋವು-ನಲಿವುಗಳಿಗೆ ಪ್ರತಿಸ್ಪಂದಿಸುವ ಕೆಲಸ ಈಗ ನಡೆಯುತ್ತಿದೆ. ಹಾಗೆ ನೋಡಿದರೆ ಈ ಹಿಂದೆ ಸಾಮಾನ್ಯ ಜನರ ಕುರಿತು ಚಿಂತನೆ ನಡೆದಿಲ್ಲವೆಂದಲ್ಲ. ಆ ಚಿತ್ರಣ ಮಸುಕು-ಮಸುಕಾಗಿ ಕಾಣುತ್ತದಷ್ಟೆ; ಅದೇ ಪ್ರಧಾನವಾಗಿ ನಡೆದಿರಲಲ್ಲ.

'ಭಾರತೀಯ ಸಂಸ್ಕೃತಿ'ಯೆಂಬುದು 'ವೈದಿಕ ಸಂಸ್ಕೃತಿ' ಎಂದೂ ಅದರ ಒಂದು ಭಾಗ 'ಕರ್ನಾಟಕ ಸಂಸ್ಕೃತಿ' ಎಂಬ ಚಿಂತನೆಯನ್ನು ಕೈ ಬಿಟ್ಟು ಭಾಷೆ, ಧರ್ಮಗಳ ಗಡಿಯನ್ನು ಮೀರಿದ ಒಂದು ಸಂಸ್ಕೃತಿಯಿದೆ ಎಂದು ಗುರುತಿಸುತ್ತಾ ಅದನ್ನು ಶೋಧಿಸುವ ನೆಲೆಯಲ್ಲಿ ಇಂದಿನ ಸಂಸ್ಕೃತಿ ಕುರಿತ ಅಧ್ಯಯನ ಕೆಲಸ ಮಾಡುತ್ತಿದೆ. ಲಿಖಿತ ದಾಖಲೆಗಳನ್ನೇ ನೆಚ್ಚಿಕೊಂಡಿದ್ದರಿಂದ, ಕೇವಲ ಮೇಲ್ವರ್ಗದ ಸಂಸ್ಕೃತಿಯನ್ನು 'ಭಾರತೀಯ ಸಂಸ್ಕೃತಿ' ಎಂದು ಗುರುತಿಸುವ ಏಕಮುಖಿ ನೆಲೆಯ ಅನ್ವೇಷಣೆ ನಡೆಯಿತು. ಇಂತಹ ಏಕಮುಖಿ ಸಂಶೋಧನೆಯು ಹಲವು ಅಪಾಯಗಳನ್ನು ಒಡ್ಡುವ ಸಾಧ್ಯತೆಯಿದೆ. ಪರಂಪರೆಯನ್ನು ನಂಬುತ್ತಾ ಅದರೊಳಗಿನ ಆದರ್ಶವನ್ನು ಜೀವನದ ಗುರಿ ಎಂದು ಸಾಮಾನ್ಯೀಕರಣ ಗೊಳಿಸುವ ವ್ಯವಸ್ಥಿತ ರೀತಿಯಾಗುತ್ತದೆ. ಏಕಮುಖಿ ನೆಲೆಯ ಸಂಶೋಧನೆಯ ಕಡೆಯಿಂದ, ಬಹುಮುಖೀ ನೆಲೆಯ ಸಂಶೋಧನೆ ಕಡೆಗೆ ನಡೆಯದಿದ್ದಾಗ ಈ ರೀತಿಯ ಗ್ರಹಿಕೆ ಸಾಮಾನ್ಯವಾಗಿರುತ್ತದೆ. ಈ ಶತಮಾನದ ಪ್ರಾರಂಭದಲ್ಲಿ ಸಂಸ್ಕೃತಿ ಚಿಂತನೆಗಳು ಬಹುತೇಕ ಏಕಮುಖಿ ನೆಲೆಯಲ್ಲಿರುವುದನ್ನು ಗಮನಿಸಬಹುದು. ಕೆಲವರು ಲಿಖಿತ ದಾಖಲೆಯ ಜೊತೆಗೆ ಇತರ ದಾಖಲೆಗಳನ್ನು ಕುರಿತು ಮಾತನಾಡುತ್ತಾರಾದರೂ ಅದು ಆನುಷಂಗಿಕವಾಗಿ ಮಾತ್ರ ಬರುತ್ತದೆ.

ಡಿ.ಆರ್. ನಾಗರಾಜ್ ಅವರು "ಕನ್ನಡ ಸಂಸ್ಕೃತಿ ರೂಪುಗೊಂಡಿರುವುದೇ ವೈದಿಕ, ವೈದಿಕೇತರ ಧಾರೆಗಳ ಮಿಲನ ಮತ್ತು ಸಂಘರ್ಷಗಳಿಂದ; ವೈದಿಕಾಧ್ಯಯನ ಅತ್ಯುತ್ತಮವನ್ನು, ವೈದಿಕೇತರ ಅತ್ಯುತ್ತಮ ಎದುರಾದಗಲೇ ಕನ್ನಡ ಸಂಸ್ಕೃತಿ ತನ್ನ ಶಕ್ತಿ ಸೌಂದರ್ಯವನ್ನು ಪಡೆದಿರುವುದು"[೬] ಎಂದು ಗುರುತಿಸುತ್ತಾರೆ. ಬರಗೂರು ರಾಮಚಂದ್ರಪ್ಪ, ರಹಮತ್ ತರೀಕೆರೆ, ಎಸ್.ಎಸ್. ಹಿರೇಮಠ ಮುಂತಾದವರು ವೈದಿಕ ಸಂಸ್ಕೃತಿಗಿಂತ ಭಿನ್ನವಾಗಿ, "ಕನ್ನಡ ಸಂಸ್ಕೃತಿ" ಕುರಿತು ಆಲೋಚಿಸಬೇಕಾಗಿದೆ ಎನ್ನುತ್ತಾರೆ. 'ಕರ್ನಾಟಕ ಸಂಸ್ಕೃತಿ' ಅಧ್ಯಯನವು, ಕರ್ನಾಟಕದ ಜನರು ನಿತ್ಯ ಎದುರಿಸುತ್ತಿರುವ ಸಮಸ್ಯೆಗಳು, ಅವರ ಬದುಕು. ಆ ಸಮಸ್ಯೆಗಳ ನಿವಾರಣೆಗೆ ಪರಿಹಾರಗಳು ಮುಂತಾದವನ್ನು ಒಳಗೊಳ್ಳುತ್ತಾದೆ. ಬದುಕಿದ ಬದುಕುತ್ತಿರುವ ಎಲ್ಲ ಜನರ ಆಲೋಚನೆಗಳನ್ನು ಕುರಿತು ಯೋಚಿಸಬೇಕು ಎಂದು ರಹಮತ್ ಅವರು ಅಭಿಪ್ರಾಯ

ಪಡುತ್ತಾರೆ. ಎಸ್.ಎಸ್. ಹಿರೇಮಠ ಅವರು, ಧರ್ಮ ದೃಷ್ಟಾರರು ಏನು ಹೇಳಿದ್ದಾರೆ, ಹೇಳಿದರು ಎಂಬುದು ಮುಖ್ಯವಲ್ಲ. ಹೇಳಿದ್ದನ್ನು ಎಷ್ಟು ಹೇಗೆ ಬದುಕುತ್ತಾ ಬರುವಲ್ಲಿ ಸಮಸ್ಯೆಗಳನ್ನು ಎದುರಿಸಿದರು ಎನ್ನುವುದು ಸಂಸ್ಕೃತಿಯ ಪ್ರಶ್ನೆಯಾಗುತ್ತದೆ. 'ಕರ್ನಾಟಕ ಸಂಸ್ಕೃತಿ'ಯನ್ನು ಈ ದೃಷ್ಟಿಯಿಂದ ಹೊಸದಾಗಿ ಆಲೋಚಿಸಬೇಕು ಎಂದಿದ್ದಾರೆ. ಬಹುತೇಕವಾಗಿ ಶಂಬಾ ವೈದಿಕ ನೆಲೆಯಲ್ಲಿಯೇ ಸಂಸ್ಕೃತಿಯನ್ನು ಗ್ರಹಿಸುತ್ತರಾದರೂ, ಅದಕ್ಕೆ ಬಳಸುವ ಆಕರಗಳಲ್ಲಿ, ಅವನ್ನು ವಿವೇಚಿಸುವಲ್ಲಿ ಒಟ್ಟು 'ಮಾನವ ಸಂಸ್ಕೃತಿ' ಕುರಿತು ಆಲೋಚಿಸುವ ವಿಧಾನಗಳಿಂದ ಭಿನ್ನವಾಗುತ್ತಿದೆ. ಈ ಹಿನ್ನೆಲೆಯಲ್ಲಿ 'ಕನ್ನಡ ಸಂಸ್ಕೃತಿ' ಕುರಿತು ಅವರು ಆಲೋಚಿಸಿದ ರೀತಿಗಳು ಮುಂದಿನ ಅಧ್ಯಾಯದಲ್ಲಿ ಸಮೀಕ್ಷೆ ಮತ್ತು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಆಕರ ಗ್ರಂಥಗಳು

೧. ಗೋವಿಂದರಾಜು ಸಿ.ಆರ್., ೧೯೯೫, *ಕನ್ನಡ-ಕರ್ನಾಟಕತ್ವ ಆಲೂರು ವೆಂಕಟರಾಯ್ ಚಿಂತನೆಗಳು*

೨. ಮಾಸ್ತಿ, ೧೯೭೩, *ಜನತೆಯ ಸಂಸ್ಕೃತಿ,* ಪು.೧೬-೧೯

೩. ದೇವುಡು, ೧೯೮೮, *ಕರ್ನಾಟಕ ಸಂಸ್ಕೃತಿ*

೪. ಗುಂಡಪ್ಪ ಡಿ.ವಿ., *ಕನ್ನಡ ಜನತೆಗೋಸ್ಕರ ಕನ್ನಡ,* ಸಂಪುಟ-೧, ವಿಚಾರ ವಿಮರ್ಶೆ, ಡಿ.ವಿ.ಜಿ. ಸಮಗ್ರ ಕೃತಿ ಶ್ರೇಣಿ, ಪುಟ:೨೭೧

೫. ವಿವೇಕ ರೈ ಬಿ.ಎ., (ಸಂ) ೧೯೮೯, *ಮುಳಿಯ ತಿಮ್ಮಪ್ಪಯ್ಯನವರ ಸಾಹಿತ್ಯ*

೬. ಬೇಂದ್ರೆ ದ.ರಾ., ೧೯೭೪, *ಸಾಹಿತ್ಯ ವಿರಾಟ್ ಸ್ವರೂಪ,* ಪು: ೮೨೩

೭. ನಾಗರಾಜ ಡಿ.ಆರ್. ಲೇಖನ: *ವೇದ, ಆಪ್ತವಾಗದೆ ಹೋದ ಮತ್ಸ್ಯ ಕನ್ಯೆಯ ವಿಷಾದ ಗೀತೆ,* ಪುಟ: ೧೧೧

ಅಧ್ಯಾಯ ೪

ಕರ್ನಾಟ-ಕನ್ನಡ-ಕರ್ನಾಟಕ-ನಿಷ್ಪತ್ತಿ,
ಅರ್ಥ ಕುರಿತಾದ ಸಮೀಕ್ಷೆ ಮತ್ತು ವಿಶ್ಲೇಷಣೆ

ನಾವು ಭಾಷೆಯನ್ನು ಉಪಯೋಗಿಸುತ್ತಿರುವಾಗ, ಆ ಭಾಷೆಯ ಶಬ್ದರಚನೆ, ಶಬ್ದಗಳ ನಿಷ್ಪತ್ತಿ, ಅರ್ಥ ಮುಂತಾದವುಗಳ ಬಗ್ಗೆ ತಿಳಿದಿರಬೇಕಾದುದು ಅವಶ್ಯವಷ್ಟೇ. ಬೇರೆ ಭಾಷೆಯನ್ನು ಕಲಿಯುತ್ತಿರುವ ಸಂದರ್ಭದಲ್ಲಿ ಇದು ಅವಶ್ಯವೆನಿಸದಿದ್ದರೂ, ಶಬ್ದಗಳ ಅರ್ಥ ತಿಳಿಯದೇ ಪ್ರಯೋಗಿಸುವುದು ಅನರ್ಥ ಉಂಟುಮಾಡುವ ಸಂಭವವಿರುತ್ತದೆ. ಮಾತೃ ಭಾಷೆಯ ಶಬ್ದಗಳ ಅರ್ಥಗಳು ಸಹಜವಾಗಿ ತಿಳಿದಿರುತ್ತವೆ. ಹಾಗೆಯೇ ನಾವು ಮಾತನಾಡಿದ ಶಬ್ದಗಳ ನಿಷ್ಪತ್ತಿ ತಿಳಿದಿರುವುದೂ ಕೂಡ ಮುಖ್ಯವಾಗಿರುತ್ತದೆ. ಕರ್ಣಾಟಕ, ಕರ್ನಾಟಕ, ಕನ್ನಡ-ಶಬ್ದಗಳ ನಿಷ್ಪತ್ತಿ ಅರ್ಥಗಳ ಬಗೆಗೆ ವಿವಿಧ ವಿದ್ವಾಂಸರು ಚರ್ಚಿಸಿದ್ದಾರೆ. ಬಹುತೇಕ ಈ ಹೇಳಿಕೆಗಳು ವಿರೋಧಾಭಾಸದಿಂದ ಕೂಡಿದ್ದರೂ, ಇವು ಅನೇಕ ಅಂಶಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತವೆ. ನಾಡಿನ ಪ್ರಾಚೀನತೆ, ವೈವಿಧ್ಯತೆಯ ವಿಶೇಷಣಗಳು, ವೈಶಾಲ್ಯತೆ, ಜನಾಂಗದ ಹಿನ್ನೆಲೆ-ಇತ್ಯಾದಿ ವಿಷಯಗಳನ್ನು ಪ್ರಮುಖ ಆಕರಗಳನ್ನಾಗಿ ಸ್ವೀಕರಿಸಿ ಈ ಬಗೆಯ ಚರ್ಚೆಗಳು ಹೊರಟಿವೆ. ನಾಡು-ನುಡಿಯ ಪ್ರಾಚೀನತೆ-ಇತಿಹಾಸ ಮುಂತಾದ ಅಭಿಮಾನದ ವಿಷಯಗಳನ್ನು ಕುರಿತು ಮಾತನಾಡುವಾಗ ಇಂಥ ಭಿನ್ನ ವ್ಯಾಖ್ಯಾನಗಳು ಹೊರಡುವುದು ಸರ್ವೇಸಾಮಾನ್ಯ. ಆದರೂ ಅಂಥ ಪ್ರಯತ್ನ ಶ್ಲಾಘನೀಯವೇ ಸರಿ. ಕರ್ಣಾ(ರ್ನಾ)ಟಕ, ಕನ್ನಡ ಶಬ್ದಗಳ ನಿಷ್ಪತ್ತಿ ಅರ್ಥ ಕುರಿತಾದ ವಿವಿಧ ವಿದ್ವಾಂಸರ ಹೇಳಿಕೆಗಳ ಸಮೀಕ್ಷೆಯನ್ನು ಸ್ಥೂಲವಾಗಿ ಚರ್ಚಿಸುತ್ತಾ, ಜೊತೆಗೆ ಶಂಬಾ ಜೋಶಿಯವರು ಕನ್ನಡ-ಕರ್ನಾಟಕ ಕುರಿತಾದ ವಿಷಯವನ್ನು ಹೇಗೆ ಗ್ರಹಿಸಿದ್ದಾರೆ ಎನ್ನುವುದನ್ನು ಸಮೀಕ್ಷಿಸುವುದು ಈ ಅಧ್ಯಾಯದ ಮುಖ್ಯ ವಿಷಯವಾಗಿದೆ.

ಕ್ರಿ.ಪೂ, ೩ನೇ ಶತಮಾನದಿಂದಲೂ ಕನ್ನಡ-ಕರ್ನಾಟ,ಕರ್ಣಾಟಕ-ಎಂಬೀ ಪದಗಳು, ಜನಾಂಗ, ಭಾಷಾ ದೇಶವಾಚಕಗಳಾಗಿ ಬಳಕೆಯಲ್ಲಿರುವುದನ್ನು ಕಾಣಬಹುದು. 'ಕರ್ನಾಟಕ' ಶಬ್ದದ ಪ್ರಾಚೀನತೆ 'ಸಂಸ್ಕೃತ ಸಾಹಿತ್ಯ'ದಲ್ಲಿ ಈ ರೀತಿಯಿದೆ; ೩ನೇ.ಶ. ಮಹಾಭಾರತದ ಸಭಾಪರ್ವ, ಭೀಷ್ಮಪರ್ವಗಳಲ್ಲಿ, ಶೂದ್ರಕನ 'ಮೃಚ್ಛಕಟಿಕ' ನಾಟಕದಲ್ಲಿ (ಸು ೪೦೦), ವರಾಹ ಮಿಹಿರನ 'ಬೃಹತ್ ಸಂಹಿತೆ'ಯಲ್ಲಿ

'ಮಾರ್ಕಂಡೇಯ ಪುರಾಣ', ಸೋಮದೇವನ 'ಕಥಾಸರಿತ್ಸಾಗರ' ರಾಜಶೇಖರನ 'ಕಾವ್ಯಮಿಮಾಂಸೆ'ಯಲ್ಲಿಯೂ 'ಕರ್ಣಾಟ'ಶಬ್ದದ ಉಲ್ಲೇಖಗಳು ಬಹುವಾಗಿ ಸಿಗುತ್ತವೆ. ತಮಿಳಿನ 'ಶಿಲಪ್ಪದಿಗಾರಂ' (೫.ಶ) ಸಾಹಿತ್ಯ ಕೃತಿಯಲ್ಲಿ 'ಕರುನಾಡರ್' ಎಂದೂ, ಇನ್ನಿತರ ಶಾಸನಗಳಲ್ಲಿ ಕರುನಾಡರ, ಕನ್ನಾಟ, ಕನ್ನಟಕ, ಕನ್ನಡುಗರುಂ, ಮುಂತಾದ ರೂಪುಗಳು ಕಣ್ಣಿಗೆ ಬೀಳುತ್ತವೆ. ಅಪಭ್ರಂಶ, ಪ್ರಾಕೃತದಲ್ಲಿ 'ಕನ್ನಾಡ' ಪಾಳಿಯಲ್ಲಿ 'ಕರ್ಣಾಟ' ಗುಜರಾತಿಯಲ್ಲಿ 'ಕನಡಿ' ಮರಾಠಿಯಲ್ಲಿ 'ಕಾನಡಿ' ಎಂಬ ರೂಪುಗಳು 'ಕರ್ಣಾಟ'ವನ್ನು ಸೂಚಿಸುತ್ತವೆ.[೧]

ಕನ್ನಡ ಸಾಹಿತ್ಯ ಕೃತಿಗಳಲ್ಲಿ ಶಾಸನಗಳಲ್ಲಿ ಈ ಬಗೆಯ ಉಲ್ಲೇಖಗಳು ವಿಪುಲವಾಗಿ ದೊರಕುತ್ತವಷ್ಟೇ ೭-ಅನೇ ಶತಮಾನದ ಶಾಸನಗಳಲ್ಲಿ 'ಕರ್ನಾಟ' 'ಕರ್ನಾಟಕ' 'ಕರ್ಣಾಟ' ಎಂಬ ಶಬ್ದ ರೂಪುಗಳು ದೊರೆಯುತ್ತವೆ. ಸುಮಾರು ೯೦ಕ್ಕೂ ಆಧಿಕ ಶಾಸನಗಳಲ್ಲಿ ಈ ಬಗೆಯ ರೂಪುಗಳಿರುವುದನ್ನು ವಿದ್ವಾಂಸರು ಪತ್ತೆಹಚ್ಚಿದ್ದಾರೆ. ಕವಿರಾಜಮಾರ್ಗ, ಕಬ್ಬಿಗರ ಕಾವ್ಯ ದಂತಹ ಶಾಸ್ತ್ರ-ಕಾವ್ಯ ಕೃತಿಗಳಲ್ಲಿ ದೇಶವಾಚಕವಾಗಿ ಬಳಕೆಗೊಂಡರೆ ಚೆನ್ನಬಸವಣ್ಣ-ನಿಜಗುಣಶಿವಯೋಗಿ ಮೊದಲಾದರಲ್ಲಿ ಕುಲವಾಚಕವಾಗಿ ಈ ಶಬ್ದ ರೂಪವು ಬಳಕೆಗೊಂಡಿದೆ. ಒಂದು ಕಾಲದಲ್ಲಿ ಸೀಮಿತ ವ್ಯಾಪ್ತಿಗೆ ಕರ್ಣಾಟಕ ಹೆಸರಿದ್ದು ಅನಂತರದ ಕಾಲದಲ್ಲಿ ವಿಪರೀತ (ತಿರುಳ್ಗನ್ನಡ) ಅರ್ಥ ಪಡೆದಿತ್ತೆಂದು ಡಾ. ಕಾಲ್ಡ್‌ವೆಲ್ ಹೇಳಿದ್ದಾರೆ.

ನಮ್ಮ ದೇಶಕ್ಕೆ ಪಾಶ್ಚಾತ್ಯರ ಬರುವಿಕೆಯಿಂದ ಅನೇಕ ಬದಲಾವಣೆಗಳು ಉಂಟಾದವು. ನಮ್ಮ ಸಾಂಸ್ಕೃತಿಕ ವಲಯದಲ್ಲಿ ತೀಕ್ಷ್ಣವಾದ ಬದಲಾವಣೆಗಳು ಉಂಟಾಗತೊಡಗಿದವು. ಅವರ ಸಾಂಸ್ಕೃತಿಕ ವಿಚಾರಗಳು ನಮ್ಮಲ್ಲಿ ಬರತೊಡಗಿದಂತೆ, ನಮ್ಮೊಳಗಿನ ಅನೇಕ ವಿಚಾರಗಳ ಕುರಿತು ಅವರು ಯೋಚಿಸತೊಡಗಿದರು. ಈ ಸಂದರ್ಭದಲ್ಲಿ 'ಕನ್ನಡ' ಶಬ್ದ ವಿಶೇಷರೂಪಗಳನ್ನು ಪಡೆದು ಬಳಕೆಯಾಗತೊಡಗಿತು. ಡಾ. ಬಿ.ಎ.ಸಾಲೆತೊರೆ ಅವರು, ಇದನ್ನು ಈ ರೀತಿ ಗುರುತಿಸುತ್ತಾರೆ. "೧೫೧೬ರಲ್ಲಿ Canari ೧೫೨೦ರಲ್ಲಿ Canarim ೧೫೫೨ರಲ್ಲಿ Canarij ೧೬೧೫ರಲ್ಲಿ Canarin ೧೬೫೪ರಲ್ಲಿ Canary ಎಂದೂ ನಡುನಡುವೆ Carnatic, Carnate, Karnat ಎಂಬ ರೂಪಗಳು ಬಳಕೆಯಲ್ಲಿದ್ದವು" ಎನ್ನುತ್ತಾರೆ. ಮೇಲಿನ ವಿವರಣೆಯಿಂದ ತಿಳಿದು ಬರುವ ಅಂಶವೆಂದರೆ. ಕನ್ನಡ ನಾಡು ಕ್ರಿ. ಪೂ. ದಿಂದಲೂ ಬಳಕೆಯಲ್ಲಿತ್ತೆಂದು ಅದಕ್ಕೆ ತನ್ನದೆ ಆದ ಅಸ್ತಿತ್ವ ಇತ್ತೆಂದು ಹೇಳಬಹುದು.[೨]

ಕರ್ನಾಟಕ ನಿಷ್ಪತ್ತಿ

ಕನ್ನಡ, ಕರ್ಣಾಟ, ಕರ್ನಾಟಕ-ಜನಾಂಗ-ಭಾಷೆ-ಪ್ರದೇಶ ಸೂಚಕವಾದ ಪದಗಳೆಂದು ಬಹುತೇಕವಾಗಿ ಎಲ್ಲರೂ ಒಪ್ಪುತ್ತಾರೆ. ಆದರೆ, ಇವುಗಳ ನಿಷ್ಪತ್ತಿಗಳನ್ನು ಕುರಿತು ಭಿನ್ನ ಭಿನ್ನ ನಿಲುವುಗಳನ್ನು ಹೊಂದಿದ್ದಾರೆ. ಆಧುನಿಕ ಭಾಷಾ ವಿಜ್ಞಾನಿಗಳು "ಕನ್ನಡ"ವೇ ಮೂಲಪದವೆಂದು ಇದರಿಂದ 'ಕರ್ನಾಟ' ರೂಪುಗೊಂಡಿತ್ತೆಂದು, ನಂತರ 'ಸಂಸ್ಕೃತ'ದಲ್ಲಿ 'ಕರ್ಣಾಟ' ಆಯಿತೆಯೆಂದು ವಾದಿಸುತ್ತಾರೆ.

ಸಂಸ್ಕೃತ ಸಾಹಿತ್ಯದಲ್ಲಿ ಕಂಡು ಬರುವ 'ಕರ್ಣಾಟ' ಪದದ ಉಲ್ಲೇಖದ ಆಧಾರದಿಂದ. (ಕರ್ಣಾಟ) ಅದರ ನಿಷ್ಪತ್ತಿಯನ್ನು ಮೊದಲಿಗೆ ಗಮನಿಸಬಹುದು. "ಶಬ್ದರತ್ನಾವಲೀ"ಯಲ್ಲಿ "ಕರ್ಣೇಷು ಆಟತಿ ಪ್ರಭೂತ ಯಶಸ್ವಿನ ಏತದ್ದೇಶಸ್ಯ ರಾಜ್ಞೋ ಗುಣಾದಿ ಕೀರ್ತನೇನ ಸರ್ವೇಷಾಂ ಕರ್ಣೇಷು ಭ್ರಮತೀತಿ" ಎಂಬ ವಾಕ್ಯ ಬರುತ್ತದೆ. (ಕರ್ಣ+ಆಟ+ಅಚ) ಅಂದರೆ ಯಾವ ದೇಶದ ರಾಜನ ಕೀರ್ತಿ ಎಲ್ಲರ ಕಿವಿಯಲ್ಲಿಯೂ ಮೊಳಗುತ್ತದಯೋ ಆ ದೇಶ ಕರ್ಣಾಟ ಎಂದು ಅದರ ಅರ್ಥ. ಈ ವಾಕ್ಯ ಕನ್ನಡ ನಾಡಿನ ರಾಜರ ಕೀರ್ತಿ ವಿಶೇಷವಾಗಿ. ಪ್ರಸಿದ್ಧಿ ಪಡೆದಿತ್ತೆಂಬುದನ್ನು ಸೂಚಿಸುತ್ತದೆ. ಬೇದನಾರ್ಥಕವಾದ 'ಕರ್ಣ' ಧಾತುವಿನಿಂದ 'ಕರ್ಣಾಟ' ಪದ ಬಂದಿದೆಯೆಂದು,ಹಾಗೆಂದರೆ, ದಿವ್ಯ ಭಾಷೆ(ಸಂಸ್ಕೃತಿ?)ಗಿಂತ ಭಿನ್ನವಾದ ಭಾಷೆ ಎಂದರ್ಥ ಎಂದಿದ್ದಾನೆ ಜೈನ ಪಂಡಿತ ಕೇಶವವರ್ಣಿ(೧೩ ಶ). 'ಸ್ಕಂದ ಪುರಾಣ'. ಈ ನಾಡಿಗೆ ಹೆಸರು ಬಂದಿರುವುದು ಕರ್ಣಾಟ ಎಂಬ 'ರಾಕ್ಷಸ'ನಿಂದ ಎಂದು ಹೇಳುತ್ತದೆ. ಈ ರೀತಿಯ ವಿಪರೀತಗಳು ಕೇವಲ ಕವಿಕಲ್ಪಿತಗಳು ಎನ್ನಬಹುದು. ಬೇರೆ ಭಾಷಿಕರು ತಮ್ಮ(ನಮ್ಮ) ಬಗ್ಗೆ ಬರೆಯುವ ಸಂದರ್ಭದಲ್ಲಿ ಇಂಥ ಹೇಳಿಕೆಗಳು ಬರುವುದು ಸಹಜವೆನಿಸುತ್ತದೆ. ರಾ.ನರಸಿಂಹಾಚಾರ್ ಇವುಗಳನ್ನು 'ಕವಿಕಲ್ಪಿತ'ಗಳೆಂದು ಟೀಕಿಸುತ್ತಾರೆ.

ರಾ.ನರಸಿಂಹಾಚಾರ್, ಕಮ್ಮಿತ್ತು+ನಾಡು=ಕನ್ನಾಡು> ಕನ್ನಡು> ಕನ್ನಡ ಎಂಬ ನಿಷ್ಪತ್ತಿಯನ್ನು ಸೂಚಿಸುತ್ತಾರೆ. 'ಕಮ್ಮಿತ್ತು' ಎಂಬುದು ಪರಿಮಳವಾಚಿ ರೂಪ. ಕನ್ನಡನಾಡು ಗಂಧ ತೇಗ ಮರಗಳಿಂದ ತಾವರೆಯ ಕೊಳಗಳಿಂದಲೂ ಶೋಭಿಸುತ್ತದೆಂದು, ಅದಕ್ಕಾಗಿ 'ಕಮ್ಮಿತ್ತು' ಎಂಬ ವಿಶೇಷಣ ಅನುರೂಪವಾದುದು ಎನ್ನುತ್ತಾರೆ. ರಾಜವಾಡೆಯವರು ಮನುಸ್ಮೃತಿಯಲ್ಲಿ ಬರುವ ಕರಣ ಮತ್ತು ನಟ ಜನಾಂಗಗಳ ಸೂಚಕ ಶಬ್ದಗಳನ್ನು ಗಮನಿಸಿ 'ಕರಣ+ನಟ=ಕರ್ಣಾಟ ಎಂದು ನಿಷ್ಪತ್ತಿಯಾಗಿರಬೇಕು ಎನ್ನುತ್ತಾರೆ. ಬಹುತೇಕವಾಗಿ ರಾಜವಾಡೆಯವರ ವಾದವನ್ನು ಶಂಬಾ ಒಪ್ಪುತ್ತಾ ಅವರಿಗಿಂತ ಹೆಚ್ಚಿನ ಉಲ್ಲೇಖಗಳನ್ನು ನೀಡಿ 'ಕಂನಡ' ಮೂಲ ಶಬ್ದವೆಂದು ಗುರುತಿಸಿರುವುದನ್ನು ಗಮನಿಸಬಹುದು.

ಡಾ. ಗುಡರ್ಟ್ ಅವರು 'ಕರುನಾಡು' ಎಂಬುದನ್ನು ಕಪ್ಪುಮಣ್ಣಿನ ಭೂಭಾಗ ಎಂದಿದ್ದಾರೆ. ಇವರ ವಾದ ಸರಣಿಯನ್ನು ಹೆಚ್ಚು ಕಡಿಮೆ ಡಾ. ಕಾಲ್ಡ್‌ವೆಲ್, ಬಿ.ಎಂ.ಶ್ರೀ.ಕಂಠಯ್ಯ ಅವರು ಅನುಸರಿಸಿರುವುದನ್ನು ಕಾಣಬಹುದು. 'ಕರ್‌ನಾಡು' ಸಮುದ್ರ ಮಟ್ಟಕ್ಕಿಂತ ಎತ್ತರದಲ್ಲಿದೆ. 'ಕರ್‌ನಾಡು' ಎಂದರೆ ಎತ್ತರವಾದ ಭೂಮಿ ಎಂದು ನಾರಾಯಣರಾಯರು, ತಮಿಳು ನಾಡಿನವರು ನಮಗಿಂತ ಮೇಲಿನ ನಾಡಿನವರನ್ನು ಕರುನಾಡ-ಕರುನಡ ಎಂದು ಕರೆಯುತ್ತಿರಬಹುದು ಎಂಬುದು ಆರ್.ತಾತಾಚಾರ್ಯರ ಊಹಿತ ಅಭಿಪ್ರಾಯ. ಕರು, ಕರಂ. ಎಂದರೆ ದೊಡ್ಡ, ವಿಸ್ತಾರವಾದ, ಮಹಾ, ಎಂಬರ್ಥಗಳಿರುವುದನ್ನು ಮೇಲಿನವರ ಅಭಿಪ್ರಾಯಗಳಿಂದ ತಿಳಿಯಬಹುದು. ಈ ಎಲ್ಲ ಅರ್ಥಗಳು 'ಮಹಾರಾಷ್ಟ್ರ'ವನ್ನೇ ಬೆಂಬಲಿಸುತ್ತವೆ. ಆದುದರಿಂದ 'ಕರುನಾಡು ಎಂದರೆ 'ಮಹಾರಾಷ್ಟ್ರ' ಕರುನಾಡು>ಕರ್ >ನಾಡು>ಕನ್ನಾಡು(ದೊಡ್ಡ ನಾಡು ಮಹಾರಾಷ್ಟ್ರ). ಕನ್ನಡ ಸಮಾಸ ಪದ ಸಂಸ್ಕೃತದ ಬಾಯಲ್ಲಿ 'ಕರ್ಣಾಟಕ' ಆಗಿರಬೇಕು ಎಂದು ಭಿನ್ನವಾದ ವಾದವನ್ನೇ ಗೋವಿಂದ ಪೈ ಅವರು ಮಂಡಿಸುತ್ತಾರೆ. ಇವರನ್ನು ರಾ.ಹ.ದೇಶಪಾಂಡೆ ಅವರು ಬೆಂಬಲಿಸುತ್ತಾರೆ. ಕರು, ಕರುಂ, ಕಡು ಎಂಬ ಪದಗಳು ದೊಡ್ಡ ಮಹಾ ಎಂಬರ್ಥ ಹೊಂದಿದ್ದು ಅಂತಹ ನಾಡು ಮಹಾರಾಷ್ಟ್ರವೇ ಏಕಾಗಬೇಕು? ಆಗಿನ ಕಾಲದಲ್ಲಿ ಕನ್ನಾಡು ಕೂಡ ವಿಸ್ತಾರವಾದ ಭೂವ್ಯಾಪ್ತಿಯನ್ನು ಹೊಂದಿತ್ತಲ್ಲ; ಎಂಬುದನ್ನು ನಾವು ಗಮನಿಸಬಹುದು ಎನಿಸುತ್ತದೆ.[೩]

ದ.ರಾ. ಬೇಂದ್ರೆ ಮತ್ತು ಬೇಟಗೇರಿ ಕೃಷ್ಣಶರ್ಮರು ಕನ್+ಅಳ್=ಕನ್ನಳ್, ಕನ್ನಡ. ಕನ್-ಅಳ್ ಎಂದರೆ ಒಡಮೂಡುವುದನ್ನು ಉಳ್ಳದ್ದು; ಭಾವನೆಗಳನ್ನು ಒಡಮೂಡಿಸುವಂಥದ್ದು=ಕನ್ನಡ ಎಂದು ಹೇಳಿದ್ದಾರೆ. ಫಾದರ್ ಹೆರಾಸ್ 'ಕರ್ಣಾಟಕ' ಎಂಬುದು ಸಂಸ್ಕೃತ ರೂಪ ಎಂದು ಗುರುತಿಸಿದರೆ ಉತ್ತಂಗಿ ಚೆನ್ನಪ್ಪ 'ಅಡಿಯಲ್ಲಿ ಕಣ್ಣುಳ್ಳವರು ಯಾರೋ ಅವರೇ ಕನ್ನಡಿಗರು' ಎಂದು ಜನಾಂಗವಾಚಿಯಾಗಿ ಗುರುತಿಸುತ್ತಾರೆ. ಪ್ರೊ.ಜಿ.ಪಿ.ರಾಜರತ್ನಂ, ಪುನ್ನಾಡ>ಪುನ್ನಾಟ ಆದಂತೆ, ಕರ್ ನಾಡು 'ಕರ್ಣಾಟ' ಆಗಿರಬಾರದೇಕೆ? ಎನ್ನುತ್ತಾರೆ.[೪] ಕನ್ನಡ-ಕರ್ಣಾಟ ಕರ್ಣಾಟಕ-ಎಂಬೀ ಪದಗಳು ಪ್ರದೇಶ ಭಾಷಾವಾಚಿಯಾಗಿ ಬಹುಕಾಲದಿಂದ ಬಳಕೆಯಲ್ಲಿವೆ ಎಂದೂ ಅವು 'ಕರುನಾಡು' ಎಂಬುದರಿಂದ ಉತ್ಪನ್ನವಾದವುಗಳೆಂದೂ ಕನ್ನಡ ಎಂಬುದು ಸಂಸ್ಕೃತದ 'ಕರ್ಣಾಟ'ದಿಂದ ತದ್ಭವವಾಗಿ ಬಂದುದಲ್ಲವೆಂದೂ ಪ್ರ.ಗೋ. ಕುಲಕರಣಿ ತೀರ್ಮಾನಕ್ಕೆ ಬರುತ್ತಾರೆ.[೫]

ಶಂಬಾ ಜೋಶಿಯವರು ತಮ್ಮ ಕನ್ನಡದ ನೆಲೆ, ಕಂನುಡಿಯ ಹುಟ್ಟು ಮತ್ತಿತರ ಕೃತಿಗಳಲ್ಲಿ 'ಕರ್ಣಾಟ-ಕನ್ನಡ' ಶಬ್ದಗಳ ನಿಷ್ಪತ್ತಿ ಬಗೆಗೆ ಮೇಲಿನವರಿಗಿಂತ ಭಿನ್ನವಾಗಿ ವಿವೇಚಿಸಿರುವುದನ್ನು

ಕಾಣಬಹುದು. ಈ ಪದಗಳನ್ನು ಅವರು ಜನಾಂಗ, ಮತ್ತು ಪ್ರದೇಶಸೂಚಕವಾಗಿ ವಿಶ್ಲೇಷಿಸಲು ಪ್ರಯತ್ನಿಸಿರುವುದನ್ನು ಗಮನಿಸಬಹುದು. ಮತ್ಸ್ಯಪುರಾಣ, ಮನುಸ್ಮೃತಿ ಮೊದಲಾದ ಸಂಸ್ಕೃತ ಗ್ರಂಥಗಳಲ್ಲಿ ಹಾಗೂ ಆನೇಕ ಶಾಸನಗಳಲ್ಲಿ ಕನ್ನಡ ನಾಡಿನ ಮೂಲ ಜನಾಂಗದ ಉಲ್ಲೇಖಗಳು ದೊರೆಯುತ್ತವೆ. ಅವುಗಳ ಆಧಾರದ ಮೇಲಿಂದ ಕನ್ನಡನಾಡಿನ ಮೂಲ ಜನಾಂಗ, ಅದರ ನಿಷ್ಪತ್ತಿ ಕುರಿತ ಕಡೆ ಅವರು ದೃಷ್ಟಿಹಾಯಿಸಿದ್ದಾರೆ. ರಾಜವಾಡೆಯವರ ತರ್ಕವನ್ನು ಇನ್ನಷ್ಟು ಬೆಳಸಿ ಅದಕ್ಕೆ ತರ್ಕಬದ್ಧ ಆಕರಗಳನ್ನು ನೀಡುತ್ತಾ, 'ಕಂ'-ಕನ್ ಎಂಬ ಜನಾಂಗವೊಂದು ಇದ್ದಿರಬೇಕೆಂದು; 'ಕಂ' ಜನಾಂಗದವರ ನಾಡು 'ಕಂನಾಡು' ಎಂದೂ ಅವರ ನುಡಿಗೆ 'ಕಂನುಡಿ' ಎಂಬ ಹೆಸರು ಬಂದಿರಬೇಕೆಂದೂ ಸಾಧಾರವಾಗಿ ವಿವರಿಸುತ್ತಾರೆ. ರಾ.ಯ. ಧಾರವಾಡಕರ ಅವರು ಇವರ ವಾದಸರಣಿಯನ್ನು ಬೆಂಬಲಿಸಿರುವುದನ್ನು ಕಾಣಬಹುದು.

ಶಂಬಾ ಅವರ ತೀರ್ಮಾನವನ್ನು ವಿರೋಧಿಸುವವರು, ಜನಾಂಗ ಸೂಚಕದಿಂದಲೇ ನಾಡಿಗೆ ಹೆಸರು ಬಂತು ಎಂಬುದನ್ನು ಒಪ್ಪುವುದಿಲ್ಲ. ಅಲ್ಲದೆ, ಕಣ್ಣ-ಕಳ್ ಜನಾಂಗದ ಬಗೆಗೆ ಪ್ರಮಾಣೀಭೂತ ಸಾಕ್ಷ್ಯಗಳನ್ನು ಒದಗಿಸಿಲ್ಲ. ಆ ಜನಾಂಗ (ದನಗಾಹಿ)ದಿಂದಲೇ ನಾಡಿಗೆ ಹೆಸರು ಬರುವಷ್ಟು ಪ್ರಭಲರಾಗಿದ್ದರೆಂದು ಹೇಳಲು ಆಧಾರಗಳಿಲ್ಲ ಎಂದು ಟೀಕಿಸುತ್ತಾರೆ. ಪುಣೆಯ ಮಹಾಭಾರತ ಆವೃತ್ತಿ ಒಂದರಲ್ಲಿ 'ಕರ್ನಾಟಕ' ಬದಲಿಗೆ 'ಉನ್ನತ್ಯಕ' ಎಂದಿದೆ. 'ಉನ್ನತ್ಯಕ' ಎಂದರೆ ಎತ್ತರವಾದ ಭೂಮಿ ಎಂದು ಅರ್ಥ. 'ಕರುನಾಟ' ಎಂದರೆ ಕೊಡ ಎತ್ತರವಾದದ್ದು ಎಂಬ ಅರ್ಥಕೊಡುವುದರಿಂದ ಉನ್ನತ್ಯಕ ಅಥವಾ ಎತ್ತರವಾದ ಭೂಮಿ ಎಂದೇ ಅರ್ಥವಾಗುತ್ತದೆ. 'ಕರ್‌ನಾಟ' ರೂಪದಿಂದ 'ಕರ್ನಾಟಕ' ಪದ ಬಂದಿದೆಯೆಂದು 'ಕರ್ನಾಟಕ ಗೆಜೆಟಿಯರ್'ನಲ್ಲಿ ಹೇಳಿದೆ.

ಮೇಲಿನ ವಿವರಣೆಯಿಂದ ತಿಳಿದು ಬರುವ ಸಂಗತಿಯೆಂದರೆ.,'ಕರ್ನಾಟ' ಶಬ್ದದ ನಿಷ್ಪತ್ತಿ ಬಗೆಗೆ ಏಕಾಭಿಪ್ರಾಯಗಳಿಲ್ಲದ್ದು. ಶಬ್ದಾರ್ಥದ ಜೊತೆಗೆ ಶಬ್ದರೂಪದ ವಿಚಾರವಾಗಿಯೂ ಭಿನ್ನಭಿಪ್ರಾಯಗಳವೆ. 'ಕನ್ನಡ' ಎಂಬುದೇ ಮೂಲ ಪದವೆಂದು ಕೆಲವರು 'ಕರ್ನಾಟ' (ಸಂಸ್ಕೃತ ಪದ) ಪದದ ತದ್ಭವ ರೂಪ 'ಕನ್ನಡ'ವೆಂದು ಮತ್ತೆ ಕೆಲವರು ಹೇಳಿದ್ದಾರೆ. ಈ ನಿಷ್ಪತ್ತಿಯ ಜೊತೆ-ಜೊತೆಗೆ 'ಣ' ಮತ್ತು 'ನ' ಕಾರಗಳ ಚರ್ಚೆಯು ನಡೆದಿದೆ. ಈ ಹಿನ್ನೆಲೆಯಲ್ಲಿಯೇ "ಕರ್ನಾಟಕ ಸಾಹಿತ್ಯ ಪರಿಷತ್ತು" "ಕನ್ನಡ ಸಾಹಿತ್ಯ ಪರಿಷತ್ತು" ಎಂದು ನಾಮ ಬದಲಿಸಿಕೊಂಡಿರುವುದನ್ನು ಚಾರಿತ್ರಿಕವಾಗಿ ಕಾಣಬಹುದು. ಆಧುನಿಕರು 'ಕರ್ನಾಟಕ' ಎಂಬ ರೂಪವನ್ನೇ ಒಪ್ಪಿದ್ದಾರೆ. ಅಲ್ಲದೆ ನಮ್ಮ ಸರ್ಕಾರ ಕೂಡ 'ಕರ್ನಾಟಕ'(೧೯೭೩) ಎಂದೇ ಮಾನ್ಯ ಮಾಡಿದೆ.

'ಕನ್ನಡನಾಡು' ಎಂಬ ರೂಪ 'ದ್ವಿರುಕ್ತಿ' ದೋಷದಿಂದ ಕೂಡಿದೆ ಎನ್ನುತ್ತಾರೆ ಶಂಬಾ ಜೋಶಿಯವರು. ಕನ್ನಡ ಎಂಬುದು ಕನ್+ನಡ 'ನಡ' ಎಂದರೆ ನಾಡು ಎಂದರ್ಥ. ಅದಕ್ಕೆ ಮತ್ತೆ 'ನಾಡು' ಎಂಬ ರೂಪವನ್ನು ಸೇರಿಸಿ ಬಳಸುತ್ತಿದ್ದೇವೆ ಇದು ಅರಿವು-ಮರೆಯಾಗಿರುವುದರ ಲಕ್ಷಣ ಎಂದು ಗುರುತಿಸುತ್ತಾರೆ. ಇದುವರೆಗೆ ಆದ ತಪ್ಪನ್ನು ತಪ್ಪು ಎಂದು ಗೊತ್ತಾದ ಮೇಲೆ ಅದನ್ನು ತಿದ್ದಿ ನಡೆಯುವುದು ಜೀವಂತಿಕೆಯ ಲಕ್ಷಣ; ಅದನ್ನು ಬಿಟ್ಟು ತಪ್ಪನ್ನೇ ಒಪ್ಪು ಎಂದು ಗ್ರಹಿಸುತ್ತಾ ಹೊರಟಾಗ ಅನಾಹುತಗಳಾಗುವ ಸಂಭವವುಂಟೆಂದು ಎಚ್ಚರಿಸುತ್ತಾರೆ. 'ಣ'ಮತ್ತು'ನ' ಕಾರಗಳ ಚರ್ಚೆಗೆ ತೊಡಗಿದೆ. ಕನ್ನಡಿಗರ ಮೂಲದ ಬಗ್ಗೆ ಆಲೋಚಿಸುತ್ತಾರೆ. ಕನ್ನಡ ನಾಡಿಗೆ 'ಕನ್ನಾಡು' ಎಂದೂ ಕನ್ನಡಿಗರ ನುಡಿಗೆ 'ಕಂನುಡಿ'ಎಂದು ಕರೆಯಲು ಬಳಸಲು ಅವರು ಸಲಹೆ ನೀಡುತ್ತಾರೆ. ನುಡಿಯೇ ನಾಡಿನ ಉಸಿರು; ಕಂನುಡಿ ಬದುಕಿರುವವರೆಗೂ ಕನ್ನಾಡು ಬದುಕಿರುತ್ತದೆ. ಕಂನುಡಿ ನಂದಿದರೆ, ಕುಗ್ಗಿದ್ದರೆ, ಕನ್ನಾಡು ಸೊರಗಿದಂತೆ. ಕೇವಲ ಒಣಹೆಮ್ಮೆಯ ಜಂಭದ ಮಾತಿನಿಂದ ಏನೂ ಸಾಧ್ಯವಿಲ್ಲ, ಕನ್ನಡದ ಬಗೆಗೆ ಕಳಕಳಿ ಇರಬೇಕು ಎನ್ನುವ ಶಂಬಾ ಜೋಶಿಯವರ ನಿಲುವು ಪ್ರಸ್ತುತ ಸಮಯದಲ್ಲಿ ಕನ್ನಡಿಗರಿಗೆ ಎಚ್ಚರಿಕೆಯ ಗಂಟೆಯಾಗಬೇಕಾಗಿದೆ.

ಆಕರ ಗ್ರಂಥಗಳು

೧. ಕನ್ನಡ ಭಾಷಾ ಚರಿತ್ರೆ, ಪು.೫೦.

೨. ಕನ್ನಡ ವಿಷಯ ವಿಶ್ವಕೋಶ, ಪು.೨೭೬-೭೮.

೩. ಕನ್ನಡ ಸಾಹಿತ್ಯ ಚರಿತ್ರೆ, ಮೊದಲ ಸಂಪುಟ, ಪು.೨೦೯-೨೩೪.

೪. ಕನ್ನಡ ಭಾಷಾ ಚರಿತ್ರೆ, ಪು.೧೨೩-೧೨೯

೫. ಕನ್ನಡ ಭಾಷೆಯ ಚರಿತ್ರೆ, ಪು.೩-೨೭, ಪ್ರಸ್ತಾವನ ಕಾಂಡ

ಅಧ್ಯಾಯ ೫

ಕಂನಾಡು-ಕಂನುಡಿ ಕುರಿತ ಪರಿಕಲ್ಪನೆ.

ಶಂಬಾ ಈ ಶತಮಾನ ಕಂಡ ಧೀಮಂತ ಸಂಶೋಧಕ, ಬಹುಶ್ರುತ ವ್ಯಕ್ತಿ. ಅವರ ಕೃತಿಗಳ ಅಧ್ಯಯನ ಸುಲಭಸಾಧ್ಯವಲ್ಲ. 'ಕಂನಾಡ ಸಂಸ್ಕೃತಿ' ಕುರಿತಾದ ಕೃತಿಗಳು; 'ಭಾರತೀಯ ಸಂಸ್ಕೃತಿ'ಯನ್ನು ಕುರಿತಾದ ಕೃತಿಗಳು; 'ಜಾಗತಿಕ ಸಂಸ್ಕೃತಿ' ಕುರಿತಾದ ಕೃತಿಗಳು ಎಂದು ಮುಖ್ಯವಾಗಿ ಮೂರು ರೀತಿಯಲ್ಲಿ ಅವರ ಅಧ್ಯಯನವನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ಅವರ ಒಟ್ಟು ಕೃತಿಗಳನ್ನು. 'ಕರ್ನಾಟಕ' ಏಕೀಕರಣದ ಚಳುವಳಿಯ ಸಂದರ್ಭದಲ್ಲಿ ಕಂನಾಡ ಸಂಸ್ಕೃತಿಯನ್ನು ವೈಭವದ ಆದರ್ಶದ ನೆಲೆಯಲ್ಲಿ, ಗುರುತಿಸುತ್ತಿದ್ದ ಸಮಯದಲ್ಲಿ, ಜೋಶಿಯವರು ಆ ವೈಭವದ ಹಿಂದೆ ಏನಾದರೂ ಸತ್ತ್ವವಿದೆಯೊ ಎಂದು ಹುಡುಕಹೊರಟ ಸಂದರ್ಭದಲ್ಲಿ ನೋಡಬೇಕಾಗಿದೆ. ಕನ್ನಡಿಗರು ಯಾರು? ಅವರ ಮೂಲ ಎಲ್ಲಿದೆ? ಯಾವ ಜನಾಂಗದಿಂದ ಇಂದಿನ ರೂಪವನ್ನು ಪಡೆದಿದ್ದಾರೆ? ಅವರ ಸಂಸ್ಕೃತಿ-ಸಮಾಜದ ಮೌಲ್ಯ ಎಂಥದ್ದು? ಎಂಬುದನ್ನು ಅನ್ವೇಷಿಸಲು ತೊಡಗಿದ್ದೂ ಮಹತ್ವದ ಸಂಗತಿ. ಕಂನಡ ಸಂಸ್ಕೃತಿಯ ಅಧ್ಯಯನದ ಕಾಲಕ್ಕೆ ಅಲ್ಲಿ ತಲೆದೋರಿದ ತಾತ್ವಿಕ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಾ ಭಾರತೀಯ ಸಂಸ್ಕೃತಿ, ಆ ಮುಖಾಂತರ ಇಡೀ 'ಮಾನವ ಸಂಸ್ಕೃತಿ' ಕಡೆಗೆ ಅವರು ದೃಷ್ಟಿಹಾಯಿಸುತ್ತಾರೆ. ಅವರ ವಿಶಿಷ್ಟವಾದ ವಾದಸರಣಿಯನ್ನು ಹಿಡಿದುಹೋಗಲು ನಮಗೆ ಹಲವು ಶಾಸ್ತ್ರಗಳ ಅಧ್ಯಯನ ಅವಶ್ಯವೇ ಸರಿ. ಒಮ್ಮಿಂದೊಮ್ಮೆಗೆ ಇತಿಹಾಸದಿಂದ, ವೇದಕಾಲಕ್ಕೆ; ಮಾನವಶಾಸ್ತ್ರಕ್ಕೆ- ಹೀಗೆ ಹತ್ತು ಹಲವು ಕ್ಷೇತ್ರಗಳನ್ನು ತಮ್ಮ ಕಾರ್ಯವ್ಯಾಪ್ತಿಯೊಳಗೆ ತಗೆದುಕೊಳ್ಳುತ್ತಾ, ತಮ್ಮ ವಿಚಾರಗಳನ್ನು ಮಂಡಿಸುವ ಶಂಬಾ ಅವರು ಸುಲಭವಾಗಿ ನಮ್ಮ ಕೈಗೆ ಸಿಗುವುದಿಲ್ಲ. ವಿದ್ವಾಂಸರ ಕೈಗೆ ಎಟುಕದ ಅವರ ಅಧ್ಯಯನ ಕ್ರಮ; ಚಿಂತಿಸಿದ ಚಿಂತನೆಗಳನ್ನು ಮಂಡಿಸುವ ರೀತಿ, ಅವರ ಬರೆವಣಿಗೆಯ ಶೈಲಿ, ಸಾಮಾನ್ಯರ ಪಾಲಿಗಂತೂ ಗಗನಕುಸುಮ. ಬಹುಶಃ ಈ ಹಿನ್ನೆಲೆಯಲ್ಲಿ ಶಂಬಾ ಅವರ ಬರೆಹಗಳು ಕ್ಲಿಷ್ಟವಾದ್ದು; ಅರ್ಥವಾಗದ್ದು ಎಂಬ ಟೀಕೆಗಳು ಬಂದಿವೆ ಎನಿಸುತ್ತದೆ.[೧]

ಕನ್ನಡ ನಾಡು-ನುಡಿ-ಸಂಸ್ಕೃತಿಯ ಬಗೆಗೆ ಬಹುಮುಖವಾಗಿ ಚಿಂತಿಸಿದ, ಹಾಗೂ ತಮ್ಮದೇ ಆದ ನೂತನ ಸಂಶೋಧನಾ ಮಾರ್ಗದಲ್ಲಿ, ಸಂಶೋಧನೆ ಕೈಗೊಂಡ ಶಂಬಾ ಅವರು ಆ ಕ್ಷೇತ್ರದಲ್ಲಿ ಒಂಟಿಸಲಗವೆನಿಸಿದ್ದಾರೆ. ತಮ್ಮ ಚಿಂತನ-ಮಂಥನದಿಂದ ಕನ್ನಡ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಆಯಾಮ ನೀಡಿದವರಾಗಿದ್ದಾರೆ. ಮೂಲತಃ ವಿಚಾರವಾದಿಗಳಾಗಿದ್ದ ಶಂಬಾ ಅರ್ಥ ಜಿಜ್ಞಾಸೆಗೆ ಬೆಲೆ ನೀಡುತ್ತಾರೆ. ಶಾಸನಾದಿಗಳು ಕಾವ್ಯಗಳು ಮುಂತಾದ ಲಿಖಿತ ಆಕರಗಳಿಗೆ ಬೆಲೆ ನೀಡಿ ಸಂಸ್ಕೃತಿ ಅಧ್ಯಯನ ಕೈಗೊಳ್ಳುತ್ತಿದ್ದ ಆ ಕಾಲದಲ್ಲಿ ಜನಪದ ಆಚಾರ-ವಿಚಾರ ಸಂಪ್ರದಾಯಗಳಿಗೆ ಬೆಲೆ ಇರಲಿಲ್ಲ. ಇವುಗಳನ್ನೊಳಗೊಂಡಿರದ ಅಧ್ಯಯನ ಪೂರ್ಣವಾಗಲಾರದು ಎಂದು ಮನಗಂಡು ಅವುಗಳನ್ನು ಬಳಸಿ ಸಂಸ್ಕೃತಿಯನ್ನು(ಕನ್ನಡ) ವಿವರಿಸಲು ಹೊರಟಿದ್ದು ಗಮನಿಸಬೇಕಾದ ಸಂಗತಿ. ಭಾಷಾಶಾಸ್ತ್ರ, ಮಾನವಶಾಸ್ತ್ರ, ದೈವತಶಾಸ್ತ್ರ, ಜೀವಶಾಸ್ತ್ರ, ಪುರಾತತ್ವಶಾಸ್ತ್ರ, ಇತಿಹಾಸಶಾಸ್ತ್ರ ಮುಂತಾದ ನಾನಾ ಶಾಸ್ತ್ರಗಳ ನೆರವನ್ನು ಅವರು ಪಡೆದಿದ್ದಾರೆ. ಈ ವೈಚಾರಿಕ ನೋಟವೇ ಇಲ್ಲದ ಆ ಕಾಲದಲ್ಲಿ, ವೈಚಾರಿಕತೆಯ ಹಿನ್ನೆಲೆಯಲ್ಲಿ ತಮ್ಮ ಸಂಶೋಧನೆಯನ್ನು ಕೈಗೊಂಡು ಕಂನಾಡಿನ ಸಂಸ್ಕೃತಿ ಪರಿಕಲ್ಪನೆಗೆ ತೊಡಗಿದರು. ವರ್ತಮಾನದ ಸ್ಥಿತಿಯ ಇಕ್ಕಟ್ಟು ಮತ್ತು ಆತಂಕಗಳಿಗೆ ಕಾರಣವಾದ ಕಾರಣ ಮೀಮಾಂಸೆಯನ್ನು ಹುಡುಕುವುದು ಅವರಿಗೆ ಮುಖ್ಯವಾಗಿತ್ತು. ಈ ರೀತಿ 'ಸಂಸ್ಕೃತಿ'ಯನ್ನು ಕಾಣುವ ದೃಷ್ಟಿಕೋನ ಅವರನ್ನು ಇತರರಿಗಿಂತ ಭಿನ್ನವಾಗಿಸುತ್ತದೆ. ಅಂತೆಯೇ ಅವರೊಬ್ಬ "ಚಿಂತನಶೀಲ ಸಂಸ್ಕೃತಿ ಸಂಶೋಧಕ" ಎಂದು ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರು ಗುರುತಿಸಿರುವುದು ಉಲ್ಲೇಖಾರ್ಹವಾಗಿದೆ. ಅವರೇ ಹೇಳುವಂತೆ ನಮ್ಮಲ್ಲಿ 'ಸಂಶೋಧಕರು' ಸಿಗುತ್ತಾರೆ ನಿಜ; ಆದರೆ 'ಸಂಸ್ಕೃತಿ ಸಂಶೋಧಕ'ರು ಮತ್ತಷ್ಟು ದುರ್ಬಲ. ಅದರಲ್ಲೂ "ಚಿಂತನಶೀಲ ಸಂಸ್ಕೃತಿ ಸಂಶೋಧಕ"ರು ಇಲ್ಲವೆಂದೇ ಹೇಳಬಹುದು ಎಂದಿದ್ದಾರೆ.[೨]

ಶಂಬಾ ಅವರಿಗೆ ಸಂಸ್ಕೃತಿ ಹೊರತೋರಿಕೆಯ ವಿಷಯವಾಗಿರಲಿಲ್ಲ. ವರ್ತಮಾನದ ಸ್ಥಿತಿಯನ್ನು ಅರಿಯುವ ಸಾಧನವಾಗಿತ್ತು. ಇತಿಹಾಸ ಚಕ್ರೀಯ ಸ್ವರೂಪದಲ್ಲಿದ್ದು ನೆನ್ನೆ-ಇಂದು-ನಾಳೆಗೆ ಸಾಗಬೇಕಾದ ನಿರಂತರ ಪ್ರಕ್ರಿಯೆ; ಸಂಸ್ಕೃತಿ ಗ್ರಹಿಕೆ ಕೂಡ ಈ ನೆಲೆಯಲ್ಲಿ ನಡೆಯಬೇಕು. ವ್ಯಷ್ಟಿಗಿಂತ-ಸಮಷ್ಟಿ ಪ್ರಜ್ಞೆ ಮುಖ್ಯ ಆದಾಗ ಸಂಸ್ಕೃತಿಯ ಆಗಾಮಿ ಸತ್ಯದ ನೆಲೆಯನ್ನು ಕಂಡುಕೊಳ್ಳಬಹುದು. ಕಾರಣ ಸಂಸ್ಕೃತಿಯೆಂಬುದು ಜಡವಲ್ಲ ಅದು ಜೀವನ ರೀತಿ ಎಂದೇ ಶಂಬಾ ಗುರುತಿಸಿಕೊಳ್ಳುತ್ತಾರೆ. ಅವರ ಸಮಕಾಲೀನ ಚಿಂತಕರು'ಸಂಸ್ಕೃತಿ'ಯನ್ನು ಏಕಮುಖೀ ಆಕೃತಿಯ ಕಡೆಗಿಂದ ವಿವರಿಸಿಕೊಳ್ಳುವ ಕೆಲಸ ನಡೆಯುತ್ತಿದ್ದು, ಅದನ್ನು ಪಕ್ಕಕ್ಕಿಟ್ಟು. ಸಂಸ್ಕೃತಿಯನ್ನು ಜೀವಂತವಾಗಿರಿಸಿರುವ. ಅಸಂಖ್ಯ ವಿನ್ಯಾಸಗಳ ಜನಪದ ಅಭಿವ್ಯಕ್ತಿಯ ಹಲವಾರು ವಲಯಗಳನ್ನು ಗಮನಿಸಿದ್ದು ಶಂಬಾ ಅವರ ವೈಚಾರಿಕ

ದೃಷ್ಟಿಕೋನವನ್ನು ನಿರೂಪಿಸುತ್ತದೆ ಅವರ ಸಂಸ್ಕೃತಿಯ ಚಿಂತನೆಗಳ ಹಿಂದೆ ತೀರಾ ವೈದಿಕ ಸಂಸ್ಕೃತಿಯ ಛಾಯೆಯಾಗಲಿ, ಪಶ್ಚಿಮ ಸಂಸ್ಕೃತಿಯ ನಿಲುವುಗಳಾಗಲಿ ಇಲ್ಲ. ಸಂಸ್ಕೃತಿಯ ಮುಖ್ಯ ನೆಲೆಗಳಿರುವುದು 'ಜನಾಂಗದ ಸ್ಮೃತಿ'ಗಳಲ್ಲಿ. ಈ ಹಿನ್ನೆಲೆಯಲ್ಲಿ 'ಕನ್ನಡ ಸಂಸ್ಕೃತಿ' ಕುರಿತಾದ ಅನ್ವೇಷಣೆ ತಾನಾಗೆತಾನೇ ಬಹುಮುಖಿ ನೆಲೆಯನ್ನು ಪಡೆಯುತ್ತಾ ಹೋಗಿದೆ. "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡಾದಾ ಕನ್ನಡದೊಳ್ " ಎಂದು ಹೇಳಿದ ಕವಿರಾಜಮಾರ್ಗಕಾರನ ಪ್ರಾಸಂಗಿಕ ಎಳೆಯನ್ನು ಹಿಡಿದು ನಡೆದ ಶಂಬಾ ತಲುಪಿದ್ದು ಕಂನಾಡ ಸಂಸ್ಕೃತಿಯ ಪ್ರಾಚೀನ ಜನಾಂಗದ ಮೂಲ ನೆಲೆಗಳಿಗೆ. ಕಂನುಡಿ-ಕಂನಾಡು ತನ್ನ ಆಕೃತಿಯನ್ನು ಪಡೆದಿದ್ದು 'ನರ್ಮದಾ ಪರಿಸರದಲ್ಲಿ' ಎಂಬ ಮುನ್ನೆಲೆಗೆ ತಲುಪುತ್ತಾ, ಸ್ಥಳನಾಮ, ಸ್ಥಳಪುರಾಣ, ದೇವತಾ ವಿಚಾರ, ನಡೆವಳಿ-ನುಡಿವಳಿಯೊಳಗಿನ ವೈಶಿಷ್ಟ್ಯಗಳು ಐತಿಹಾಸ ಪರಂಪರೆಯನ್ನು ಕೈ ಜೋಡಿಸಿ ಹಿಡಿಯಲು ಹೊರಟರು..... ಶಂಬಾ ಅವರು ಈಗಲೂ ಕೂಡ ವೈದಿಕ ಸಂಸ್ಕೃತಿಯ ಬೇರುಗಳನ್ನು ಹುಡುಕುವ ಬದಲು ಅದಕ್ಕೂ ಆಚೆ ಕಂದಮಿಳ ಸಂಸ್ಕೃತಿಯಲ್ಲಿ ಕಂನಾಡ ಸಂಸ್ಕೃತಿಯ ಎಳೆಗಳನ್ನು ಹುಡುಕಲು ಹೊರಟಿದ್ದು ಕಾಲದ ದೃಷ್ಟಿಯಿಂದ ಮಹತ್ವದ ಅಂಶ.....[೩] ದ್ರಾವಿಡ ಸಂಸ್ಕೃತಿಯನ್ನು ಕಂದಮಿಳ ಸಂಸ್ಕೃತಿಯೆಂದು ಗುರುತಿಸುತ್ತಾ, ಆರ್ಯ ಸಂಸ್ಕೃತಿಗಿಂತ ಭಿನ್ನವಾದ್ದು(ಪ್ರಾಚೀನವಾದ್ದು) ಎಂದು ತೀರ್ಮಾನಿಸುತ್ತಾರೆ.

ಕಂದಮಿಳ ಸಂಸ್ಕೃತಿಯಲ್ಲಿ 'ಕಂನಾಡ ಸಂಸ್ಕೃತಿ'ಯ ನೆಲೆಗಳನ್ನು ಕಂಡುಕೊಳ್ಳುತ್ತಾ, ಅದರ ಸಮಸ್ಯೆಯ ಬೇರುಗಳನ್ನು 'ಭಾರತೀಯಸಂಸ್ಕೃತಿ'ಯ ಅಂತರನೆಲೆಗಳ ಹಾಸುಹೊಕ್ಕುಗಳಲ್ಲಿ ಅವರು ಹುಡುಕುತ್ತಾರೆ. 'ಕಂನಾಡ ಸಂಸ್ಕೃತಿ' ನೆಲೆಗಳನ್ನು ಕುರಿತು ಅವರು ಗ್ರಹಿಸಿದ ಅಂಶಗಳನ್ನು ಮುಂದಿನ ಅಧ್ಯಾಯದಲ್ಲಿ ನೋಡಬಹುದು. ಪ್ರಸ್ತುತ ಅಧ್ಯಾಯದಲ್ಲಿ ಶಂಬಾ, ಕಂನಾಡು-ಕಂನುಡಿ-ಕುರಿತು ಆಲೋಚಿಸಿದ ಹಾಗೂ ಅವುಗಳ ಮುಖಾಂತರ ಗ್ರಹಿಸಿಕೊಂಡ ವಿಚಾರಗಳನ್ನು ಗಮನಿಸಬಹುದು.

ಕಂನಾಡು ಪರಿಕಲ್ಪನೆ

ಶಂಬಾ 'ಕಂನಾಡು' ಪರಿಕಲ್ಪನೆಯ ಮೂಲಕ ಕನ್ನಡ ಸಂಸ್ಕೃತಿಯ ಮೂಲಗಾಮೀ ಶೋಧನೆಯನ್ನು ಕೈಗೊಳ್ಳುತ್ತಾರೆ. ಈ ಗ್ರಹಿಕೆಯು ಉಳಿದವರಿಗಿಂತ ಅವರನ್ನು ಭಿನ್ನವಾಗಿಸಲು ಕಾರಣವಾಗಿದೆ. 'ಕಂನಾಡು'-ಎನ್ನುವುದು ಕನ್ನಡನಾಡು ಎಂಬ ರೂಪಕ್ಕೆ ಕೊಡುವ ಹೊಸಪದ. ಕಂನಾಡುವಿನ ಭಾಷೆ 'ಕಂನುಡಿ' ಅಂದರೆ ಭಾಷೆ ಮತ್ತು ದೇಶವಾಚಕವಾಗಿ ಈ ಪದಗಳನ್ನು ತಂದಿದ್ದಾರೆ ಎನ್ನಬಹುದು. ಕಂನಾಡು-ಕಂನುಡಿಯ ಮೂಲಕ 'ಕಂನಾಡಸಂಸ್ಕೃತಿ' ಕುರಿತು ಚಿಂತಿಸಿದ ಚಿಂತನೆಗಳನ್ನು ಈ ರೀತಿ ನಿರೂಪಿಸಬಹುದು.

'ಕರ್ಣಾಟ'ದ ಪ್ರಾಚೀನ ಉಲ್ಲೇಖ ಮಹಾಭಾರತ, ಬೃಹತ್ ಸಂಹಿತೆಗಳಲ್ಲಿ ಕಾಣಬಹುದು. ಅಂದರೆ ಕ್ರಿ.ಶ.ಆರಂಭದ ಹೊತ್ತಿಗೆ 'ಕರ್ಣಾಟ' ನಿಶ್ಚಿತವಾಗಿ ಇತ್ತು ಎನ್ನಬಹುದು. ಮಹಿಷಮಂಡಲ, ವನವಾಸಿ, ಕುಂತಲ ದೇಶಗಳಿಂದ ಬೇರೆಯೇ ಆಗಿತ್ತು. ಹಾಗಾದರೆ ಈ 'ಕರ್ಣಾಟ' ಎಲ್ಲಿರಬಹುದು ಎಂಬುದೇ ಅವರ ಪ್ರಶ್ನೆ. ಇದಕ್ಕೆ ಉತ್ತರ ಕಂಡುಹಿಡಿಯುತ್ತಾ ಅನೇಕ ಅಂಶಗಳತ್ತಾ ತಮ್ಮನ್ನು ತೆರೆದುಕೊಳ್ಳುತ್ತಾರೆ. ನೃಪತುಂಗ ಹೇಳುವ ಕನ್ನಡನಾಡು ಗೋದಾವರಿ ಮತ್ತು ಕಾವೇರಿ ನದಿಗಳ ನಡುವಿನ ಪ್ರದೇಶ. ಈ ನದಿಗಳ ನಡುವೆ ಅನೇಕ ನಾಡುಗಳು ಇದ್ದಿರಬೇಕು. ಆಂಡಯ್ಯನ "ಕನ್ನಡಮೆನಿಪ್ಪಾನಾಡು" ಎಂಬುದು ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳು. ಇವು ಒಂದೊಂದು ಕಾಲಕ್ಕೆ ಒಂದೊಂದು ಹೆಸರಿನಿಂದ ಕರೆಯಲಾಗಿದ್ದರೂ ಆಂಡಯ್ಯನ ಕಾಲಕ್ಕೆ ದೃಡಪಟ್ಟಿರಬೇಕು. ೧೨೧೦ರ ಶಾಸನದಲ್ಲಿ 'ಕನ್ನಡನಾಲ್ಸಾಯಿರ' ನಾಡು, ೧೨೧೦ ರ ಹಿಂದಕ್ಕೆ ಬಿಜ್ಜಳನ ಕಾಲದಲ್ಲಿ 'ತರ್ದೇವಾಡಿ'ಎಂಬ ಹೆಸರು ಕೇಳಿಬರುತ್ತದೆ. ಒಟ್ಟಾರೆ ಇವೆಲ್ಲವುಗಳಿಗಿಂತ ಭಿನ್ನವಾದ 'ಕರ್ಣಾಟ' ಎಂಬುದು ಗೋದಾವರಿಯ ಉತ್ತರಕ್ಕೆ ಇದ್ದಿರಬೇಕು ಎಂಬ ತೀರ್ಮಾನಕ್ಕೆ ಬರುತ್ತಾರೆ. ಇಲ್ಲಿಯೇ ಒಂದು ಪ್ರಶ್ನೆ ಎದುರಾಗುತ್ತದೆ. ಗೋದಾವರಿಯ ಉತ್ತರಕ್ಕೆ ಕನ್ನಡನಾಡು ಇದ್ದಿರಬೇಕು ಎನ್ನುವಾಗ, ಉತ್ತರದಲ್ಲಿ ಆರ್ಯರು ಇದ್ದರೆ, ದಕ್ಷಿಣದಲ್ಲಿ, ವಿಂಧ್ಯದಿಂದ ಕೆಳಗಿನ(ದಕ್ಷಿಣಪಥ)ದಲ್ಲಿ ಇದ್ದ ಜನರು ದ್ರಾವಿಡರು, ದಕ್ಷಿಣದಲ್ಲಿ ದ್ರವಿಡರು ಎಂದರೆ ತಮಿಳರು ಮಾತ್ರ. ಇವರು ಕಾವೇರಿಯಿಂದ ಕೆಳಗಿನವರು. ಎಂದೂ ಈ ನದಿಯನ್ನು ದಾಟಿ ಮೇಲೆ ಬಂದವರಲ್ಲ. ಒಂದು ವೇಳೆ ಬಂದಿದ್ದರೆ, ಇಲ್ಲಿಯೇ ನೆಲೆಯೂರಲಿಲ್ಲ. ಆರಂಭದಲ್ಲಿ ಆರ್ಯರು ದಕ್ಷಿಣದವರನ್ನು 'ಆಂಧ್ರರು' ಎಂದು ಕರೆಯುವುದನ್ನು ಗಮನಿಸಿದಾಗ, ಹಾಗೂ ನಂತರದ ಅವಧಿಯಲ್ಲಿ 'ಆಂಧ್ರ' ಪದ ಹಿಂದೆ ಸರಿದು 'ಕರ್ಣಾಟ-ದ್ರವಿಡ' ಎಂಬುವ ಹೆಸರು ಹೆಚ್ಚು ಪ್ರಚಲಿತಕ್ಕೆ ಬಂತು. 'ಆಂಧ್ರ' ಪದಕ್ಕೆ 'ತೆಲುಗು'ಎಂಬ ಅರ್ಥಪ್ರಾಪ್ತಿಯಾದದ್ದು, ೧೨ನೇ ಶತಮಾನದ ಸುಮಾರಿಗೆ. ತೆಲುಗು ಸಾಹಿತ್ಯದ ಜನ್ಮಸ್ಥಳವಾದ 'ವೆಂಗಿಮಂಡಲ' ಕರ್ನಾಟಕದಲ್ಲಿ ಸೇರಿ ಹೋಗಿತ್ತು. ಅಲ್ಲಿನ ಸಾಹಿತ್ಯಕೃಷಿ ಕನ್ನಡಿಗರದ್ದು. ತೆಲುಗಿನವರು ಕನ್ನಡಿಗರ ಮೂಲಕವೇ ಸಾಹಿತ್ಯಸೃಷ್ಟಿಗೆ ತೊಡಗಿಕೊಂಡರು. ಅಲ್ಲದೆ ಕನ್ನಡ ಆರಸರೇ ಅದರ ಪೋಷಣೆ-ಲಾಲನೆ-ಪಾಲನೆ ಮಾಡಿ ತೆಲುಗು ಭಾಷೆಯ ಉಗಮಕ್ಕೆ ಕಾರಣರಾಗಿದ್ದಾರೆ. ತೆಲುಗು ಎಂದೂ ವಿಂಧ್ಯದಿಂದ ನೀಲಗಿರಿಯವರೆಗೆ ತಲೆ ಎತ್ತಿ ಮೆರೆದಿರಲಿಕ್ಕೆ ಸಾಧ್ಯವಿಲ್ಲ. 'ಮರಾಠಿ'ಗರ ಪಾಡುಕೂಡ ಇಷ್ಟೆ. ಕ್ರಿ.ಶ.೭-ಅನೇ ಶತಮಾನದ ತನಕ, ಮರಾಠಿ,-ತೆಲುಗು ಇನ್ನೂ ಹಸುಗೂಸುಗಳು. ಪ್ರಾಕೃತ ಭಾಷೆ ಎಂದೂ ದಕ್ಷಿಣದವರ ಮನೆಮಾತಾಗಿರಲಿಲ್ಲ. ಅದರ ಅಂತಃಸತ್ವ ಕ್ರಿ.ಶ.೩-ಅನೇ ಶತಮಾನಕ್ಕಾಗಲೇ ಕಳೆದುಕೊಂಡಿತ್ತು. ಈ ಎಲ್ಲ ಕಾರಣಗಳಿಂದ ಆಗ ಬಳಕೆಯಲ್ಲಿದ್ದುದು ಕನ್ನಡವೊಂದೇ. ಈ ಭಾಷೆಯ

ಜನಾಂಗ 'ಕರ್ಣಾಟ' ಎಂಬ ಪ್ರದೇಶ ಕನ್ನಡನಾಡಿನಲ್ಲಿ ವಿಂಧ್ಯದಿಂದ ಕಾವೇರಿಯವರೆಗೆ ಹಬ್ಬಿಕೊಂಡಿರಬೇಕು.'ಬೃಹತಕರ್ಣಾಟ' ಎಂಬ ಮಾತನ್ನು ಈ ನೆಲೆಯಲ್ಲಿ ಗ್ರಹಿಸಬಹುದು. ಈ ರೀತಿಯಾಗಿ ಗೋದಾವರಿಯ ಉತ್ತರಕ್ಕೆ 'ಕರ್ಣಾಟ'ಇದ್ದು ಆರ್ಯರ ಮೊದಲ ದಾಳಿಗೆ ತುತ್ತಾಗಿದೆ. ಅಂದಿನಿಂದ ಕನ್ನಡ ನರ್ಮದೆಯಿಂದ ಗೋದಾವರಿ ತೀರಕ್ಕೆ, ನಂತರ ಕಾವೇರಿಯವರೆಗೆ ಕನ್ನಡದ ಸೀಮೆ ಇಳಿಯಿತು. ನೃಪತುಂಗನಲ್ಲಿ ಇದರ ಸೂಚನೆ ಸಿಗುತ್ತದೆ. ಗೋದಾವರಿ, ನರ್ಮದೆ ನಡುವೆ ಆರ್ಯರು ನೆಲಸುತ್ತಾ ಬಂದರು. ಅದ್ದರಿಂದ ನರ್ಮದಾ ತೀರವೇ ಕನ್ನಡಿಗರ ಮೂಲ ಸ್ಥಾನವಾಗಿರಬೇಕು, ಎಂದು ಶಂಬಾ ಅವರು ಅಭಿಪ್ರಾಯ ಪಡುತ್ತಾರೆ. ಅಲ್ಲಿಯ ಜನಾಂಗ-ಆಚರಣೆ-ಭಾಷೆ-ದೈವತಾಪ್ರತಿಮೆಗಳು-ಆಳಿದಅರಸರುಗಳು-ಸ್ಥಳನಾಮಗಳ ಮೂಲಕ ಇದನ್ನು ಸಿದ್ಧ ಮಾಡಿ ತೋರಿಸಲು ಪ್ರಯತ್ನಿಸುತ್ತಾರೆ. ಇವುಗಳನ್ನು ಒಂದೊಂದಾಗಿ ನೋಡೋಣ.

ಮಧ್ಯಪ್ರಾಂತದಲ್ಲಿರುವ ಜನಾಂಗಗಳಾದ ಕುರುಬರು-ಮಲೆಯರು ತಾವಾಡುವ ಭಾಷೆಯಲ್ಲಿ ಇಂದಿಗೂ ಹಳಗನ್ನಡ ಸರ್ವನಾಮಗಳನ್ನು ಉಳಿಸಿಕೊಂಡಿದ್ದಾರೆ. ಅಲ್ಲದೆ, ತಾವು ಕರ್ಣಾಟಕದ ಕಡೆಯಿಂದ ಬಂದಿದ್ದಾಗಿ ಹೇಳಿಕೊಳ್ಳುತ್ತಾರೆ. ಹಾಗೆ ಬರುವಾಗ ಗೋದಾವರಿ ನದಿ ಸಿಕ್ಕಿರಲಿಕ್ಕಿಲ್ಲ. ಆದುದರಿಂದ ಗೋದಾವರಿ ಉತ್ತರಕ್ಕೆ 'ಕರ್ಣಾಟ' ಇರಬೇಕು. ಎಂದು ನಿರ್ಣಯಿಸುತ್ತಾರೆ. ನೀಲಗಿರಿಯ ನುಡಿಗೂ ಇವರ ನುಡಿಗೂ ಸಂಬಂಧ ಇದೆ. ಕುರಂಬರು,(ಕುರುಬದ ಹಿಂದಿನ ರೂಪ) ಹೊಲೆಯರು-ಗೊಲ್ಲರೂ ಮರ್ಹಾಠ-ನಾಗಪೂರ್ಹ-ಚಾಂಡದ ನಿವಾಸಿಗಳು. ಇವರ ನುಡಿ ಬಿಜಾಪುರದ ಕನ್ನಡ ಭಾಷೆಯನ್ನು ಹೋಲುತ್ತದೆ. ಬಡಗರ ಭಾಷೆಯು ಇವರ ಭಾಷೆಗೆ ನಿಕಟ ಸಾಮೀಪ್ಯವಿದೆ. 'ಕುರಂಬ'ರೇ ಕರ್ಣಾಟಕದ ಹಳಬರು ಅಂದರೆ 'ಮೂಲಿಗರು' ಎನ್ನತ್ತಾರೆ. ಹಳಬರು ಅಥವಾ ಹಳೆಪೈಕರು ವರ್ಹಾಡ ಮಧ್ಯಪ್ರಾಂತಗಳಲ್ಲಿ ಸುಮಾರು ಲಕ್ಷ ಜನರಿದ್ದಾರೆ. ಇವರ ಭಾಷೆ 'ಹಳಬಿ' ಮಿಶ್ರಭಾಷೆ, ಬನವಾಸಿ, ತುಳುನಾಡಿನಲ್ಲಿ ಇವರುಗಳು ಕಲ್ಬುರ್ಗಿ ಕಡೆಯಿಂದ ಬಂದೆವೆಂದು ಹೇಳಿಕೊಳ್ಳುತ್ತಾರೆ. ಕಾರಣ ಒಂದು ಕಾಲಕ್ಕೆ 'ಕನ್ನಡ' ಇವರ ಭಾಷೆಯಾಗಿದ್ದಿರಬೇಕು. (ಮರ್ಹಾಟ-ಭಾಷೆ-ವರ್ಹಾಡ-ದೇಶ) ಆದರೆ ಮೂಲತಃ ಇವರು ಮಧ್ಯಪ್ರಾಂತದವರು. ಇವರಲ್ಲಿ ಇಂದಿಗೂ ಹುಲಿಮಯ್ಯನ ಪೂಜೆ ಇದೆ. ಈ ಕಾರಣಗಳಿಂದ ಕರ್ಣಾಟಕದ ಮೂಲ ನೆಲೆ ಇದಾಗಿರಬಹುದು. ವೀರಗಲ್ಲುಗಳನ್ನು ಪೂಜಿಸುವ ರೀತಿ ಕನ್ನಡರದ್ದೇ ಎನ್ನುತ್ತಾರೆ ಶಂಬಾ. ಆದರೆ ಮಹಾರಾಷ್ಟ್ರದ 'ನಾಸಿಕ್ ಗ್ಯಾಝೆಟಿಯರ್'ನಲ್ಲಿ ಈ ಕಲ್ಲುಗಳನ್ನು ಪೂಜಿಸುವವರನ್ನು 'ಕುಣಬಿ'-ಕೋಳಿ(ಅಂಬಿಗ) ಮುಂತಾದ ಜಾತಿಗಳೆಂದು ಕರೆದಿದೆ. ಇವರುಗಳಲ್ಲಿ ಇವತ್ತಿಗೂ ವೀರಗಲ್ಲು ಪೂಜೆ ಮಾಡುವ ಪದ್ಧತಿಯಿರುವುದರಿಂದ, ಇವರು ಮರಾಠಿಗರಲ್ಲಿ ಮೂಲ ಕನ್ನಡದವರು ಎನ್ನತ್ತಾರೆ. 'ಕನ್ನಡ'ರು

ಖಾನ್ದೇಶ'-ನಾಸಿಕಗಳಲ್ಲಿ ಇದ್ದಾರೆ. ಅಲ್ಲಿ ಆಳಿದ ರಾಜರು, ಗೋವಳರು ಅಥವಾ ಗವಳಿಗರು. ಇವರು ಕನ್ನಡದವರು. ಇವರೇ ಲಾಟ-ಮಾಳವಗಳಲ್ಲಿ ಕೂಡ ಆಳಿದವರಾದ್ದರಿಂದ ಅಲ್ಲಿಯೂ ವೀರಗಲ್ಲುಗಳು ಇರುವುದನ್ನು ಕಾಣಬಹುದು. ಪ್ರಾಚೀನ ಕಾಲದಲ್ಲಿ ಕಂನಡರು ಇಲ್ಲಿಯೂ ವಾಸವಾಗಿರಬೇಕು. ಇದೇ ಖಾನ್ದೇಶದಲ್ಲಿ ಡಾಂಗನಾಡು-ಮೇವಾಸಿ ಎಂಬ ಎರಡು 'ಬಿಲ್ಲವರ' ಸಂಸ್ಥಾನಗಳಿವೆ. ಇಲ್ಲಿ ಕುರುಂಬರು(ಇವರ ಮರಾಠಿ ಅವತಾರ ಕುಣಬಿಗಳು) ಧನಗರರು, ತುಂಬಲಿಗರು, ಗೊರವರು ಮುಂತಾದ ಕನ್ನಡಿಗರು ಅಲ್ಲಿಯೇ ನೆಲೆಸಿದ್ದಾರೆ. ಇನ್ನೂ ಮರಾಠಿಗೂ-ಮಹಾರಾಷ್ಟ್ರಕ್ಕೂ ಅಂದರೆ ನಾಡು-ನುಡಿಗೆ ಜನ್ಯ-ಜನಕ ಸಂಬಂಧವಿಲ್ಲ. 'ಮಹಾರಾಷ್ಟ್ರಿ' ಪ್ರಾಕೃತಕ್ಕಿಂತ ಹಿಂದಿನ ಭಾಷೆ. ಮಹಾರಾಷ್ಟ್ರ ಪ್ರಾಕೃತವು ಹಲವು ಪ್ರಾಕೃತಗಳ ಮಿಶ್ರಭಾಷೆ. ಮೊದಲು ವರ್ಹಾಡದಲ್ಲಿ ಇದು ಇದ್ದಿರಲಿಲ್ಲ. ಮರಾಠಿ ಭಾಷೆಗೂ-ಈ ಪ್ರಾಕೃತಕ್ಕೂ ಹಲವು ಶಬ್ದಗಳಲ್ಲಿ ಸಾಮ್ಯವಿದೆ. 'ಸ್ಟೆನ್‌ಕೊನೋ', ಅವರು ಮರಾಠಿ ಭಾಷೆ ದ್ರಾವಿಡ ಭಾಷೆಯ ಮೂಲಾಧಾರದಿಂದ ವಿಕಾಸ ಹೊಂದಿದೆ ಎಂದಿದ್ದಾರೆ. ಇಲ್ಲಿ ದ್ರಾವಿಡ ಭಾಷೆಯೆಂದರೆ, ಬೇರಾವುದೂ ಅಲ್ಲ ಅದು'ಕನ್ನಡ'' ಈಗ ಮರಾಠಿ ಪ್ರಚಲಿತದಲ್ಲಿರುವ ಪ್ರದೇಶದಲೆಲ್ಲಾ ಒಂದು ಕಾಲಕ್ಕೆ ಕನ್ನಡ ಭಾಷೆ ಪ್ರಚಾರದಲ್ಲಿದ್ದಿರಬೇಕು ಎಂಬ ನಿರ್ಣಯಕ್ಕೆ ಶಂಬಾ ಬರುತ್ತಾರೆ. ಮುಂದೆ ಮರಾಠಿ ರಾಜಕೀಯವಾಗಿ ಪ್ರಬಲವಾದಂತೆ ಕನ್ನಡವನ್ನು ಓಡಿಸಿತು. ನರ್ಮದೆಯಿಂದ, ಗೋದಾವರಿವರೆಗೆ ನಂತರ ಕೃಷ್ಣತಟದವರೆಗೆ ನೆಲೆ ತಪ್ಪುತ್ತಾ ಬಂದಿದೆ. ಮರ್ಹಾಟ-ವರ್ಹಾಟ, ಇವುಗಳ ವ್ಯುತ್ಪತ್ತಿ ನಿಷ್ಪತ್ತಿ ಬಗ್ಗೆ ಏಕಾಭಿಪ್ರಾಯವಿಲ್ಲ. 'ಮರ+ಹಟ್ಟಿ' ಎಂದರೆ ದೊಡ್ಡನಾಡು ಎಂದು ಕನ್ನಡದಲ್ಲಿ ನಿಷ್ಪತ್ತಿ ಹೇಳಬಹುದು. ಕ್ರಮೇಣ ಸಂಸ್ಕೃತದಲ್ಲಿ 'ಮಹಾರಾಷ್ಟ್ರ' ಆಗಿರಬೇಕು ಖಾನ್ದೇಶದಲ್ಲಿ 'ಕನ್ನಡ' ಎಂಬ ತಾಲ್ಲೂಕು ಇದೆ. ಖಾನ್ದೇಶ-ಕಂಡರ ದೇಶ, ಎಂಬುದರ ವಿಕೃತರೂಪ. 'ಕಂಡರು' ಕಾಡುಬಿಟ್ಟು ನಾಡಿಗೆ ಬಂದಾಗ ಕನ್ನಡರಾದರು. ಕನ್ನಾಡ>ಕನ್ನಡು>ಕನ್ನಡ. ಎಂದು ನಿಷ್ಪತ್ತಿ ಹೇಳಬಹುದು. ಈ ಖಾನದೇಶದಲ್ಲಿ 'ಖಾನ'ರು ಅಲ್ಪಾಸಂಖ್ಯಾಯಿತರು ಎಂಬುದನ್ನು ಗಮನಿಸಬೇಕು.೩ "ಇಂತೆಲ್ಲ ಕಾರಣಗಳಿಂದ ಇಂದಿನ ಖಾನದೇಶವೇ ಮುಂಚಿನ ಕನ್ನದೇಶ. ಕನ್ನರದೇಶ. ಎಂಬುದು ನಿಸ್ಸಂಶಯ. ಇಂತಿದು ವಿಂಧ್ಯದಿಂದ ನೀಲಗಿರಿಯವರೆಗೆ ಹಬ್ಬಿದ ಪುರಾತನ ಕಾಲದ ಕನ್ನಾಡು. ಇದುವೆ ಕನ್ನರ ನೆಲೆವೀಡು"(ಕನ್ನಡದ ನೆಲೆ) ಎಂಬ ನಿರ್ಣಯಕ್ಕೆ ಬರುತ್ತಾರೆ.

ದೈವತ ಪ್ರತಿಮೆಗಳ ಮೂಲಕ 'ಕಂನಡರ' ನೆಲೆಯು ಗೋದಾವರಿಯ ಉತ್ತರಕ್ಕೆ ಇದ್ದಿರಬೇಕು ಎಂದು ನಿರ್ಣಯಿಸಲು ಪ್ರಯತ್ನಿಸುತ್ತಾರೆ. ಮರಾಠಿಗರ ಕುಲದೈವಗಳಾದ ಕಂಡಾರಿ-ಮಲ್ಲಾರಿ-ಪುಂಡಾರಿ. ದೈವಗಳನ್ನು ಕನ್ನಡರು ಮೊದಲಿಗೆ ಪೂಜಿಸುತ್ತಿದ್ದರು. ಕಂಡರಿಗೆ ವೈರಿಯಾದವ

ಕಂಡಾರಿ>ಖಂಡೇರಾಯ>ಖಂಡೋಬ ಮಲೆಯರಿಗೆ ವೈರಿಯಾದವನು 'ಮಲ್ಲಾರಿ' ಇವನಿಗೆ 'ಏಳುಕೋಟಿ' ಭಕ್ತಗಣವುಂಟು. ಅವನಿಗೆ ಪೂಜೆ ಸಲ್ಲಿಸುವ ಸಮಯದಲ್ಲಿ "ಏಳುಕೋಟಿ" ಎಂಬ ಪಡೆನುಡಿ ಮರಾಠರು ಉದ್‌ಘೋಷಿಸುತ್ತಾರೆ. 'ಮೈಲಾರ'ನನ್ನು ನೆನಪಿಗೆ ತರುತ್ತದೆ. ಇದನ್ನೆಲ್ಲಾ ಗಮನಿಸಿದಾಗ ಈ ಕುಲದೈವಗಳ ಆರಾಧಕರು ಕನ್ನಡಿಗರು ಎನ್ನಬಹುದು. ಆದ್ದರಿಂದ ಒಂದು ಕಾಲಕ್ಕೆ ವಿಂಧ್ಯದ ದಕ್ಷಿಣಕ್ಕೆ ಇವರು ನೆಲೆಸಿದ್ದಿರಬೇಕು.

ಈ ಪ್ರದೇಶಗಳಲ್ಲಿ ಆಳಿದ ಅರಸು ಮನೆತನಗಳ ಮೂಲಕ ಕಂನಾಡ ಸಂಸ್ಕೃತಿಯ ಮೂಲ ಗುರುತಿಸಬಹುದು. ಕ್ರಿ.ಪೂ.೪ನೇ ಶತಮಾನದ ಸುಮಾರಿಗೆ ಕಂನಾಡು ಚಂದ್ರಗುಪ್ತನ ಆಳ್ವಿಕೆಯಲ್ಲಿ ನಂತರ ಅಶೋಕನ ಕಾಲದಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಬನವಾಸಿ, ಮಹಿಷಮಂಡಲಗಳಿಗೆ ಧರ್ಮಪ್ರಚಾರಕ್ಕಾಗಿ ಬಿಕ್ಷುಗಳನ್ನು ಕಳಿಸಿದ್ದು ಎಲ್ಲರಿಗೂ ತಿಳಿದದ್ದೇ. ಇಲ್ಲಿನ ಅವನ ಶಿಲಾಶಾಸನಗಳಲ್ಲಿ ರಾಷ್ಟ್ರಿಕ, ಪಿಟಣಿಕರ ಮುಂತಾದ ರಾಜ್ಯಗಳ ಉಲ್ಲೇಖವಿದೆ. 'ರಾಷ್ಟ್ರಿಕ' ರೆಂದರೆ 'ನಾಡವರು' ಎಂದೇ ಅರ್ಥ. ಕ್ರಿ.ಪೂ.೨೦೦ ರಿಂದ ೨೨೫ರವರೆಗೆ ಶಾತವಾಹನರು ಕಂನಾಡನ್ನು ಆಳಿದರು. ಇವರಶಾಸನಗಳು ಪ್ರಾಕೃತದಲ್ಲಿದ್ದರೂ ಅವರ ಭಾಷೆ ಕಂನಡವೇ ಆಗಿತ್ತು. ಕಾರಣ ಅವರಿಗಿದ್ದ ಹೆಸರುಗಳು ಪುಲುಮಾಯಿ, ಹಾಲತೀ ಕನ್ನಡದವೇ ಆಗಿವೆ. ಇವರ ನಂತರ ವಾಟಕರು ಬಂದರು ಇವರ ಹೆಸರಿನ ಕೊನೆಗೆ 'ಸೇನ' ಎಂದು ಮುಕ್ತಾಯವಾಗುತ್ತದೆ. ಬಂಗಾಲದಲ್ಲಿ 'ಸೇನ' ಮನೆತನ ಆಳಿರುವುದನ್ನು ನೆನಪಿಸಿಕೊಂಡರೆ. ಇವರು 'ಕರ್ನಾಟ ಕ್ಷತ್ರೀಯರು' ಎಂದು ಹೇಳಬಹುದು. ಮಿಥಿಲೆಯ ನಾನ್ಯದೇವ ಕೂಡ ಕರ್ನಾಟದವ. ಈ ಕರ್ನಾಟದ ರಾಜರು ಅಷ್ಟು ದೂರ ವ್ಯಾಪಿಸಿರಬೇಕಾದರೆ. ಕರ್ನಾಟದ ಮೂಲ ನೆಲೆ ತಿಳಿಯಲು ತೊಂದರೆಪಡಬೇಕಾಗಿಲ್ಲ. ಕಾರಣ ಇವರ ಏಳಿಗೆಯನ್ನು ಕಾಣಬೇಕಾದರೆ ವಿಂಧ್ಯದ ಬುಡಕ್ಕೆ ಹೋಗಬೇಕು; ಇದರಿಂದ ಕರ್ನಾಟಕದ ಮೂಲ ನರ್ಮದಾತೀರ; ಅಲ್ಲದೇ ದೇವಗಿರಿಯಾದವರು ಮರಾಠಿಗರಲ್ಲ ಕನ್ನಡಿಗರು. ಹೀಗೆ ಎಲ್ಲ ರೀತಿಯಿಂದಲೂ ವಿಮರ್ಶಿಸಿ ನೋಡಿದಾಗ. ಜಾತಿ-ಜನಾಂಗ-ಭಾಷೆ-ಯಾವ ದೃಷ್ಟಿಯಿಂದ ವಿಚಾರಿಸಿದವರೂ ಗೋದಾವರಿಯ ಉತ್ತರಕ್ಕೆ 'ಕರ್ನಾಟ' ಇದ್ದೇ ಇತ್ತು ಎಂದು ಸಾಬೀತಾಗುತ್ತದೆ ಎನ್ನುತ್ತಾರೆ. ಆದರೆ ಈ ವಿಷಯದಲ್ಲಿ ಡಿ.ಎಲ್.ನರಸಿಂಹಚಾರ್ ಅವರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.*

'ಕಂನಾಡ ಸಂಸ್ಕೃತಿ' ಪುನಾರಚನೆಯ ಶೋಧಕ್ಕಾಗಿ ಶಂಬಾ ಅವರು ವಿಪುಲ ಸಾಮಾಗ್ರಿ ಬಳಸಿಕೊಳ್ಳುತ್ತಾರಷ್ಟೆ. ಹಾಗೆಯೇ ಬಳಿಸಿಕೊಂಡ ಆಕರಗಳನ್ನು ಅವುಗಳಲ್ಲಿ ಐಕ್ಯಮತ ಇರುವಂತೆ

ಜೋಡಿಸಿಕೊಂಡಿರುವುದನ್ನು ಕಾಣಬಹುದು. ಕಂನಾಡು-ಕಂನುಡಿ ಪರಿಕಲ್ಪನೆಗಳ ಮೂಲಕ ಕಂನಡ ಸಂಸ್ಕೃತಿಯ ತಾತ್ವಿಕ ನೆಲೆಗಳನ್ನು ಕುರಿತು ಅಧ್ಯಯನ ಮಾಡುತ್ತಾರೆ. ಈ ಬಗೆಯ ಅಧ್ಯಯನ ಅವರ ಕಾಲದ ದೃಷ್ಟಿಯಿಂದ ಮಹತ್ವದ್ದೆಂದೇ ವಿದ್ವಾಂಸರು ಗುರುತಿಸುತ್ತಾರೆ. ಹಿಂದಿನ ಸಂಸ್ಕೃತಿ ಚಿಂತನದ ವಿದ್ವಾಂಸರು ಬಾಹ್ಯ ಸ್ವರೂಪಗಳನ್ನು ಅವಲಂಬಿಸಿ ಸಂಸ್ಕೃತಿಯನ್ನು ವಿವೇಚಿಸಿದ್ದರೆ ಶಂಬಾ ಭೌತ ಸಂಸ್ಕೃತಿ ಜೊತೆಗೆ ಆತ್ಮ ಸಂಸ್ಕೃತಿಯ ಜೋಡು ನೆಲೆಯಲ್ಲಿ ಸಂಸ್ಕೃತಿಯ ಪುನಾರಚನೆಯ ಸಂದರ್ಭದಲ್ಲಿ ಆತ್ಮವನ್ನು ಹುಡುಕಲು ತೊಡಗುತ್ತಾರೆ. ಪ್ರಾರಂಭದ ಕಂನಾಡು-ಕಂನುಡಿ ಪರಿಕಲ್ಪನೆಗಳು ಒಟ್ಟು ಕನ್ನಡ ಸಂಸ್ಕೃತಿಯನ್ನು ಇಡಿಯಾಗಿ ಗ್ರಹಿಸಲು ಸಾಧ್ಯವಾದವು. ಈ ಬಗೆಯ ಶೋಧನೆ ಮತ್ತು ಚಿಂತನೆಗಳಿಂದಲೇ ಅವರನ್ನು 'ಚಿಂತನಶೀಲ ಸಂಸ್ಕೃತಿ ಸಂಶೋಧಕ' ಎಂದು ಕರೆದಿರುವುದು ಉತ್ಪ್ರೇಕ್ಷೆಯ ಮಾತಲ್ಲ.

ಆಕರ ಗ್ರಂಥಗಳು

೧. *ಶಂಬಾ ಕೃತಿ ಸಮೀಕ್ಷೆ*, ಮುನ್ನುಡಿ, ಪ್ರಸ್ತಾವನೆ

೨. '*ಸಂಸ್ಕೃತಿ ಮತ್ತು ಶಂಬಾ*, ಪು.೮೧, ಸಾಂಸ್ಕೃತಿಕ ಇತಿಹಾಸದ ಪರಿಕಲ್ಪನೆ

೩. ಅದೇ, ಪು.೨೭

೪. ಅದೇ, *ಕಂನಾಡು ಪರಿಕಲ್ಪನೆ*, ಪು.೨೪

* ಜೋಶಿಯವರಿಗೆ 'ಕಂನಾಡು' ಪ್ರಿಯವಾದ ಪದ 'ಕರ್ಣಾಟ'ಕ್ಕಿಂತ ಅದು ಹೆಚ್ಚು ಸಮಂಜಸವೆಂದು ವಾದಿಸುತ್ತಾರೆ. ಕಂನಾಡ ಎಂಬಲ್ಲಿ ಜನಜೀವನ ಸಾಹಿತ್ಯ ಪ್ರದೇಶಕ್ಕೆ ದೊರೆಯುವ ಸೌಲಭ್ಯ 'ಕರ್ಣಾಟ' ಎಂದರೂ ಇಲ್ಲ ಎಂದು ತಮಗೆ ಅತಿಪ್ರಿಯವಾದ ಸಿದ್ಧಾಂತವನ್ನು ಅಭಿಮಾನದಿಂದ ಹೇಳುತ್ತಾರೆನ್ನಿಸುತ್ತದೆ. ಬಹುತರ್ಕಬದ್ಧವಾಗಿ ತಮ್ಮ ವಾದವನ್ನು ಮುಂದಿಡುವ ಲೇಖಕರು ಇಲ್ಲಿ ತಮ್ಮ ಸಿದ್ಧಾಂತವನ್ನು ಪುಷ್ಟೀಕರಿಸುವ ಮಾಹಿತಿಗಳನ್ನು ನೀಡಿಲ್ಲ. (ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ, ಪು.೧೧೫, ಡಿ.ಎಲ್. ನರಸಿಂಹಮೂರ್ತಿ, ಪಾತಳಿ)

ಅಧ್ಯಾಯ ೬

ಕಂನಾಡ ಸಂಸ್ಕೃತಿಯ ವಿವಿಧ ನೆಲೆಗಳು

ಶಂಬಾ ಜೋಶಿಯವರಿಗೆ, ಸತತ ಪರಿಶ್ರಮ, ಅವಿತರ ಶೋಧನೆಯ ಫಲವಾಗಿ ಕನ್ನಡ ಸಂಸ್ಕೃತಿಯ ನೆಲೆಗಳನ್ನು ಗುರುತಿಸಲು ಸಾಧ್ಯವಾಗಿದೆ. ಪ್ರಾರಂಭದಲ್ಲಿ "ಕರ್ಣಾಟ' ಮೈವೆತ್ತುದು ಭಾರತದ ಯಾವ ಭಾಗದಲ್ಲಿ" ಎಂಬ ಪ್ರಶ್ನೆಯೇ ಅವರನ್ನು ಕಂನಾಡ ಮೂಲದ ನೆಲೆಯನ್ನು ಹುಡುಕಲು ಪ್ರೇರೇಪಿಸಿದೆ. ಕಂನಾಡ ಸಂಸ್ಕೃತಿಯ ಮೂಲ ತಿಳಿಯಲು ಭಾರತೀಯ ಸಂಸ್ಕೃತಿಯ ಜ್ಞಾನದ ಆವಶ್ಯಕತೆ ಇದೆ. ವೇದಗಳಲ್ಲಿ ಸಂಸ್ಕೃತಿಯ ಅಂಶಗಳು ಇರುವುದನ್ನು ಗುರುತಿಸಲು ಪ್ರಯತ್ನಿಸಿದರು. "ಕರ್ಣಾಟ ಭಾಷೆ ಹಾಗೂ ಸಂಸ್ಕೃತಿಯ ಆಕಾರ ತಾಳಿದ್ದು ಭಾರತೀಯ ಸಂಸ್ಕೃತಿಯ ಪ್ರಭಾವದಲ್ಲಿ ಈ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬೇರುಗಳು ಅವೆಷ್ಟೋ ಸಂಸ್ಕೃತದಲ್ಲಿವೆ. ವೇದಗಳಲ್ಲೂ ಇವೆ" ಎಂದಿದ್ದಾರೆ.[೧] ಸಂಸ್ಕೃತಿಯೆನ್ನುವುದು ಕೇವಲ ಹೊರನೋಟದ ತೋರಿಕೆಯಲ್ಲ. ಮನುಷ್ಯನ ಅಂತರಂಗವನ್ನು ಅರಿಯುವ ಹಂತವೂ ಆಗುತ್ತದೆ. ಈ ರೀತಿಯ ಅರಿವು ಅವರನ್ನು ಸಂಸ್ಕೃತಿಯ ಅನೇಕ ಅಂಶಗಳ ಕಡೆಗೆ ದೃಷ್ಟಿಹಾಯಿಸುವಂತೆ ಮಾಡಿದೆ. ಇಂತಹ ಅನೇಕ ಅಂಶಗಳು, ಜೀವನ ವಿಧಾನಗಳೆಲ್ಲ ಸಹಜವಾಗಿ ಕಂನಾಡ ಸಂಸ್ಕೃತಿಯನ್ನು ಅರಿಯುವಲ್ಲಿ ಸಾಧನಗಳಾಗಿವೆ. ಇತಿಹಾಸವೆನ್ನುವುದು ಗತಕಾಲದ್ದಲ್ಲ; ಇಂದಿನ ಸ್ಥಿತಿ-ಗತಿಗಳು ನಿನ್ನೆಯಲ್ಲಿ ಇವೆ ಎಂಬ ಗ್ರಹಿಕೆ ಮತ್ತು ಇಂತಹ ಗ್ರಹಿಕೆಯಿಂದ ಜೀವನವನ್ನು ನೋಡುವ ಕಳಕಳಿ ಕಂನಾಡ ಸಂಸ್ಕೃತಿಯ ಕುರಿತು ಬರವಣಿಗೆಯಲ್ಲಿ ವ್ಯಕ್ತವಾಗುತ್ತದೆ. ಈ ದೃಷ್ಟಿಕೋನದಲ್ಲಿ ಅವರು ಕಣ್ಮರೆಯಾದ ಕಂನಾಡ ಪ್ರದೇಶ, ಆ ಪ್ರದೇಶದ ಸಂಸ್ಕೃತಿಯನ್ನು ರೂಪಿಸಿದ ಜನಾಂಗ, ಮುಂದೆ ಅದು ನಾಶವಾಗಲು ಕಾರಣ ಮುಂತಾದ ವಿಷಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಗುರುತಿಸುತ್ತಾರೆ.

ಡಾ. ಬಸವರಾಜ ಕಲ್ಗುಡಿ ಅವರು ಶಂಬಾ ಅವರ 'ಕಣ್ಮರೆಯಾದ ಕನ್ನಡ', 'ಕನ್ನಡದ ನೆಲೆ' - ಕೃತಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಅವರ ಚಿಂತನೆಯನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ:

೧. ಕರ್ನಾಟಕ ಪ್ರದೇಶದ ವ್ಯಾಪ್ತಿ

೨. ಈ ಪ್ರದೇಶದ ಮೂಲ ಜನಾಂಗ - ಸಂಸ್ಕೃತಿಯನ್ನು ಬೆಳೆಸಿದ ರಾಜವಂಶಗಳು

೩. ಕನ್ನಡ-ದೇಶ ಹಾಗೂ ಜನಾಂಗ ತಮ್ಮ ವ್ಯಾಪ್ತಿ ಮತ್ತು ಪ್ರಾಧಾನ್ಯತೆಯನ್ನು ಕಳೆದುಕೊಂಡದ್ದರ ಕಾರಣಗಳು.[೨]

ಈ ಮೇಲಿನ ಮೂರು ಕಾರಣಗಳ ಹಿನ್ನೆಲೆಯಲ್ಲಿ ಒಟ್ಟು ಕನ್ನಡ, ಸಂಸ್ಕೃತಿಯ ನೆಲೆಗಳನ್ನು ಗುರುತಿಸಿಕೊಳ್ಳಬಹುದೆಂದು ತೋರುತ್ತದೆ. ಇದೇ ರೀತಿಯ ವ್ಯಾಪ್ತಿಯನ್ನು ಮಲ್ಲೇಪುರಂ ಜಿ. ವೆಂಕಟೇಶ್ ಅವರು ಸ್ಥೂಲವಾಗಿ 'ಆರು' ನೆಲೆಗಳಲ್ಲಿ ಶಂಬಾ ಕಂನಾಡ ಸಂಸ್ಕೃತಿಯನ್ನು ಗ್ರಹಿಸಿದ್ದಾರೆ, ಎನ್ನುತ್ತಾರೆ.

೧. ಭೌಗೋಳಿಕ ವ್ಯಾಪ್ತಿಯ ನೆಲೆಗಳು
೨. ಜಾನಾಂಗೀಯ ಅಧ್ಯಯನದ ನೆಲೆಗಳು
೩. ಭಾಷಿಕ ಅಂತಃ ಪ್ರಮಾಣದ ನೆಲೆಗಳು
೪. ಆಚರಣಾಮೂಲದ ನೆಲೆಗಳು
೫. ದೈವತಾ ಕಥೆಗಳು ಸಾಂಕೇತಿಕ ಆಕೃತಿಗಳ ನೆಲೆಗಳು
೬. ಸ್ಥಳನಾಮದ ನೆಲೆಗಳು[೩]

ಈ ರೀತಿಯ ವಿಭಜನೆಯಿಂದ ಶಂಬಾ ಅವರನ್ನು, ಅವರು ಗ್ರಹಿಸಿಕೊಂಡ ರೀತಿಯನ್ನು ತಿಳಿಯಲು ಸಹಾಯ ಮಾಡುತ್ತವೆ. ಇವುಗಳ ಅಧ್ಯಯನವೆಂದರೆ, ಅದು ಕಂನಾಡ ಸಂಸ್ಕೃತಿಯ ಏಳು-ಬೀಳುಗಳ ಪಲ್ಲಟವನ್ನೇ ನೋಡುವುದು ಎಂದರ್ಥ. ಈ ರೀತಿಯ ತಾತ್ವಿಕ ಒಳನೋಟವು ಶಂಬಾ ಅವರ ಚಿಂತನೆಯನ್ನು ಗ್ರಹಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ. ಈ ಮೇಲಿನ ವಿಭಜನೆಗಳು ಬಿಡಿಯಾದ ಆಶಯಗಳಾಗಿರದೇ, ಒಂದಕ್ಕೊಂದು ಅಂತರಸಂಬಂಧವನ್ನು ಹೊಂದಿವೆ.

ಅ. ಕಂನಾಡಿನ ಭೌಗೋಳಿಕ ವ್ಯಾಪ್ತಿಯ ನೆಲೆಗಳು

ಕವಿರಾಜ ಮಾರ್ಗಕಾರನ ಉಲ್ಲೇಖ "ಗೋದಾವರಿವರಮಿರ್ದ ನಾಡದಾ ಕನ್ನಡದೊಳ್" ಎಂಬ ವಾಕ್ಯವು ಕನ್ನಡ ನಾಡು 'ಗೋದಾವರಿ'ವರೆಗೆ ಕನ್ನಡದ ವ್ಯಾಪ್ತಿಯನ್ನು ಸೂಚಿಸುತ್ತದೆ. ಶಂಬಾ ಜೋಶಿಯವರು ಗೋದಾವರಿಯ ಉತ್ತರ ತೀರಕ್ಕೆ 'ಕರ್ಣಾಟ' ಇದ್ದಿರಬೇಕು ಎಂಬುದನ್ನು ಸೂಚಿಸುತ್ತಾ 'ನರ್ಮದಾ ನದಿ ತೀರವೇ' ಕನ್ನಡಿಗರ ಜನ್ಮಸ್ಥಳ ಎಂಬ ನಿರ್ಣಯಕ್ಕೆ ಬರುತ್ತಾರೆ. ಈ ನಿರ್ಣಯಕ್ಕೆ ಬರಲು ಅವರು ಸ್ಥಳನಾಮಗಳು, ಉತ್ತರದ ಜನಪದ ಭಾಷೆಯಲ್ಲಿರುವ ಭಾಷಾ ಸ್ವರೂಪ, ಪುರಾಣಗಳ ಭಾಷಿಕ ಸಂಕೇತ ಮುಂತಾದ ಜನಪದ ಸಾಧನಗಳ ಮೂಲಕ ಕನ್ನಡ ಸ್ಥಳದ ಸೂಚನೆಯನ್ನು ಮಾಡುತ್ತಾರೆ. 'ದ್ರಾವಿಡ' ಪದಕ್ಕೆ ಬದಲಾಗಿ 'ಕಂದಮಿಳ' ಎಂಬ ಶಬ್ದವನ್ನು ಉಪಯೋಗಿಸುತ್ತಾರೆ. ಈ ಭಾಷಾವರ್ಗದ ಶಬ್ದಗಳಾದ ಕುಂತ, ಕುಡು, ಕೊಂಡ ಇವುಗಳು ತಗ್ಗು-ದಿಣ್ಣೆಯ ಪ್ರದೇಶವನ್ನು ಸೂಚಿಸುವ ಶಬ್ದಗಳಾಗಿದ್ದು, ಇವು ಯಾವುವೂ ಸಂಸ್ಕೃತ ಜನ್ಯವಲ್ಲ. ಇಂತಹ ಅಂಕು-ಡೊಂಕಾದ ಪರ್ವತ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರೇ ಕಂನಾಡ ಮೂಲಿಗರು.[೪] ಸುಮಾರು ೬ನೇ ಶತಮಾನದವರೆಗೆ ಗೋದೆಯ ಉತ್ತರದವರೆಗೆ ವ್ಯಾಪಿಸಿದ್ದ ನಾಡು ಅದಕ್ಕೆ ಮೊದಲು ನರ್ಮದೆವರೆಗೂ ಹಬ್ಬಿರಬೇಕು ಎಂದು ಊಹೆ ಮಾಡುತ್ತಾರೆ. ಗೋದಾವರಿಯ ಉತ್ತರಕ್ಕಿರುವ ಈಗಿನ 'ಖಾನದೇಶ' ಮೊದಲು 'ಕನ್ನರದೇಶ'ವಾಗಿರಬೇಕು. ಏಕೆಂದರೆ ಈಗಲೂ ಅಲ್ಲಿ ಕನ್ನಡ ಮಾತನಾಡುವ ಕುರುಂಬರೂ, ಹೊಲೆಯರೂ ಇದ್ದಾರೆ. ಅಲ್ಲದೆ 'ಕನ್ನಡು' ಎಂಬ ಊರು; ಕನ್ನಡ ಶಾಸನಗಳು, ಕನ್ನಡಿಗರ ವೀರತ್ವದ ಪ್ರತೀಕಗಳಾದ ವೀರಗಲ್ಲುಗಳೂ ಹೇರಳವಾಗಿ ಲಭ್ಯವಾಗುತ್ತವೆ. ನಾಗಪುರ, ಚಂದಾ, ಭಂಡಾರ ಮೊದಲಾದ ಕಡೆ ಕನ್ನಡ 'ಕಂದಮಿಳ' ನೆಲೆಗಳು ಇದ್ದುದ್ದನ್ನು ಪತ್ತೆ ಹಚ್ಚಿ ಕನ್ನಡ ನೆಲೆಯನ್ನು ಕಾವೇರಿಯಿಂದ ಗಂಗೆ ನೀಲಗಿರಿಯಿಂದ ರಾಜ ಮಹಾಲದವರೆಗೆ ವಿಸ್ತರಿಸುತ್ತಾ ಹೋಗುತ್ತಾರೆ. ಊರು-ಪಟ್ಟಿ-ವಾಡಿ-ಪಾಡಿ ಹಟ್ಟಿ-ಹಾಟ-ಬೀಡು ಮೊದಲಾದ ಗ್ರಾಮಗಳ ಹಿನ್ನೆಲೆಯಲ್ಲಿಯೂ ಕನ್ನಡ ಭಾಷಿಕರ ಸಂಸ್ಕೃತಿಯನ್ನು ಗುರುತಿಸುತ್ತಾ ಅವರ ನೆಲೆಯ ವ್ಯಾಪ್ತಿಯನ್ನು ಕುರಿತು ವಿಚಾರ ಮಾಡುತ್ತಾರೆ.

ಶಂಬಾ ಈ ಬಗೆಯ ಸಂಶೋಧನೆಯನ್ನು ಕೈಗೊಂಡ ಕಾಲ ನವೋದಯದ ಉತ್ಕೃಷ್ಟದ ಕಾಲ. ಅಭಿಮಾನ, ವೈಭವದ ನೆಲೆಯಲ್ಲಿ ನಮ್ಮ ಸಂಸ್ಕೃತಿಯನ್ನು, ಅದರ ಕುರಿತು ಅಧ್ಯಯನ ನಡೆಯುತ್ತಿದ್ದ ಕಾಲವಾಗಿತ್ತು ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಇಂತಹ ಕಾಲದಲ್ಲಿ ಶಂಬಾ ಬೇರೆಯಾಗಿ ಯೋಚಿಸಿದರೂ ಕೂಡ, ಕಾಲದ ಪ್ರಭಾವ ಅವರ ಮೇಲೆ ಇದ್ದೇ ಇದೆ ಎನ್ನಬಹುದು. ಕನ್ನಡ

ಸಂಸ್ಕೃತಿಯನ್ನು ಗುರುತಿಸುವ ಭರದಲ್ಲಿ ಅದರ ವ್ಯಾಪ್ತಿಯನ್ನು ಹಿಗ್ಗಾ-ಮುಗ್ಗಾ ಜಗ್ಗುತ್ತಾ ಹೋದರು. ಇಲ್ಲಿಯು ಕೂಡ ಒಂದು ಬಗೆಯ ಸ್ವ-ಅಭಿಮಾನ ಇದಕ್ಕೆ ಕಾರಣವಾಗುತ್ತದೆ ಹಾಗೂ ಆ ಕಾಲದ ಆದರ್ಶದ ವೈಭವದ ರೀತಿಗಳು ಬೇರೊಂದು ಬಗೆಯಲ್ಲಿ ಇಲ್ಲಿ ಸೇರಿಕೊಂಡು ಬಿಡುತ್ತವೆ.

'ಕರ್ನಾಟಕ ಸಂಸ್ಕೃತಿ ಪೂರ್ವಪೀಠಿಕೆ'ಯಲ್ಲಿ ಹೇಳುವಂತೆ ಕನ್ನಡ ನಾಡು ವಿಂಧ್ಯದವರೆಗೂ ಆವರಿಸಿದೆ. ನರ್ಮದಾ ನದಿ ಪರಿಸರದ ಮಧ್ಯ ಭಾರತವೇ ಮೂಲ ಸ್ಥಾನವಾಗಿದೆ. ಇಲ್ಲಿಯೇ ನಮ್ಮ ಸಂಸ್ಕೃತಿಯ ಪೂರ್ವಪೀಠಿಕೆ ಆರಂಭವಾದದ್ದು. ಇದರ ಹರವು ದಕ್ಷಿಣದ ತಲಕಾಡಿನಿಂದ ಉತ್ತರದ ಮರಹಟ್ಟ (ಮಹಾರಾಷ್ಟ್ರ) ವಿದರ್ಭದವರೆಗೆ ಅಷ್ಟೇ ಅಲ್ಲದೆ; ಅಲ್ಲಿಯ ಜನಾಂಗಗಳಾದ ಕಳವರು, ಕುರುಬರು, ದನಗಾರರು ಋಗ್ವೇದದಲ್ಲಿಯ ವನರ್ಘು (ವಾನರ) ವನರ್ಗೋರೆಂದು ಕರೆಯಲ್ಪಟ್ಟಿದ್ದರೆಂದು; ಈ ಉಲ್ಲೇಖಗಳಿಂದ ನಮ್ಮ ವ್ಯಾಪ್ತಿ ಗಂಗೆಯವರೆಗೂ ಹಬ್ಬುತ್ತದೆ. ಹಟ್ಟಿಕಾರ-ದನಗಾರರು ಕಂದಮಿಳ ಮಾತುಗಳು ಋಗ್ವೇದ-ಅಥರ್ವವೇದಗಳಲ್ಲಿ ಸಸ್ಯ-ಪ್ರಾಣಿಗಳ ಸೂಚಕಗಳಾಗಿ ದೊರೆಯುತ್ತವೆ.[೫] ಈ ಹಟ್ಟಿಕಾರ ಅಥವಾ ಹಟಗಾರರು ಕಂನಾಡಿನ ಮೂಲಿಗರು. ಅವರು ಅಲ್ಲಲ್ಲಿ ಒಂದುಗೂಡಿದ್ದರಿಂದ 'ನಾಡು' ಉಂಟಾದವು; ನಾಡಿಗರಾದರು. ಮನುಸ್ಮೃತಿಯಲ್ಲಿ 'ನಟ' (ನಾಡವರ) ಉಲ್ಲೇಖವಿದೆ. ಈ ಸ್ಮೃತಿಯ ಕಾಲದ ಕ್ರಿ.ಶ. ಮೊದಲ ೨೦೦ ರಿಂದ ಕ್ರಿ.ಶ. ತರುವಾಯ ೨೦೦ರವರೆಗೆ ಎಂದು ನಿಗದಿಯಾಗಿರುವುದರಿಂದ, ಹಟ್ಟಿಕಾರರು ಕ್ರಿ.ಶ. ಆರಂಭದಿಂದಲೇ ಇದ್ದಿರಬಹುದೆಂದು ಊಹಿಸಬಹುದು. ಹಟ್ಟಿಕಾರಿಕೆಯಿಂದ ಬೇಸಾಯ ವೃತ್ತಿಗೆ ಪರಿವರ್ತನೆಯಾದುದರಿಂದ 'ಕುಡುವ'ರೆಂದು 'ಒಕ್ಕಲ'ರೆಂದು ಹೆಸರು ಬಂದಿದೆ. ಕಾಲಾಂತರದಲ್ಲಿ ಆರ್ಯರು ಹಟ್ಟಿಕಾರರ ಹೆಣ್ಣನ್ನು ಅಥವಾ ಹಟ್ಟಿಕಾರರು ಆರ್ಯರ ಹೆಣ್ಣನ್ನು ಮದುವೆಯಾಗುವ ಪ್ರಸಂಗ ಒದಗಿರಬಹುದಾದ್ದರಿಂದ ಅವರಿಗೆ ಹುಟ್ಟಿದ ಸಂತತಿಯೇ 'ಆರಿಯ' ಎಂಬ ಜನಾಂಗ ನಿರ್ಮಾಣವಾಗಿರಲಿಕ್ಕೆ ಬೇಕು.[೬]

"ಇಂದಿನ ಕರ್ನಾಟಕದ ಉತ್ತರದಲ್ಲಿ ಪ್ರಾಚೀನ ಕಾಲಕ್ಕೆ ಕಂನುಡಿಯು ಎಲ್ಲಿಯವರೆಗೆ ಇದ್ದಿತು ಎಂಬುದನ್ನು ನಿರ್ಧರಿಸಿಕೊಳ್ಳದೆ ಕಂನುಡಿಯ ಜನ್ಮಕಾಲದ ಪರಿಸರ ತಿಳಿಯಲು ಶಕ್ಯವಿಲ್ಲ."[೭] ವಿಂಧ್ಯ-ಹಿಮಾಲಯದವರೆಗೆ ಆರ್ಯರ ನಾಡೆಂದು ಖ್ಯಾತಿ ಪಡೆದಿದೆ. ಅಂದಾಗ ನರ್ಮದೆಯಿಂದ ಕೆಳಗಿನ ಭಾಗ 'ದಕ್ಷಿಣಾವರ್ತ'ವೆಂದೂ ಮ್ಲೇಚ್ಛರ ನಾಡೆಂದು ಹೇಳಬಹುದು. ಆದರೆ ನಿತ್ಯ ಆಹ್ನಿಕ ಕ್ರಿಯೆಯ ಪ್ರಾರಂಭದಲ್ಲಿ 'ಗೋದಾವರ್ಯಾಃ ದಕ್ಷಿಣೇ ತೀರೇ ಶಾಲಿವಾಹನ ಶಕೆ" ಎಂಬ ಮಂತ್ರ ಪಾಠವುಂಟು. ವಿಂಧ್ಯದವರೆಗೆ ಇದ್ದ ಆರ್ಯನಾಡು ಇಲ್ಲಿ ಗೋದಾವರಿ ತೀರದವರೆಗೆ ವ್ಯಾಪಿಸಿಬಿಟ್ಟಿದೆ. ನಮಗೆ

ಆರ್ಯಾವರ್ತ ನಾಡಿನಲ್ಲಿ ವಿಶೇಷ ಉಲ್ಲೇಖಗಳು ಸಿಗದಿದ್ದರೂ, ಆರ್ಯಾವರ್ತದ ಹೊರಗಿನ ನಾಡುಗಳಲ್ಲಿ ಪೂರ್ವ ದ್ರಾವಿಡರ (ಕಂದಮಿಳ) ಕುರುಹುಗಳನ್ನು ಕಂಡುಕೊಳ್ಳಬಹುದಾಗಿದೆ. ಬಂಗಾಳದಲ್ಲಿ 'ಸೇನ' ಅರಸರು 'ಕರ್ಣಾಟ-ಕ್ಷತ್ರಿಯ'ರು ಎಂದು ಅಲ್ಲಿಯ ವಿದ್ವಾಂಸರೇ ಒಪ್ಪಿದ್ದಾರೆ. ಆದರೆ ಇಲ್ಲೇ ಹತ್ತಿರದಲ್ಲಿರುವ ಮಹಾರಾಷ್ಟ್ರಕ್ಕೆ ನಮ್ಮ ಗಾಳಿಯು ಸೋಂಕಿಲ್ಲವೆಂದರೆ ಏನರ್ಥ. ಇದರಂತೆ ಗುಜರಾತಿನ ವಿಚಾರವೂ ಕೂಡ. ಕನ್ನಡದ ಕೆಲವು ಸಂಶೋಧಕರಿಗೆ ನೃಪತುಂಗನ ವಿಚಾರದ ಬಗ್ಗೆಯೇ ಅನುಮಾನ. ಅದು ಕಲ್ಪನೆ ಮನೋರಾಜ್ಯವಂತೆ. ಆರ್ಯ ಗ್ರಂಥಗಳಲ್ಲೇ ವಿಂಧ್ಯದಿಂದ ದಕ್ಷಿಣಕ್ಕಿರುವುದು "ಮ್ಲೇಚ್ಛ ಭೂಮಿ" ಎಂದು ಹೇಳಿದ್ದರೂ ದಕ್ಷಿಣಾವರ್ತದಲ್ಲಿ ಆರ್ಯರನಾಡು ಎಲ್ಲಿಂದ ಬರಬೇಕು. ಒಂದು ಕಾಲದಲ್ಲಿ ಪಂಜಾಬಿನವರೆಗೂ ದ್ರಾವಿಡರು ಹರಡಿದ್ದರೆಂದು ಒಪ್ಪಿಕೊಂಡಾಗ, ದ್ರಾವಿಡ (ಕಂದಮಿಳ) ಶಾಖೆಯಾದ ಕಂನಾಡರು ನರ್ಮದೆಯವರೆಗೆ ಇದ್ದರು ಎನ್ನಲು ಅಪನಂಬಿಕೆಯಾಕೆ. ಪ್ರತ್ಯಕ್ಷವಾಗಿ ಆ ನಾಡನ್ನು ಆಳುತ್ತಿದ್ದ ದೊರೆಯೇ ಮೇಲಿನ ಮಾತನ್ನು ಹೇಳಿದ್ದರಿಂದ ಅದನ್ನು ಅಲ್ಲಗಳೆಯಲು ಬರುವುದಿಲ್ಲ. ಡಾ. ಸ್ಟನ್ ಕೊನೊ, ಮರಾಠಿ-ಗುಜರಾತಿಗಳ 'ದ್ರಾವಿಡ' ವರ್ಗಕ್ಕೆ ಸೇರಿದವರೆಂದು ಹೇಳುತ್ತಾರೆ. "ಕನ್ನಡವು ಅಷ್ಟು ಇತ್ತು, ಇಷ್ಟು ಇತ್ತು" ಎಂಬ ಪ್ರಾಂತಾಭಿಮಾನದಿಂದ ತಲೆತಿರುಗಿದವರ ಮಾತು: ಎಂಬುದು ಒಪ್ಪಿಕೊಂಡರೂ, ಮೇಲಿನ ಪರದೇಶದವರೇ ಈ ರೀತಿ ಹೇಳುತ್ತಾರಲ್ಲ ಎಂದು ತನ್ನ ವಿರೋಧದ ಟೀಕೆಗಳಿಗೆ ಉತ್ತರಿಸುತ್ತಾರೆ.[೯]

ಗುಜರಾತ-ಮಹಾರಾಷ್ಟ್ರ ಹೆಸರುಗಳು ಅರ್ವಾಚೀನ 'ಗುಜರಾತ'ಗೆ 'ಲಾಟ' ಎಂಬ ಹೆಸರಿತ್ತು. ಮಹಾರಾಷ್ಟ್ರ ಹೆಸರು ಪ್ರಾಚೀನವಾದರೂ ಅದರ ಉಲ್ಲೇಖ ಕಡಿಮೆ. 'ಬೃಹತ್ ಕರ್ಣಾಟ' ಎಂಬುದು 'ಮಹಾರಾಷ್ಟ್ರ-ಕರ್ಣಾಟ' ಒಳಗೊಂಡ ಪ್ರದೇಶ ಎಂಬಂತೆ ಕಾಣುತ್ತದೆ. ಕನ್ನಡ ನಾಡಿನೊಳಗೆ ಸೇರಿಹೋಗಿದ್ದ ಮಹಾರಾಷ್ಟ್ರವನ್ನು ಸ್ವತಂತ್ರವಾಗಿ ಹೇಳುವ ಅವಶ್ಯಕತೆ ಇಲ್ಲದಿದ್ದಿರಬೇಕು. ಅಕ್ಕ-ಪಕ್ಕದ ನಾಡಿನ ಹೆಸರು ಹೇಳಿ ಇದನ್ನು ಕೈ ಬಿಡುವಾಗ ಮೇಲಿನ ಮನೋಭಾವವೇ ಕಾರಣವಿರಬೇಕು. 'ಲಾಟ' ದೇಶದಲ್ಲಿ ೧೨ನೇ ಶತಮಾನದವರೆಗೂ ಕನ್ನಡ ವಾತಾವರಣವು ಇದ್ದುದು ಅನುಭವಕ್ಕೆ ಬರುತ್ತದೆ. 'ಲಾಟ-ಕರ್ನಾಟ'ಗಳು ನಾಟ ಆಗರ. ಜೈನ ಸ್ಥಳಗಳಾದ ಕಾರ್ಕಳ, ಮೂಡುಬಿದ್ರೆ, ಶ್ರವಣಬೆಳಗೊಳ ಸ್ಥಳಗಳಿಗೆ ಇಂದಿಗೂ ಗುಜರಾತಿಗಳು ಬರುವುದನ್ನು ಕಾಣಬಹುದು. ಚಾಲುಕ್ಯರ ಒಂದು ಶಾಖೆ 'ಲಾಟ' ಆಳಿದ್ದಲ್ಲದೆ ಅಲ್ಲಿಯ ಭಾಷೆಯನ್ನು ಪೋಷಿಸಿದೆ. ಬಂಗಾಳದಲ್ಲಿ 'ಸೇನ'ರೆಂಬ ಕರ್ಣಾಟ-ಕ್ಷತ್ರಿಯರು ಆಳಿದಂತೆ ಮಿಥಿಲೆಯಲ್ಲಿ 'ನಾನ್ಯದೇವ' ಅರಸನು ಆಳಿದನು. ಇವನು ಕನ್ನಡದವ, 'ಕರ್ಣಾಟ ಕುಲಭೂಷಣ' ಎಂದೂ ಇವನನ್ನು ಕರೆಯಲಾಗುತ್ತಿತ್ತು. 'ನೇಪಾಳ'ದಲ್ಲಿಯೂ ಒಂದು ಶಾಖೆ ಆಳಿತು. ಇವರೆಲ್ಲ ಅಲ್ಲಿ ರಾಜ್ಯವಾಳಿದರೆ

ಹೊರತು ಕನ್ನಡವನ್ನು ಅದರ ಲಿಪಿಯನ್ನು ಜೀವಂತವಾಗಿಸುವ ಪ್ರಯತ್ನ ಮಾಡಿದ್ದು ಕಂಡು ಬರುವುದಿಲ್ಲ. ರಾಷ್ಟ್ರಿಕರು-ರಾಷ್ಟ್ರಕೂಟರು, ಲಾಟ-ಮರ್ಹಾಟಗಳಲ್ಲಿ ಇದ್ದರೂ ಅವರ ಮನೆ ಮಾತು ಕನ್ನಡವಾಗಿರುವುದರಿಂದ ಆ ಪ್ರದೇಶಗಳು ಕನ್ನಡದ ಮೂಲಸ್ಥಾನಗಳಾಗಿರಬೇಕು.

ಮೇಲಿನ ಎಲ್ಲ ಸಂಗತಿಗಳನ್ನು ಕುರಿತು ವಿಚಾರ ಮಾಡಿದರೆ ಕನ್ನಡ ಪ್ರದೇಶವು 'ನರ್ಮದೆ'ಯ ತೀರದವರೆಗೂ ಹಬ್ಬಿತ್ತು ಎಂಬುದು ಸ್ಪಷ್ಟವಾಗಿ ಹೇಳಬಹುದು. ಕನ್ನಾಡಿನ ಮೂಲಿಗರು, ಇತರ ಪ್ರದೇಶಗಳಲ್ಲಿ ವಾಸವಾಗಿರುವ ಜನಾಂಗಗಳು ಅವರ ಆಚರಣೆ, ಭಾಷಿಕ ಸ್ವರೂಪಗಳು ಕೂಡ ಕನ್ನಡ ಇಲ್ಲಿಯವರೆಗೆ ವಿಸ್ತರಿಸಿತ್ತು ಎಂಬುದನ್ನು ಮತ್ತೆ-ಮತ್ತೆ ನೆನಪಿಸುತ್ತವೆ. ಈ ಎಲ್ಲ ಕಾರಣಗಳನ್ನು ನೀಡುತ್ತಾ ಶಂಬಾ ಅವರು ನರ್ಮದೆಯವರೆಗೂ ಹಬ್ಬಿದ ಈ ನಾಡು ಕುಗ್ಗುತ್ತಾ ಬರಲು ಕಾರಣವೇನು? ಒಂದೊಂದೇ ಪ್ರದೇಶಗಳನ್ನು ಕಳೆದುಕೊಳ್ಳುತ್ತಾ ಕೃಷ್ಣಾತಟಕ್ಕೆ ನಿಲ್ಲಲು ಕಾರಣವಾವುದು? ಒಂದು ಕಾಲಕ್ಕೆ ಮಹಾರಾಷ್ಟ್ರ 'ಕನ್ನಡ ಪ್ರದೇಶ'ವಾಗಿದ್ದು ಇಂದು ಕೈಬಿಟ್ಟಿದ್ದರ ಕಾರಣ ಮೀಮಾಂಸೆ ಕಡೆ ಹೊರಳುತ್ತಾರೆ. 'ಆರ್ಯ' ಸಂಸ್ಕೃತಿಯ ಹೇರಿಕೆಗೆ ಒಳಗಾಗಿದ್ದೇ ಕನ್ನಡ ಸಂಸ್ಕೃತಿ ತನ್ನ ಮೂಲ ಲಕ್ಷಣಗಳ ಜೊತೆಗೆ ಅದರ ಭೌಗೋಳಿಕ ವ್ಯಾಪ್ತಿಯನ್ನು ಕುಗ್ಗಿಸಿಕೊಳ್ಳಲು ಕಾರಣವಾಯಿತು. ಇದೇ ಕಣ್ಮರೆಯಾದ 'ಕಂನಾಡ ಸಂಸ್ಕೃತಿ' ಕತೆಯಾಗಿದೆ. ಮಲ್ಲೇಪುರಂ ಜಿ. ವೆಂಕಟೇಶ ಅವರು ಗುರುತಿಸಿದಂತೆ, ಶಂಬಾ ಅವರ ಚಾರಿತ್ರಿಕ ಅಧ್ಯಯನದ ಒಳಹುಗಳನ್ನು ಪ್ರಸ್ತುತ ಕಾಲಕ್ಕೂ ಅನ್ವಯಿಸಬೇಕಾದ ಅವಶ್ಯಕತೆಯಿದೆ. 'ಗಡಿ ಸಮಸ್ಯೆ' ಉಲ್ಬಣವಾಗುತ್ತಿರುವ ಈ ದಿನಗಳಲ್ಲಿ ಶಂಬಾ ಅವರ ವಿಚಾರಗಳ ವಿಮರ್ಶೆ ಕೂಡ ಅಗತ್ಯವೆನಿಸುತ್ತದೆ.'

ಕಂನಾಡು ಭೌಗೋಳಿಕ ವ್ಯಾಪ್ತಿಯ ನೆಲೆಗಳನ್ನು ಕಳೆದುಕೊಳ್ಳಲು ಮುಖ್ಯವಾಗಿ ಎರಡು ಕಾರಣಗಳನ್ನು ಗುರುತಿಸಬಹುದು.

೧. ಆರ್ಯೀಕರಣವನ್ನು ಕಂದಮಿಳರು ಸ್ವೀಕರಿಸಿದ್ದು

೨. ರಾಜಕೀಯವಾಗಿ ಕಂನಾಡಿನ ಅರಸರ ಪ್ರಾಬಲ್ಯ ಕುಂಠಿತವಾಗ ತೊಡಗಿದ್ದು

'ಕಂದಮಿಳ' ಭಾಷೆಯೊಡನೆ ಆರ್ಯಭಾಷಿಕರ ಸಂಸ್ಕೃತದ ಪ್ರಭಾವ ಪ್ರಾರಂಭವಾದುದು ಸಿಂಧ್-ಪಂಚನದ ದೇಶಗಳತ್ತಣಿಂದ ಎಂಬುದು ನಿಶ್ಚಿತವಿದೆ. ಒಂದು ಭಾಷೆ ಭಿನ್ನ ಭಾಷೆಯೊಡನೆ ಸಂಪರ್ಕ ಪ್ರಾರಂಭವಾದ ತಕ್ಷಣ ಹೊಸ ಭಾಷೆಯಾಗಲಿ ಎಂದೂ ಮೈದಾಳುವುದಿಲ್ಲ. ಅದಕ್ಕೆ ಕೆಲಸಮಯ ಬೇಕಾಗುತ್ತದೆ. ಸಾಮಾಜಿಕ ಪರಿಸ್ಥಿತಿಯ ಸಂದರ್ಭದಲ್ಲಿ ಇಬ್ಬರಿಗೂ ವ್ಯವಹರಿಸುವ ಅವಶ್ಯಕತೆ ಹೆಚ್ಚಿದಂತೆ

ಕೊಡು-ಕೊಳ್ಳುವಿಕೆ ಅನಿವಾರ್ಯವಾಗುತ್ತದೆ. ಉಭಯ ಭಾಷಾ ಬಲ್ಲಿದರ ಕೆಲವೊಂದು ಪಂಗಡಗಳು ಅಸ್ತಿತ್ವದಲ್ಲಿ ಬರುತ್ತವೆ. ವೇದಗಳಲ್ಲಿ ಕಂದಮಿಳ ಶಬ್ದಗಳು ನುಸುಳಿರಲು ಇದೇ ಕಾರಣವಿರಬೇಕು. ಒಂದು ಭಾಷೆ ಬಹುವರ್ಗದ ಭಾಷೆಯಾಗಿದ್ದಾಗ ರಾಜಕೀಯ, ಧಾರ್ಮಿಕವಾಗಿ ಮೇಲ್ಮಟ್ಟದಲ್ಲಿದ್ದಾಗ ಸಮಾಜದ ಕೆಳಗಿನ ಭಾಷೆಗಳು ಅದಕ್ಕೆ ಮನಸೋತು ಪ್ರತಿಷ್ಠೆಯ ದೃಷ್ಟಿಯಿಂದ ಆ ಭಾಷೆಯ ಪ್ರಭಾವದಲ್ಲಿ ಬಹಳ ಬೇಗ ಬದಲಾವಣೆಯಾಗುವುದು ಸಹಜವಾಗಿರುತ್ತದೆ. ಈ ರೀತಿಯ ಸ್ಥಿತ್ಯಂತರದಿಂದ ಕಂದಮಿಳ ಭಾಷೆ ಬಹುಬೇಗ ಸಂಸ್ಕೃತೀಕರಣಕ್ಕೆ ಒಳಗಾಯಿತು.[೧೦]

ಇನ್ನು ಕನ್ನಡ ಸಂಸ್ಕೃತಿಯು ಕಂದಮಿಳ ವರ್ಗದಿಂದಲೇ ರೂಪುಗೊಂಡಿದೆ ಎನ್ನುವಾಗ, ಅದು ಕೂಡ 'ಸಂಸ್ಕೃತ' ಪ್ರಭಾವಕ್ಕೆ ಒಳಗಾಗಿ ತನ್ನ ಸಂಸ್ಕೃತಿಯ ಜೊತೆ ಜೊತೆಗೆ ರಚನೆಯಲ್ಲಿಯೂ ಭೌಗೋಳಿಕ ವ್ಯಾಪ್ತಿಯನ್ನು ಕುಗ್ಗಿಸಿಕೊಂಡಿರುವುದು ಸತ್ಯವೆನಿಸುತ್ತದೆ. ಸಾಹಿತ್ಯ ರಚನೆಯಲ್ಲಿಯೂ ಅವೈದಿಕ ಸಾಹಿತ್ಯ ರಚನೆಯೇ ಹೆಚ್ಚು ವಿನಾ ವೈದಿಕ ಸಾಹಿತ್ಯ ರಚನೆ ಅಷ್ಟಾಗಿ ನಡೆದಿಲ್ಲ. ವೈದಿಕ ಮತದ ಬಗ್ಗೆ ಒಲುಮೆ ಇಟ್ಟುಕೊಂಡ ತೆಲುಗು-ಮರಾಠಿಗಳು ಕ್ರಮೇಣ ಬಲಶಾಲಿಯಾಗುತ್ತಾ ಕನ್ನಡದೊಳಗೆ ಪ್ರವೇಶ ಪಡೆದುಕೊಂಡಿರುವುದನ್ನು ಕಾಣಬಹುದು. ಕನ್ನಡಿಗರು ಮರಾಠಿಗಳಿಗೆ ಕರೆಯುವ 'ಆರಿಯ' ಎಂಬ ಮಾತು ಆ ಭಾಷೆಯ ಬಗ್ಗೆ ಇಟ್ಟಿರುವ ಕಳಕಳಿಯನ್ನು ಸೂಚಿಸುತ್ತದೆ.[೧೧]

ಸಂಸ್ಕೃತಿಯ ಸ್ಥಿತ್ಯಂತರವು ರಾಜಕೀಯವಾಗಿ ೧೨-೧೩ನೇ ಶತಮಾನಕ್ಕೆ ಬಹಳ ವೇಗವಾಗಿ ನಡೆಯಿತು. ಹೊಯ್ಸಳರ ಕಾಲದಲ್ಲಿ 'ಕನ್ನಡಿಗ' ಎಂಬ ಅಭಿಮಾನದ ಜ್ಯೋತಿ ಬೆಳಗಲು ಕಾರಣ, ಮರಾಠಿ-ತೆಲುಗು, ರಾಜಕೀಯವಾಗಿ ತಮ್ಮ ಪ್ರತಿಷ್ಠೆಯನ್ನು ಒಪ್ಪಿಕೊಳ್ಳುವಂತೆ ಮಾಡಲು ಹವಣಿಸಿದ್ದರಿಂದ ದೇವಗಿರಿಯ ಯಾದವರು-ಹೊಯ್ಸಳರೊಂದಿಗೆ ನಡೆದ ಯುದ್ಧವೇ ಮುಂದೆ ಮರಾಠಿ-ಕನ್ನಡಗಳಿಗೆ ವಿರೋಧವನ್ನು ಸೂಚಿಸುತ್ತದೆ. ಹೊಯ್ಸಳರ ಸೇನಾಪತಿಗಳು ಪಂಡಿತ-ಪಾಮರರು, ತಮ್ಮನ್ನು 'ಕನ್ನಡಿಗ'ರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಉದಾಹರಣೆಗಳು ದೊರೆಯುತ್ತವೆ. ೧೩-೧೪ನೇ ಶತಮಾನದ ನಂತರ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಹೆಚ್ಚು-ಹೆಚ್ಚು ಆರ್ಯೀಕರಣವನ್ನು ಹೊಂದುತ್ತಾ ತನ್ನ ಮೂಲ ಲಕ್ಷಣಗಳನ್ನು ನಾಶಮಾಡಿಕೊಂಡಿತು. ಧಾರ್ಮಿಕವಾಗಿ 'ರಾಮದಾಸ' ಪಂಥದವರು ಇಡೀ ಕೃಷ್ಣಾತೀರದ ಕರ್ಣಾಟಕವನ್ನು ತಮ್ಮ ಪಂಥಕ್ಕೆ ಸೆಳೆದುಕೊಂಡಿದ್ದರು. ಹಂಪೆಯವರೆಗೂ ಈ ಪಂಥದ ಮಠಗಳಿದ್ದವು.[೧೨]

ಈ ಎಲ್ಲ ಕಾರಣಗಳಿಂದ ಕರ್ಣಾಟಕವು ಆರ್ಯೀಕರಣವನ್ನು ಸ್ವೀಕರಿಸುತ್ತಾ, ತನ್ನ ಭಾಷೆ, ಭೌಗೋಳಿಕ ನೆಲೆ, ಸಂಸ್ಕೃತಿಯ ಮೂಲ ಸ್ವರೂಪದಲ್ಲಿ ಬದಲಾವಣೆ ಮಾಡಿಕೊಂಡಿತು. ಶಂಬಾ ಅವರು ಇಲ್ಲಿ

ಕೇವಲ ಭೌಗೋಳಿಕ ನೆಲೆಯ ಅನ್ವೇಷಣೆಗೆ ಮಾತ್ರ ತೊಡಗದೇ ಅದರ ಅವನತಿಗೆ ಕಾರಣವಾದ, ಕಾರಣ ಮೀಮಾಂಸೆಯ ಕಡೆ ಹೊರಳುತ್ತಾರೆ. ಅಂದರೆ ಅವರಿಗೆ ಸಂಸ್ಕೃತಿಯ ಇತಿಹಾಸ ಮುಖ್ಯವಾಗದೇ, ವರ್ತಮಾನ ಬದುಕಿನ 'ಸ್ಥಿತಿ'ಯ ಬಗ್ಗೆ ಕಾರಣಗಳನ್ನು ನೆನ್ನೆಗಳಲ್ಲಿ ಹುಡುಕುವುದು ಅಗತ್ಯವಾಗಿತ್ತು ಎನ್ನಬಹುದು.

ಆಕರ ಗ್ರಂಥಗಳು

೧. *ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ,* ಭಾಗ-೨, ಬಿನ್ನಹ-XII

೨. *ಶಂಬಾ ಕೃತಿ ಸಮೀಕ್ಷ,* ಪು.೩೯

೩. *ಸಂಸ್ಕೃತಿ ಮತ್ತು ಶಂಬಾ* ಪು. ೪೬

೪. *ಶಂ.ಕೃ.ಸ.,* ಪು.೭೩-೭೭ ಲೇಖನ-ಕರ್ನಾಟ ಸಂಸ್ಕೃತಿ ಪೂರ್ವಪೀಠಿಕೆ ಒಂದು ಪರಿಚಯ, ರಾ.ನ. ಚಂದ್ರಶೇಖರ

೫. ಅದೇ, ಪು.೭೩-೭೪

೬. ಅದೇ, ಪು.೮೪-೮೫ ಲೇಖನ: *ಎಡೆಗಳು ಹೇಳುವ ಕಂನಾಡ ಕತೆ,* ಡಾ. ಎಸ್. ವಿದ್ಯಾಶಂಕರ

೭. *ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ,* ಭಾಗ-I, ಪು.೧೦೫

೮. *ಕನ್ನಡದ ನೆಲೆ* ಪು.೧೪೧-೧೬೨,

೯. *ಶಂಬಾ ಮತ್ತು ಸಂಸ್ಕೃತಿ,* ಪು.೪೭-೪೮

೧೦. *ಕ.ಸಂ.ಪೂ.ಪೀ.,* ಭಾಗI, ಪು.೮೩-೮೪

೧೧. *ಕನ್ನಡದ ನೆಲೆ,* ಪು.೨೪-೨೫

೧೨. *ಶಂ.ಕೃ. ಸಮೀಕ್ಷೆ,* ಪು.೪೨, ಲೇಖನ: *ಕಣ್ಮರೆಯಾದ ಕನ್ನಡ ಮತ್ತು ಕನ್ನಡದ ನೆಲೆ, ಶಂಬಾ ಅವರ ಸಂಶೋಧನೆಯ ಸ್ವರೂಪ ಕುರಿತ ವಿವೇಚನೆ,* ಡಾ. ಬಸವರಾಜ ಕಲ್ಗುಡಿ

ಆ. ಜನಾಂಗೀಯ ನೆಲೆಗಳ ಮೂಲಕ ಕಂನಾಡಿನ ವ್ಯಾಪ್ತಿ

ಕಂನಾಡಿನ ಭೌಗೋಳಿಕ ನೆಲೆಯ ವ್ಯಾಪ್ತಿಯನ್ನು ಗುರುತಿಸುವಲ್ಲಿ ಜನಾಂಗಗಳು ಪ್ರಮುಖ ಆಕರಗಳಾಗಿವೆ ಎಂಬುದನ್ನು ಈ ಮುಂಚಿನ ಅಧ್ಯಾಯದಲ್ಲಿ ಹೇಳಲಾಗಿದೆಯಷ್ಟೆ. ಜನಾಂಗವೆಂದರೆ ಅದು ಜಾತಿಧರ್ಮಗಳಿಂದ ಭಿನ್ನವಾದದ್ದು. ಆರಂಭದಲ್ಲಿ ಒಂದೆಡೆ ಇದ್ದು ಬೆಳೆದ ಸಮಾಜ ಎಂದರ್ಥ. ಮಾನವನ ಬೆಳವಣಿಗೆಯ ಒಟ್ಟು ಅವಧಿಯನ್ನು ಎರಡು ಕಾಲಘಟ್ಟಗಳಲ್ಲಿ ಗುರುತಿಸಬಹುದು. ಒಂದು; ಆಹಾರ ಸಂಚಯನದ ಕಾಲ. ಎರಡು; ಆಹಾರೋತ್ಪಾದನೆಯ ಕಾಲ. ಸಂಚಯನದ ಕಾಲದಲ್ಲಿ ಆಹಾರಕ್ಕಾಗಿ ಅಲೆದಾಡುವ ಸ್ಥಿತಿಯಿದ್ದು, ಹೊಟ್ಟೆಗಾಗಿ ಹೋರಾಟ ನಡೆಸುವುದು ಅನಿವಾರ್ಯವಾಗಿತ್ತು. ಮುಂದಿನ ಹಂತಗಳಲ್ಲಿ ಆಹಾರ ಉತ್ಪಾದನೆಯ ಬಗ್ಗೆ ತಿಳಿದುಕೊಂಡ ಮೇಲೆ ಒಂದು ಕಡೆ ನೆಲೆಯೂರಲು ಪ್ರಾರಂಬಿಸಿತು. ಇದನ್ನು ದನಗಾರಿಕೆ ವ್ಯವಸ್ಥೆಯೆಂದು ಶಂಬಾ ಕರೆಯುತ್ತಾರೆ. ದನಗಳೇ ಮುಖ್ಯ ಉತ್ಪಾದನ ಸಾಮಾಗ್ರಿಗಳಾಗಿದ್ದವು. ಮಳೆಯಿಂದ ನೀರಾವರಿ, ಒಕ್ಕಲುತನ ಮಾಡಿಕೊಳ್ಳುತ್ತಾ, ಒಕ್ಕಲಾಗಿರಲು ಸಾಧ್ಯವಾಯಿತು. ಕೃಷಿ ಜೀವಿಗಳು 'ಕುಡ'ದಿಂದ ಜನಿಸಿದರೆಂದು; 'ಕುಡವ'ರೆಂದು ಮುಂದೆ 'ಕುಳ'ರಾದರು. ಊರೂರಿಗೆ ಕುಲ-ಕುಳಗಳು ತಲೆಯತ್ತಿ ನಾಡು-ರಾಷ್ಟ್ರ ನಿರ್ಮಾಣಗೊಂಡವು.[೧] ಒಂದು ಜನಾಂಗವನ್ನು ಅವರ ಇತಿಹಾಸ ಅರಿಯಲು, ಆ ಜನಾಂಗದ ಮೌಖಿಕ-ಅಮೌಖಿಕ ಸಾಹಿತ್ಯ ಪರಂಪರೆ ಮೊದಲಾದವು ಪ್ರಮುಖ ಸಾಧನಗಳಾಗುತ್ತವೆ. ಇವುಗಳ ಅಧ್ಯಯನ ಮಾಡದೇ ಜನಾಂಗದ ಪೂರ್ಣ ಇತಿಹಾಸದ ಕಡೆ ಗಮನಕೊಡಲು ಸಾಧ್ಯವಾಗುವುದಿಲ್ಲ. ಇಂತಹ ಸಾಧನಗಳ ಬೆಳಕಿನಲ್ಲಿಯೇ ಶಂಬಾ, ಜನಾಂಗ ಕುರಿತ ಅಧ್ಯಯನವನ್ನು ನಡೆಸುತ್ತಾ ಕಂನಾಡಿನ ವ್ಯಾಪ್ತಿಯನ್ನು ಕುರಿತು ಶೋಧಿಸಲು ತೊಡಗಿದ್ದರು.

ಶಂಬಾ ಅವರು 'ದ್ರಾವಿಡ ಜನಾಂಗ' ಎಂಬ ಮಾತನ್ನು ಹಟ್ಟಿಕಾರ ಎಂಬ ಪರಿಕಲ್ಪನೆಯ ನೆಲೆಯಲ್ಲಿ ಗುರುತಿಸುತ್ತಾರೆ. ಭಾರತೀಯ ಮೂಲ ಜನಾಂಗ ಈ ಹಟ್ಟಿಕಾರ ಜನಾಂಗವೆಂದು ಅನೇಕ ಆಧಾರಗಳಿಂದ ತೋರಿಸಲು ಪ್ರಯತ್ನಿಸುತ್ತಾರೆ. 'ಹಟ್ಟಿಕಾರ' ಕಲ್ಪನೆ ನಮ್ಮ ಸಂಸ್ಕೃತಿಯನ್ನು ಸಮರ್ಥವಾಗಿ ನಮ್ಮೆದುರು ನಿಲ್ಲಿಸಲು ಸಹಾಯವಾಗುತ್ತದೆ. ವೇದಗಳಲ್ಲಿ ಬರುವ ' ಪತ್ತಿನಾಂ ಪತಿಃ' ಎಂಬ ವಾಕ್ಯವೂ ಮೂಲತಃ 'ಪಟ್ಟಿಯಿಂದ' ಬಂದಿದ್ದು, ಪಟ್ಟಿ>ಹಟ್ಟಿ, ಪಟ್ಟಿಕಾರರು>ಹಟ್ಟಿಕಾರರು ಆಗಿರಲು ಸಾಧ್ಯತೆಯಿದೆ. 'ಪಟ್ಟಿ' ಜನರನ್ನೇ ಮುಂದೆ ' ಹಟ್ಟಿ ' ಇಲ್ಲವೆ 'ಹಟಗಾರ' ರೆಂದು ಗುರುತಿಸಲಾಗುತ್ತಿತ್ತು. ಹಟ್ಟಿಕಾರರನ್ನು ದನಗಾರರು, ಧನಗಾರರೆಂದು ಹಾಲುಮತದವರೆಂದು ಕರೆಯುವ ರೂಢಿ ಇದೆ. ಹಾಲಿನ ವೃತ್ತಿಯನ್ನು ಮಾಡುವ ಧನಗರು - ಗವಳಿಗಳೆಂದು ಇದರರ್ಥ.[೨] 'ಪತ್ತಿ' ಜನರು ವೇದಕಾಲದ ನಂತರ 'ಹಟ್ಟಿ'

ಜನರಾದರು. ಈ 'ಹಟ್ಟಿಕಾರರ' - ಹಟಗಾರ ಮಧ್ಯದಿಂದಲೇ ಮರಹಟ್ಟಿಯರ ಒಂದು ಗುಂಪು ಮೇಲೆದ್ದಿತು. ಈ ಮರಹಟ್ಟಿಯರ ಭಾಷೆಯೇ 'ಮಹಾರಾಷ್ಟ್ರೀ' (ಪ್ರಾಕೃತ) ಆಯಿತು"[೩] ಆದ್ದರಿಂದ ಕರ್ನಾಟ-ಮರಾಠದ ಮೂಲಿಗರು ಹಟ್ಟಿಕಾರರೇ ಆಗಿದ್ದಾರೆ ಎನ್ನಬಹುದು.

ಬಂಗಾಳದ ಒಂದು ಭಾಗಕ್ಕೆ 'ಗೌಡ' ದೇಶವೆಂದು ಹೆಸರಿದೆ. ಇವರು ಬಹುತೇಕ ಪತ್ತಿಜನರ ಭಾಗವಾಗಿರಬೇಕು. ಕಾರಣ ಇಲ್ಲಿಯ ಗ್ರಾಮನಾಮಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡಾಗ ಈ ಭಾಗದ ಮೇಲೆ ಪರಿಣಾಮ ಬೀರಿದವರಲ್ಲಿ ಹಟ್ಟಿಕಾರರಾಗಿರುವುದು ಕಂಡು ಬರುತ್ತದೆ. ಮಿಥಿಲೆಯಲ್ಲಿ ಆಳಿದ ನಾನ್ಯದೇವ ಹಾಗೂ ಇವನ ವಂಶಜರು 'ನೇಪಾಳ'ದಲ್ಲಿ ಕೆಲಕಾಲ ಆಳಿರುವುದು ಹಾಗೂ'ಗೌಡ' ಶಬ್ದ 'ಗೌಳ' ಶಬ್ದದಿಂದ ಹುಟ್ಟಿದೆ ಎಂದು ಗೃಹಿತವಿಡಿದರೆ, ಈ ಗೌಡದೇಶದಲ್ಲಿ ತಮ್ಮ ಭಾಷೆ ಮತ್ತು ನಡವಳಕೆಗಳನ್ನು ಪ್ರಚಾರದಲ್ಲಿ ತಂದವರು ಹಟ್ಟಿಕಾರರೆಂದು ಹೇಳಬಹುದು. ಈ ಕಾರಣದಿಂದ ಕಂನಾಡದ ನೆಲೆ ಇಲ್ಲಿಯವರೆಗೆ ವಿಸ್ತರಿಸುತ್ತದೆ.[೪]

ಹಟ್ಟಿಕಾರರಲ್ಲಿ ಕುರವ, ತುರವ ಮತ್ತು ಕುಡುವ ಎಂಬ ಮೂರು ಬಗೆಯವರಿದ್ದಾರೆ. ಕುರುಂಬರಲ್ಲಿ ಕುಂತಲ, ಕಳವರ್, ಇಡೈಯರ್, ಮಲವರ್ ಇವರೆಲ್ಲರೂ ಪರ್ಯಾಯ ಹೆಸರುಗಳಿಂದ ಕರೆಯಲಾಗುತ್ತದೆ. ಅಂಡೆ (ಹಂಡೆ) 'ಜಾಡ' ಇವರೂ ಕೂಡ ಈ ಬಗೆಯಲ್ಲಿಯೇ ಬರುತ್ತಾರೆ. ಹಂಡೆ-ಜಾಡರು ನರ್ಮದಾ-ಗೋದಾವರಿ ತೀರದಲ್ಲಿ, ತುರುವರು ತೆಲುಗು ಬೀಡಿನಲ್ಲಿ, ಕುಡುವರು 'ಆರ್ಯ' ನಾಡಿನಲ್ಲಿ ಬೆಳೆದಿದ್ದಾರೆ. ಕರ್ಣಾಟ - ಮರ್ಹಾಟಗಳ ಮೂಲಿಗರ ಸಂಬಂಧವನ್ನು ಯದು-ತರ್ವಸುಗಳ ಜೊತೆಗೆ ಸಂಬಂಧವನ್ನು ಕಲ್ಪಿಸುತ್ತಾರೆ. ಇವರು ಗೌಳಿ ಪಶುಪಾಲಕರಾಗಿದ್ದಿರಬೇಕು.[೫] ಯದು-ತರ್ವಸುಗಳಂತೆ ರಿಷ್ಟಿಕ-ಭೋಜಕ ಅವಳಿ ಹೆಸರುಗಳು ಅಶೋಕನ ಶಾಸನಗಳಲ್ಲಿ ದೊರೆಯುತ್ತವೆ. ಭೋಜಕರು 'ಮರ್ಹಾಡ'ವವರೆಂದು ನಿಶ್ಚಿತವಿದ್ದು; ರಾಷ್ಟ್ರಕೂಟರ ಪೂರ್ವಿಕರು ರಿಷ್ಟಿಕರು ಇರಬೇಕು ಎಂಬ ಅಭಿಪ್ರಾಯವನ್ನು ಒಪ್ಪಿದಾಗ, ರಾಷ್ಟ್ರಕೂಟರು ಕನ್ನಡಿಗರು ಅವರ ಪೂರ್ವಜರು ಕನ್ನಡ ದೇಶದಲ್ಲಿರದೆ ಮರ್ಹಾಟದಲ್ಲಿ ಹೇಗೆ ಎನ್ನುತ್ತಾ ಅದೇ ಮೊದಲು ಕನ್ನಡ ಪ್ರದೇಶವಾಗಿದೆ ಎನ್ನುತ್ತಾರೆ. ಮಹಾರಾಷ್ಟ್ರದಲ್ಲಿರುವ 'ಖಾನದೇಶ' 'ಕನ್ನಜನ'ರದೇಶ. ಇಲ್ಲಿ ಕೃಷ್ಣನಿಗೆ ಸಂಬಂಧ ಪಡುವುದಿಲ್ಲ. ಇಲ್ಲಿಯ ಗ್ರಾಮನಾಮಗಳು, ಔರಂಗಬಾದ್‌ನ 'ಕನ್ನಡ' ಎಂಬ ಊರು ಮೊದಲಾದ ಆಧಾರಗಳಿಂದ ಪುರಾತನ ಆರ್ಯೇತರ ಕನ್ನಡ ಭಾಷೆಯ ಜನ ವಸತಿಗಳಾಗಿದ್ದವು ಎಂಬುದನ್ನು ಸೂಚಿಸುತ್ತದೆ. ಇದಕ್ಕೆ ಅಲ್ಲಿಯ ಗೆಜೆಟಿಯರ ಕೂಡ ಸಾಕ್ಷ್ಯ ನೀಡುತ್ತದೆ. ಕಾನಡೀ ಗವಳಿಗಳಿದ್ದರೆಂದು ಹೇಳಲಾಗಿದೆ. ಈ ಎಲ್ಲಾ ಕಾರಣಗಳ ಜೊತೆಗೆ ಇನ್ನೊಂದು ಅಂಶವನ್ನು

ಶಂಬಾ ಗುರುತಿಸುತ್ತಾರೆ. "ನಾಶಿಕ ಜಿಲ್ಲೆಯಲ್ಲಿ ಹೇರಳವಾಗಿ ದೊರೆಯುವ ವೀರಗಲ್ಲುಗಳು ಇಡೀ ಹಿಂದೂಸ್ಥಾನದಲ್ಲಿ ಕನ್ನಡಿಗರ ವೈಶಿಷ್ಟವಾಗಿದೆಯೆಂದು, ಈ ರೀತಿಯ ಸ್ಮಾರಕಗಳು ಅಲ್ಲಿ ಕಾಣಬರುವುದರಿಂದ ಆ ಪ್ರದೇಶ ಒಂದು ಕಾಲಕ್ಕೆ ಕಂನಾಡುವಾಗಿರಬೇಕು" ಎನ್ನುತ್ತಾರೆ.

ಕನ್ನಡ ಸಂಸ್ಕೃತಿಯ ಮೂಲಿಗರನ್ನು ಕುರಿತು ಅರ್ಥಮಾಡಿಕೊಳ್ಳಲು ಎರಡು ರೀತಿ ಶಕ್ಯವಿದೆ. ಕಂನಾಡ ನುಡಿಯೊಳಗೆ ದೊರೆಯುವ ಅಂತರ್ಗತ ಪ್ರಮಾಣಗಳ ಬೆಳಕಿನಲ್ಲಿ ಮತ್ತು ಸಂಸ್ಕೃತ-ಪ್ರಾಕೃತ ಭಾಷೆಗಳಲ್ಲಿ (ಸಾಹಿತ್ಯದಲ್ಲಿ) ಕನ್ನಡದ ಬಗ್ಗೆ ದೊರೆಯುವ ಪೋಷಕ ಪ್ರಮಾಣಗಳ ಬೆಂಬಲದಿಂದ, ನಮ್ಮ ಸಂಸ್ಕೃತಿಯ ಆರಂಭಿಗರನ್ನು ಅನ್ವೇಷಿಸಲು ಶಂಬಾ ತೊಡಗುತ್ತಾರೆ. ಮರವರು-ಕಳವರು ಎಂಬ ಜನಾಂಗಗಳನ್ನು ಭಾಷಿಕ ನೆಲೆಯಲ್ಲಿ ಶೋಧಿಸುತ್ತಾ, 'ರಸ' ಸಂಪ್ರದಾಯದವರಾಗಿದ್ದು ಮುಂದಿನ ಹಂತದಲ್ಲಿ ಆರ್ಯ ಸಂಪರ್ಕ ಒದಗಿದಂತೆ. ಗೋರಸ; ಕ್ಷೀರ ಆದುದು ಕಂಡು ಬರುತ್ತದೆ. ಕುರುಬರಿಗೆ ಮಹಾರಾಷ್ಟ್ರದಲ್ಲಿ ' ಧನಗಾರ' 'ಹಟಗಾರ' ರೆಂದು ಕರೆಯಲಾಗುತ್ತದೆ. 'ಕುಱುಂಬ' ಕಂದಮಿಳ ಶಬ್ದ' 'ಕುಱುಂಬ' ಈಗ 'ಕುರುಬ' ಆಗಿದೆ. 'ಕುಱು' ಗುಡ್ಡ-ಮರಡಿ ಎತ್ತರವಾದ ಪ್ರದೇಶದ ಅರ್ಥಹೊಂದಿದ್ದು ಈ ಕಾರಣದಿಂದಾಗಿಯೇ ಮಲೆಯರು, ಮಲವರು, ಕುಱುಂಬರೂ ಮೂಲದಲ್ಲಿ ಒಂದೇ. ಜನಾಂಗದ ದೃಷ್ಟಿಯಿಂದ ದ್ರಾವಿಡರು.[೬] ಮರ್‍ಹಾಟದಲ್ಲಿ ಇಂದಿಗೂ ಧನಗಾರರು ಉಂಟು. ವತನದಾರ, ಪಾಟೀಲ, ದೇಶಮುಖ ಮುಂತಾದ ಹೆಸರುಗಳಿಂದ ಗುರುತಿಸಲ್ಪಡುತ್ತಾರೆ. ಇವರು ಮೈಲಾರನ ಭಕ್ತರು. ಮೈಲಾರ (ಮಲ್ಹಾರಿ) ಈಗ 'ಖಂಡೋಬ'ನಾಗಿದ್ದರೆ; ನಮ್ಮಲ್ಲಿಯ ಮೈಲಾರ ದೇವನಿಗೆ ಇಂದೂರು, ಉಜ್ಜಯಿನಿವರೆಗೂ ಭಕ್ತಗಣವುಂಟು. ಈ ಎಲ್ಲ ಕಾರಣಗಳ ಆಧಾರದ ಮೇಲೆ, ಕಂನಾಡರ ಮೂಲವಸತಿ ಈ ಭಾಗಗಳಲ್ಲಿ ಇದ್ದಿರಬೇಕು ಎಂಬ ನಿರ್ಧಾರಕ್ಕೆ ಬರುತ್ತಾ, ಆರ್ಯೀಕರಣ ಪ್ರಭಾವ ಹೆಚ್ಚಿದಂತೆ ಈ ಸ್ಥಳಗಳಿಂದ ಕನ್ನಡ ಕಣ್ಮರೆಯಾಗುತ್ತಾ ಬಂದಿದೆ ಎಂದು ಶಂಬಾ ಅಭಿಪ್ರಾಯಪಡುತ್ತಾರೆ.

ಇಲ್ಲಿಯವರೆಗಿನ ಜನಾಂಗಗಳನ್ನೂ ಕುರಿತಂತೆ, ಶಂಬಾ ಅವರು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವುದಿಲ್ಲ. ಅವುಗಳನ್ನು ಶೋಧನೆಯ ಧಾಟಿಯಲ್ಲಿ ಹೇಳಲು ಪ್ರಯತ್ನಿಸುತ್ತಾರೆ. ಆದರೂ ಅವರ ಕೆಲವು ವಿಚಾರಗಳು ಧೃಡಪಟ್ಟಿರುವುದು ಕಂಡುಕೊಳ್ಳಬಹುದು. ಜನಾಂಗಗಳನ್ನು ಕುರಿತಂತೆ, ಆಧುನಿಕ ರೀತಿಯ ಅಧ್ಯಯನ ನಡೆದಂತೆ, ಇವುಗಳ ಬಗೆಗೆ ಖಚಿತ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತದೆ. ಬಿಡಿ-ಬಿಡಿಯಾದ ಆಶಯಗಳ ಮೂಲಕ ಇಡಿಯಾದ ಆಶಯಗಳನ್ನು ಗ್ರಹಿಸಲು ಪ್ರಯತ್ನಿಸುತ್ತಾರೆ. ಮೂಲ ಅಥವಾ ಶುದ್ಧ ಜನಾಂಗವೆಂಬುದು ಈಗ ಎಲ್ಲಿಯೂ ಕಂಡುಬರುವುದಿಲ್ಲ. ಹಟ್ಟಿಕಾರರಲ್ಲಿಯೂ

ಕೂಡ ಆರ್ಯ ಸಂಪರ್ಕ ಹೆಚ್ಚಿದಂತೆ ಈ ಮಿಶ್ರಣ ಪ್ರಕ್ರಿಯೆ ಆರಂಭಗೊಂಡಿರಬೇಕು. ಈ ಮಿಶ್ರಣಕ್ಕೆ ಮೂರು ಕಾರಣಗಳನ್ನು ಶಂಬಾ ಅವರು ಗುರುತಿಸುತ್ತಾರೆ. ವಲಸೆ, ಯುದ್ಧ, ವ್ಯಾಪಾರ-ವ್ಯವಹಾರಗಳಿಂದ ವಂಶ ಮಿಶ್ರಣ ನಡೆದಿರಬಹುದು ಎಂದು ಕಾರಣಗಳನ್ನು ನೀಡುತ್ತಾರೆ.

ಆಕರ ಗ್ರಂಥಗಳು

೧. *ಸಂಸ್ಕೃತಿ ಮತ್ತು ಶಂಬಾ,* 'ಕಂನಾಡು ಪರಿಕಲ್ಪನೆ'

೨. *ಮರಾಠೀ ಸಂಸ್ಕೃತಿ,* - ಪುಟ ೫೯

೩. ಅದೇ, ಪು.೯೮

೪. ಅದೇ, ಪು.೧೦೬

೫. ಅದೇ, ಪು.೭೯

೬. *ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆ,* ಭಾಗ ೧, ಪುಟ ೬೦

೩. ಭಾಷಿಕ ಅಂತಃಪ್ರಮಾಣದ ನೆಲೆಗಳ ಮೂಲಕ ಕಂನಾಡಿನ ವ್ಯಾಪ್ತಿ.

ಕಂನಡ ಸಂಸ್ಕೃತಿಯನ್ನು ಕುರಿತು ವಿವೇಚಿಸುವಲ್ಲಿ, ಮೇಲೆ ಹೇಳಿರುವ ಭೌಗೋಳಿಕ ನೆಲೆಗಳು, ಜನಾಂಗಗಳ ಕುರಿತ ಅಧ್ಯಯನ ಮುಂತಾದ ಸಾಧನಗಳು ನೆರವಾಗುವಂತೆ ಭಾಷಿಕ ಪ್ರಮಾಣದ ನೆಲೆಗಳು ಕೂಡ ಪ್ರಮುಖ ಆಕರಗಳಾಗುತ್ತವೆ. ಭಾಷೆ ಮತ್ತು ಸಂಸ್ಕೃತಿಗಳೆರಡು ಪರಸ್ಪರ ಸಂಬಂಧವನ್ನು ಹೊಂದಿವೆ. ಸಂಸ್ಕೃತಿಯೊಡನೆ ಭಾಷೆ ಬಂದೇ ಬರುತ್ತದೆ ಹಾಗೂ ಬರಲೇಬೇಕು. ಒಂದು ಭಾಷೆಯನ್ನು ಆಡುವ ಜನಾಂಗದ ಸಂಸ್ಕೃತಿಯನ್ನು ಆ ಭಾಷೆಯ ವಿವಿಧ ನೆಲೆಗಳನ್ನು ತಿಳಿದುಕೊಳ್ಳುವುದರ ಮೂಲಕ ಸಂಸ್ಕೃತಿ ರಚನೆಗೆ ವಿರೋಧವೇನಿಲ್ಲ. ಶಂಬಾ ಅವರ ಅಧ್ಯಯನದ ರೀತಿ ಕೂಡ ಭಾಷೆಯನ್ನೇ ಅವಲಂಬಿಸಿರುವುದನ್ನು ಕಾಣಬಹುದು. ಭಾಷಿಕ ಸಂಕೇತಗಳಿಗೆ ೧) ಆಶಯ ೨)ಆಕೃತಿ ಎಂಬ ಎರಡು ಪಾತಳಿಗಳಿರುತ್ತವೆ. ಆಕೃತಿಯು ಸ್ಥಿರವಾಗಿದ್ದು ಅದರಿಂದ ಸಂಕೇತಗೊಂಡಿರುವ ಆಶಯ ಸಾಂಸ್ಕೃತಿಕ ಸಂದರ್ಭದೊಡನೆ ಬದಲಾಗಬಹುದು. ಬೇರೆ-ಬೇರೆ ಸಂದರ್ಭದಲ್ಲಿ ಒಂದೇ ಆಕೃತಿಯ ಆಶಯ ಭಿನ್ನವಾದ ಆಶಯಗಳನ್ನು ಹೊಂದುವ ಸಾಧ್ಯತೆಯಿದೆ. ಇಂತಹ ಸಾಧ್ಯತೆ ಮನಸ್ಸಿಗೆ ಬಂದಂತೆ ನಡೆಯುವುದಿಲ್ಲ. ಇದು ಆ ಜನಾಂಗದ ಸಂಸ್ಕೃತಿಯೊಡನೆ ಸಂಬಂಧ ಪಡೆದಿರುತ್ತದೆ ಹಾಗೂ ಪ್ರೇರಿತವಾಗಿರುತ್ತದೆ. ಈ ರೀತಿಯ ಆಶಯಗಳಿಂದ ಜನಾಂಗದ, ಜನ ಜೀವನದ ಬದಲಾವಣೆಗಳನ್ನು ಕುರಿತು ಆಲೋಚಿಸಲು ಸಾಧ್ಯವಾಗುತ್ತದೆ.[೧] ಇಂತಹ ರೀತಿಯ ಭಾಷಿಕ ಪ್ರಮಾಣದ ಅಧ್ಯಯನವನ್ನು ಶಂಬಾ ಅವರು ಕೈಗೊಂಡು, ಆ ಮೂಲಕ ಕಂನಾಡ ಸಂಸ್ಕೃತಿಯ ನೆಲೆಗಳನ್ನು ಗುರುತಿಸುತ್ತಾರೆ. ಇದರ ಜೊತೆಗೆ, ಆಚರಣೆ, ಐತಿಹ್ಯ, ಸ್ಥಳನಾಮಗಳನ್ನು ಬಳಸಿಕೊಂಡು ಕಂನಾಡ ಸಂಸ್ಕೃತಿ ಹಾಗೂ ಭಾರತೀಯ ಸಂಸ್ಕೃತಿಯನ್ನು ಕಂಡುಕೊಳ್ಳುವ ಇವರ ಪ್ರಯತ್ನ ಕನ್ನಡದ ಮಟ್ಟಿಗೆ ಮೊದಲನೆಯದು ಎನ್ನಬಹುದು.

'ಪತ್ತಿ' ಜನರು ವೇದಪೂರ್ವ ಜನಾಂಗವೆಂದು, ಯದು-ತರ್ವಸುಗಳೊಂದಿಗೆ ಸಂಬಂಧ ಹೊಂದಿದ್ದು ಆರ್ಯೇತರರಾಗಿದ್ದರೆ. ಅವರಿಗೆ ಭಿನ್ನವಾದ (ಸಂಸ್ಕೃತಕ್ಕಿಂತ) ಭಾಷೆಯೊಂದು ಇರಬೇಕಾಗುತ್ತದೆ. ವೇದಗಳಲ್ಲಿ ಸಂಸ್ಕೃತ, ಕೋಲ, ಮುಂಡಾ ವರ್ಗದ ಭಾಷೆಯ ಶಬ್ದಗಳಿಗಿಂತ ಬೇರೆ ಪ್ರಕಾರದ ಶಬ್ದಗಳಿದ್ದು ಅವುಗಳು ತಥಾಕಥಿತ ದ್ರಾವಿಡ ಶಬ್ದಗಳಾಗಿವೆ. ಅಂದರೆ 'ಕಂದಮಿಳ' ಶಬ್ದಗಳಾಗಿವೆ ಎನ್ನುತ್ತಾರೆ. ವೇದಪೂರ್ವದ ಅನೇಕ ಶಬ್ದಗಳು ವೇದಗಳಲ್ಲಿ ಸೇರಿ ಆರ್ಯೀಕರಣ ಪಡೆದಿವೆ. ಎರಡು ಭಾಷೆಗಳ ಸಂಬಂಧ ಆ ಒಂದರಮೇಲೊಂದು ಪ್ರಭಾವ ಬೀರಿವೆ. ಶಿವ-ಚಂದ್ರ ದೇವತೆಗಳು ಆರ್ಯೀಕರಣ ಹೊಂದಿವೆ. ಇವು ಮೂಲತಃ ಪತ್ತಿ ಜನರ ಭಾಷೆಯಲ್ಲಿ ಪ್ರಚಲಿತದಲ್ಲಿದ್ದವು. ಯದು-ತರ್ವಸುಗಳ ಮನೆತನ 'ಚಂದ್ರ'

ವಂಶದ್ದೆಂಬ ಪ್ರತೀತಿಯಿದೆ. ಹುಣ್ಣಿಮೆಯ ಪೂಜೆ, ದೇವಿಯ ಉತ್ಸವ ಇಂದಿಗೂ ಕರ್ನಾಟಕ-ಮಹಾರಾಷ್ಟ್ರದಲ್ಲಿ ಆಚರಿಸಲಾಗುತ್ತದೆ. ಪತ್ತಿ ಜನರ ಆರ್ಯೀಕರಣಕ್ಕೆ ಒಳಗಾಗುತ್ತಾ ಹೋದಂತೆ ಅವರ ಮೂಲ ಭಾಷೆಯ ಸ್ವರೂಪದಲ್ಲಿ ಬದಲಾವಣೆಯಾಗಿದೆ.[೨] ಮೂಲದ ಪತ್ತಿ ಜನರ 'ವರ್ಣಮಾಲೆ'ಯನ್ನು ತಮಿಳು ವರ್ಣಮಾಲೆಯಿಂದ ತಿಳಿಯಬಹುದಾಗಿದ್ದು. ಮುಂದೆ ಸಂಸ್ಕೃತದ ವರ್ಣಮಾಲೆಯ ಎಲ್ಲ ಉಚ್ಚಾರಗಳು ಕ್ರಮೇಣ ರೂಢವಾಗಿವೆ. ಈ ಬದಲಾವಣೆ ಏಕಕಾಲಕ್ಕೆ ನಡೆಯುವುದಲ್ಲ; ಸಾವಿರಾರು ವರ್ಷಗಳ ಅಂತರದಲ್ಲಿ ನಡೆದಿರಬಹುದಾದ ಪ್ರಕ್ರಿಯೆ ಇದಕ್ಕೆ ಕಾರಣವೆಂದರೆ: ಒಂದು ಭಾಷೆಯು ಸಾಮಾಜಿಕವಾಗಿ, ಧಾರ್ಮಿಕವಾಗಿ ಮೇಲ್ಮಟ್ಟದಿದ್ದಾಗ ಅದನ್ನು ಅನ್ಯ ಭಾಷೆಯವರು ಆಸ್ಥೆಯಿಂದ ಕಲಿಯಲು ಮುಂದಾಗುತ್ತಾರೆ. ಪ್ರಾರಂಭದ ಕಲಿಕೆಯಲ್ಲಿ ಉಚ್ಚಾರ ಸ್ಪಷ್ಟವಾಗದಿದ್ದರೂ, ಅದರ ಅನುಕರಣ ಸಾಧ್ಯವಾಗುತ್ತದೆ. ಅಗ್ಗಿ, ಕಬ್ಬ, ದಿಟ್ಟೆ, ಗಬ್ಬ ಮೊದಲಾದ ತದ್ಭವಗಳು ಹಿಂದೆ ಬಿದ್ದು ಅಗ್ನಿ, ಕಾರ್ಯ, ದೃಷ್ಟಿ, ಗರ್ಭ ಎಂಬ ಶಬ್ದದ ಶುದ್ಧ ರೂಪಗಳನ್ನೇ ಕನ್ನಡ ಉಳಿಸಿಕೊಂಡಿರುವುದನ್ನು ಕಾಣಬಹುದು. ಸಾಮೂಹಿಕ ಅಭಿಮಾನಕ್ಕಿಂತ, ವೈಯಕ್ತಿಕ ಪ್ರತಿಷ್ಠೆ ಹೆಚ್ಚಾದ ಸಂದರ್ಭದಲ್ಲಿ ಅಲ್ಲಿ ಪರಕೀಯ ಭಾಷೆಯ ಅಭ್ಯಾಸ ಜೋರಾಗಿ ನಡೆಯುತ್ತದೆ, ಎಂಬ 'ಲ್ಯೂಸ್ಲರ್'ನ ಮಾತನ್ನು ಶಂಬಾ ಅನುಮೋದಿಸುತ್ತಾ, ಕನ್ನಡಿಗರು ಈ ವಿಷಯದಲ್ಲಿ ಪ್ರಸಿದ್ಧರು ಎಂಬ ವಿಚಾರಕ್ಕೆ ಬರುತ್ತಾರೆ. ಮರಾಠಿಗಳು ಇನ್ನೂ ಸಾಮೂಹಿಕ ಸ್ವ-ಅಭಿಮಾನಕ್ಕೆ ಒತ್ತುಕೊಟ್ಟಿರುವುದನ್ನು ಗುರುತಿಸುತ್ತಾ ಕನ್ನಡಿಗರು ಈ ಬಗೆಯ ನಿಲುವನ್ನು ತಳೆಯುವುದು ಭಾಷೆ ಮತ್ತು ಸಂಸ್ಕೃತಿ ದೃಷ್ಟಿಯಿಂದ ಅವಶ್ಯವೆನ್ನುತ್ತಾರೆ.

ಊರು-ಪಟ್ಟಿ, ಪಾಡಿ-ಚಾಡಿ, ಹಟ್ಟಿ-ಹಾಟ, ಬಾಡ-ಬೀಡು ಎಂಬ ಸ್ಥಳನಾಮಗಳ ಭಾಷಿಕ ಪ್ರಮಾಣಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಅವುಗಳ ಮೂಲಕ ಕಂನಾಡ ಸಂಸ್ಕೃತಿಯ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಶಂಬಾ ಮಾಡುತ್ತಾರೆ. ಈ ಶಬ್ದಗಳು (ಹಟ್ಟಿಕಾರ) ಪತ್ತಿ ಜನರವು. ಇಂತಹ ಶಬ್ದಗಳು ಉತ್ತರದ ಕಡೆ ಗ್ರಾಮನಾಮಗಳ ಉತ್ತರಪದವಾಗಿ ಸೇರಿಕೊಂಡಿರುತ್ತವೆ. ಅದೇ ರೀತಿ ಧನ-ದನ, ಖೊಬರೇ-ಕೊಬ್ಬರಿ, ಖಾಟೀಕ-ಕಟುಕ, ಧಾಳಿ-ದಾಳಿ, ಧನಗರ-ದನಗರ ಇಂತಹ ಸ್ವೀಕರಣ ಪ್ರಮಾಣಗಳು ಭಾಷೆಯಿಂದ ಭಾಷೆಗೆ ಆದ ಮುಖ್ಯ ಪರಿವರ್ತನೆಗಳನ್ನು ಹೇಳುತ್ತವೆ. 'ಜಾವಳಿ-ಜವಳಿ' ಆಗುವಾಗ ಈ ಶಬ್ದ ಪ್ರತಿಮೆ ವ್ಯಾಪಾರದತ್ತ ಸಾಗಿರುವುದನ್ನು ಸೂಚಿಸುತ್ತಾ, ಇದರಿಂದ ಉಣ್ಣೆ ಬಟ್ಟೆ ತಯಾರಿಸಿ ಅದನ್ನು ಮಾರಲು ಹೊತ್ತು ಸಾಗುವ ಉದ್ಯೋಗಕ್ಕೆ ಇಳಿದಿದ್ದುದನ್ನು ಈ ಶಬ್ದ ಪ್ರತಿಮೆಯಿಂದ ಕಾಣಬಹುದು. ಇಂತಹ ಭಾಷಿಕ ಪ್ರಮಾಣಗಳನ್ನು ಪರಿಶೀಲಿಸುತ್ತಾ ಹಟ್ಟಿಕಾರರ ಕಡೆಗೆ ಸಾಗಬಹುದು.[೩]

'ಕವಿರಾಜಮಾರ್ಗ'ದಲ್ಲಿ ಹೇಳಿರುವಂತೆ ಗೋದಾವರಿವರೆಗೆ ಕಂನಾಡ ಪ್ರದೇಶವಿದ್ದರೆ, ಮನುಸ್ಮೃತಿಯಲ್ಲಿ ವಿಂಧ್ಯದವರೆಗೆ ಆರ್ಯನಾಡು ಎಂದಿರುವುದನ್ನು ನಂಬಿದರೆ, ಕಾವೇರಿಯಿಂದ ಗೋದಾವರಿವರೆಗೆ ಕಂದಮಿಳರ ಯಾವುದಾದರೊಂದು ಭಾಷೆ ಪ್ರಚಲಿತದಲ್ಲಿ ಇದ್ದಿರಲೇಬೇಕು. ಅದು ಊರು, ಪಟ್ಟಿ, ಪಾಡಿ, ಹಟ್ಟಿ, ಬಾಡ-ಬೀಡು ಮೊದಲಾದ ಕಂದಮಿಳ ಶಬ್ದಗಳಿಂದ ಸಿದ್ಧವಾಗುತ್ತಿರುವುದರಿಂದ, ಈ ಭಾಗದಲ್ಲಿ ಕಂದಮಿಳ ಭಾಷೆಯ ಪ್ರಕಾರವೇ ಇದ್ದಿತೆಂದು ಊಹಿಸುತ್ತಾರೆ. ತ್ರೈರಾಶಿಕ, ಗಣಿತ ಪದ್ಧತಿಯಿಂದ, ಪ್ರಶ್ನೆಗಳನ್ನು ತಾವೇ ಹಾಕಿಕೊಂಡು ಅದಕ್ಕೆ ಉತ್ತರಗಳನ್ನು ನೀಡುತ್ತಾ ಹೋಗುತ್ತಾರೆ.[೪] ಗ್ರಾಮ, ಊರು, ಪುರಾ ಎಂಬಿವು ಅರ್ವಾಚೀನ ಮಾನವನು 'ನರ'ನ ಹಂತದಲ್ಲಿದ್ದಾಗ ಆಹಾರಕ್ಕಾಗಿ ಅಲೆಮಾರಿಯಾಗಿದ್ದು, ಮುಂದೆ ಒಂದು ಕಡೆ ಸೇರುವ ಜಾಗವನ್ನು, ವಸತಿ ಸೂಚಕ ಸ್ಥಳವನ್ನು 'ಹಟ್ಟಿ' ಎಂದು ಊಹಿಸಬಹುದು. ಈ ಹಟ್ಟಿ ಶಬ್ದವು ದನಕಾರಿಕೆಯನ್ನು ಮುಖ್ಯವಾಗಿ ಬಾಳಿನ ದ್ಯೋತಕವಾಗಿ, ಸ್ವೀಕರಿಸಿದಂತೆ ಕಾಣುತ್ತದೆ. ಇಂತಹ ಹಟ್ಟಿಗಳೇ ಕಂನಾಡ ಆರಂಭದ 'ವಸತಿ'ಗಳೆಂದು ಹೇಳುತ್ತಾರೆ. 'ಹಟ್ಟಿ' ಮೂಲರೂಪ 'ಪಟ್ಟಿ'ಯೆಂದು ತಮಿಳಿನಲ್ಲಿ ಇದಕ್ಕೆ ಮನೆ, ಹಳ್ಳಿ ಎಂಬ ಅರ್ಥವಿದ್ದು, ಈ ನಾಡವರ ತೀರ ಆರಂಭದ ದನಗಾರಿಕೆಯ ಮಟ್ಟದ 'ಬಿಡಾರ'ವೆಂದು ಶಂಬಾ ತರ್ಕಿಸುತ್ತಾರೆ. ಪಂಪಭಾರತದ "ಆಯ್ದು ಬಾಡಮಂ ಆವರ್ಗೀವುದು" ಎಂಬ ಉಲ್ಲೇಖಗಳನ್ನು ಸೂಚಿಸುತ್ತಾ 'ಬಾಡ' ಎಂಬುದು 'ಪಟ್ಟಿ'ಯ ಬಳಗಕ್ಕೆ ಸೇರಿದ ಶಬ್ದವಾಗಿದೆ. ಈ ನಾಡಿನ ಮೊದಲಿಗರು 'ಪಟ್ಟಿ'ಗಳು ಅವರೇ 'ಹಟ್ಟಿಕಾರರು'. ಹಟ್ಟಿಕಾರರು, ದನಗಾರರೂ, ಹಟಗಾರರೂ, ಜಾಡರೂ ಪ್ರಾಚೀನ ಕಾಲದಲ್ಲಿ ಒಂದೇ ಆಗಿದ್ದರು. ಗೌಡ-ಪಾಟೀಲರು ಮೂಲತ: ಒಂದೇ ಎಂದು ಶಂಬಾ ಹೇಳುತ್ತಾರೆ.[೫]

ಮೇಲೆ ಹೇಳಿದ 'ಪಾಡಿ' ಶಬ್ದದ 'ಪ' ಕಾರ ಕೆಲವಡೆ ಪ>ವ, ಪ>ವ>ಬ ಹೀಗೆ ಬದಲಾದುದು ಉಂಟು. ನಮ್ಮ ಶಾಸನಗಳಲ್ಲಿ ಕಾಣುವ 'ಗಂಗವಾಡಿ' ಎಂಬಲ್ಲಿಯ 'ವಾಡಿ' ತಮಿಳು ಶಾಸನಗಳಲ್ಲಿ 'ಪಾಡಿ'ಯಾಗಿದೆ. ಇದರಲ್ಲಿ ಯಾವುದು ಮೊದಲು, ಯಾವುದು ಅನಂತರ ಎಂದು ಆಲೋಚಿಸುತ್ತಾ 'ವಾಡಿ' ಶಬ್ದ 'ಪಾಡಿ' ಶಬ್ದಕ್ಕಿಂತ ಪ್ರಾಚೀನವಲ್ಲ ಎನ್ನುತ್ತಾರೆ. 'ಪಟ್ಟಿ'-'ಪಾಡಿ' ಇವುಗಳೊಳಗಿನ ಸ್ಥಿತ್ಯಂತರಗಳು, ಅವುಗಳ ಅರ್ಥದೊಳಗಿನ ಸ್ಥಿತ್ಯಂತರಗಳ ಬಗ್ಗೆ ಇನ್ನೂ ಅಭ್ಯಾಸ ನಡೆಯಬೇಕಿದೆ. 'ವಾಡಿ' ಶಬ್ದದ ಮೂಲಾರ್ಥ "ದನಗಳನ್ನು ಕಟ್ಟಿದ ಎಡೆ" ಎಂದಿದ್ದು, ಮರಾಠಿಯಲ್ಲಿ 'ಗೌಳವಾಡ' ಎಂಬ ಮಾತು ವಾಡಾ-ವಾಡೆ ಪದಕ್ಕೆ 'ಮಹಾಮನೆ' 'ಅರಮನೆ'ಎಂಬ ಛಾಯಾರ್ಥವನ್ನು ಹೊಂದಿವೆ. ಒಂದು ಕಾಲಕ್ಕೆ ದನಕರುಗಳೇ (ಗೋವು) ಸಂಪತ್ತು ಎನಿಸಿದ್ದು ಅವುಗಳನ್ನು ಉಳ್ಳವನು ಗೋಪಾಲ-ಭೂಪಾಲನಾಗ ತೊಡಗಿದಾಗ ಅವರುಗಳ ಮನೆ 'ಮಹಾಮನೆ' (ವಾಡೆ) 'ಅರಮನೆ'ಯಾಗಿರುವುದರಲ್ಲಿ

ಸೋಜಿಗವೇಕೆ? 'ಪಾಡಿ>ವಾಡಿ' ಸ್ಥಿತ್ಯಂತರದಲ್ಲಿ ಮಾನವನ ಜೀವನ ವಿಕಾಸ ಕ್ರಮವನ್ನು ತಿಳಿಯಬಹುದಾಗಿದೆ. ಈ ಕಾರಣದಿಂದ ಪಾಡಿ>ವಾಡಿ ಎಂಬುದು ಕಂದಮಿಳ ಶಬ್ದವಾಗಿದ್ದು, ಒಂದು ಕಾಲಕ್ಕೆ ಉತ್ತರದಲ್ಲಿ ಕಂದಮಿಳ ಭಾಷಿಕರ ವಸತಿ ಇದ್ದವೆಂದು ತಿಳಿಯಬಹುದು. ಪಾಡಿ>ವಾಡಿ ಮೂಲಕ ಭಾರತೀಯ ಮೂಲಿಗರಾದ ಜನದ ಪುರಾತನ ಸಂಸ್ಕೃತಿಯ ಜೀವನಾಡಿಯನ್ನು, ಈ ಜನ ಸಂಸ್ಕೃತಿ ಎಷ್ಟು ಪ್ರಾಚೀನ ಎಂಬುದನ್ನು, ಈ ಜನವು ಹಂತ ಹಂತವಾಗಿ ದನಗಾರಿಕೆಯವರೆಗೆ ಬಂದುದನ್ನು ಸ್ಮರಿಸಿಕೊಳ್ಳಬಹುದು.[೬]

ಸಂಕೇತಗಳಿಗೆ ಮೊದಲು ಅನೇಕಾರ್ಥಗಳು ಪ್ರಾಪ್ತವಾಗಿರದೇ, ಭಾಷೆಯಲ್ಲಿ ಮಾತುಗಳಿಗೆ, ಶಬ್ದಗಳಿಗೆ ಅರ್ಥ ದೊರೆಯುವುದು ಜೀವನದ ಸಂದರ್ಭದ ಪರಿಸರದಲ್ಲಿ. ಕಾಲ ಪರಿಸ್ಥಿತಿಗನುಗುಣವಾಗಿ, ಎಂಬುದು ನಿಜವಿದ್ದರೆ, 'ಪಾಡಿ' ಯಾವ ರೀತಿ ಅರ್ಥ ಪಡೆದುಕೊಂಡಿದೆ ಎಂಬುದನ್ನು ಊಹಿಸಲು ಅಪರಾಧವೇನಲ್ಲ, ಎಂದು ಅನುಮಾನಿತ ಸತ್ಯದ ನೆಲೆಯಲ್ಲಿ ಸಂಶೋಧನೆಗೆ ತೊಡುಗುತ್ತಾರೆ. "ಪಾಡೆಸಾಳೇ ವಸತಿ" ಎಂಬುದು ಮಹಾರಾಷ್ಟ್ರದಲ್ಲಿ, ದೇವಸ್ಥಾನಗಳಲ್ಲಿ ತಂಗುವ ಮನೆಗಳು, ವಿಶ್ರಮಿಸುವ ಸ್ಥಾನಗಳು. ಕನ್ನಡದಲ್ಲಿ 'ಪಡ-ಸಾಲೆ' ಇದ್ದರೂ, ಇದು ಖಾಸಗಿ ಸ್ಥಳ, ಸಾರ್ವಜನಿಕ ಸ್ಥಳವಾಗಿರದೇ ಮನೆಯ ಜನ ವಿಶ್ರಮಿಸುವ ಜಾಗ ಎಂಬರ್ಥದಲ್ಲಿ ಬಳಕೆಗೊಳ್ಳುತ್ತದೆ. 'ಪಡು' ಆಖ್ಯಾತದಿಂದ ಸಾಧಿತ ಶಬ್ದಗಳು ಮರಾಠಿಯಲ್ಲಿ ಕಂಡುಬರುವಷ್ಟು ಕನ್ನಡದಲ್ಲಿ ಕಾಣಬರುವುದಿಲ್ಲ. ಪಾಂಥಸ್ಥರ 'ಪಡ' ಸಾಲೆ ಇದ್ದರೂ, ಬಳಿಕ ಅವು 'ಧರ್ಮಸಾಲೆ' ಆಗಿರಬಹುದೇ ಎಂದು ಯೋಚಿಸುತ್ತಾ, ಊರು, ಬೀಡು, ಪಾಡಿಗಳು, ವಿಶ್ರಾಂತಿ-ಪಡು-ಪಟ್ಟಿಕೊಂಡಿರುವ ಸ್ಥಳಗಳು. ಪಡಿಸಾಲೆಗಳು ಊರೂರಿಗೂ ಇದ್ದು, ಮರಾಠಿ ಪ್ರದೇಶವು ಒಂದು ಕಾಲಕ್ಕೆ ಕಂನಾಡರ ಅಥವಾ ಇದರ ತೀರ ಹೋಲಿಕೆಯಿದ್ದ ಕಂನುಡಿಯ ಒಂದು ಪ್ರಕಾರದ ಭಾಷಿಕರ ವಸತಿಗಳಾಗಿದ್ದವು ಎಂಬುದನ್ನು ಮೇಲಿನ ಭಾಷಿಕ ವಿವರಗಳ ಮೂಲಕ ಶಂಬಾ ಹೇಳುತ್ತಾರೆ.[೭]

ಮಹಾರಾಷ್ಟ್ರದ ಪ್ರತಿ ಶಬ್ದವೇ ಹಾಟಕ. ಶಿವ 'ಹಾಟಕೇಶ್ವರ'ನಾದರೆ, ಶಿವೆ 'ಹಾಟಕೇಶ್ವರಿ'ಯಾಗುತ್ತಾಳೆ. ರಾಮದಾಸರ ಆರತಿಪದದಲ್ಲಿ "ಜಯದೇವಿ ಜಯದೇವಿ ಜಯವೇದ ಮಾತೆ ಹಾಟಕ, ಕರನಾಟಕ, ಕರುಣಾ ಕಲ್ಲೋಳಿ" ಎಂಬ ಉಲ್ಲೇಖದಿಂದ, ನಾಶಿಕದಿಂದ ಶ್ರೀಶೈಲದವರೆಗೆ ಇರುವ ಪ್ರದೇಶಕ್ಕೆ 'ಹಾಟಕದೇಶ' ಎನ್ನುವ ಹೆಸರಿತ್ತು ಎಂಬುದು ಈ ಉಲ್ಲೇಖದಿಂದ ಗೊತ್ತಾಗುತ್ತದೆ. ಹಟ್ಟಿ ಅಥವಾ ಹಾಟಕದೇಶವನ್ನು 'ಸುವರ್ಣಭೂಮಿ' ಎಂದು ಕರೆಯಲಾಗುತ್ತದೆ. ಸಂಸ್ಕೃತದಲ್ಲಿ ಬಂಗಾರಕ್ಕೆ 'ಹಾಟಕ' ಎಂಬ ಪರ್ಯಾಯ ಪದವಿದೆ. ಹಟ್ಟಿ ಅಥವಾ ಹಾಟಕದಲ್ಲಿ ಸಿಗುವುದಕ್ಕೆ 'ಹಾಟಕ'ವೆಂದು,

ಇಲ್ಲಿ ನಿರ್ಮಾಣವಾಗುವ ಬಂಗಾರಕ್ಕೆ 'ಹಾಟಕ' ಎಂಬ ಹೆಸರು ಬಂದಿದೆ. ಕನ್ನಡ ನಾಡಿನಲ್ಲಿ 'ಹಟ್ಟಿ' ಎಂಬ ಪ್ರಾಚೀನ ಚಿನ್ನದ ಗಣಿ ಇದೆ. ಅಲ್ಲದೆ, ಅನೇಕ ಶ್ರೀ ವಾಚಕ ಹೆಸರುಗಳುಳ್ಳ ಊರುಗಳೂ ಇವೆ. ಈ ಎಲ್ಲಾ ಕಾರಣಗಳಿಂದ 'ಹಾಟಕ'ವನ್ನು ದೇಶಕ್ಕೆ ಪರಿಚಯಿಸಿದವರು ಕನ್ನಡಿಗರು ಎಂದು ಶಂಬಾ ಶಬ್ದದ ಜಾಡು ಹಿಡಿದು ಹೇಳುತ್ತಾರೆ.[೮]

ಭಾಷೆ ಮನಸ್ಸಿನ ಪ್ರತಿಬಿಂಬವಷ್ಟೆ, ಒಬ್ಬನಾಡುವ ಭಾಷೆಯಿಂದ ಅವನ ಸಾಂಸ್ಕೃತಿಕ ಹಿನ್ನಲೆಯನ್ನು ತಕ್ಕ ಮಟ್ಟಿಗೆ ಗುರುತಿಸಬಹುದು. ಭಾಷೆಯಲ್ಲಿ ಬಳಕೆಗೊಂಡ ಶಬ್ದಗಳ ಆಧಾರದಿಂದ, ಆ ಭಾಷಿಕರ ಸಂಸ್ಕೃತಿಯ ಐತಿಹಾಸಿಕ ಹಿನ್ನೆಲೆಯನ್ನು ತಿಳಿಯಬಹುದು ಎಂದು ಶಂಬಾ ಅವರ ನಿಲುವಾಗಿದೆ. ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ 'ನಾಳೆ' ಹಾಗೂ 'ನೆನ್ನೆ'ಗೆ 'ಖಲ್' ಎಂಬ ಒಂದೇ ಪದವನ್ನು ಉಪಯೋಗಿಸಲಾಗುತ್ತದೆ. ಇದಕ್ಕೆ ಕಾರಣ ಈ ಜನರಿಗೆ 'ನಾಳೆ'ಯ ಬಗ್ಗೆ ಕಲ್ಪನೆಯಿಲ್ಲದಿರುವುದು. ಏಕೆಂದರೆ ಈ ಪ್ರದೇಶಗಳು ಹೊರಗಿನವರ ದಾಳಿಗೆ ತುತ್ತಾಗುತ್ತಿರುವುದರಿಂದ 'ಇಂದು' ಮತ್ತು 'ನೆನ್ನೆ' ಯಾರು ದಂಡೆತ್ತಿ ಬಂದಿಲ್ಲ ಇವೇ ಸತ್ಯ 'ನಾಳೆ' ಬಗ್ಗೆ ಹೇಳಬರುವುದಿಲ್ಲ ಎನ್ನುತ್ತಾ ಶಂಬಾ ದಕ್ಷಿಣದವರ ಜೀವನ ದೈನಂದಿನ ಅಡುಗೆ ಮುಂತಾದ ಉದಾಹರಣೆಗಳ ಮೂಲಕ ಉತ್ತರದವರೊಡನೆ ಹೋಲಿಸಿ ನೋಡುತ್ತಾರೆ.[೯]

'ಪತ್ತಿ' ಜನ 'ಹಟ್ಟಿ' ಜನರಾಗಿ ಮುಂದೆ ಇವರೊಳಗಿಂದ 'ಮರಹಟ್ಟಿ'ಯರ ಒಂದು ಗುಂಪು ಮೇಲೆದ್ದಿತ್ತು. ಇವರ ಭಾಷೆ (ಪ್ರಾಕೃತ) ಮಹಾರಾಷ್ಟ್ರೀ ಆಯಿತು. 'ಮಹಾರಾಷ್ಟ್ರೀ' ಭಾಷೆಯಿಂದ 'ಮಹಾರಾಷ್ಟ್ರ' ಎಂಬ ನಾಡು ನಿರ್ಮಾಣವಾಗಿಲ್ಲ. 'ಮರಹಟ್ಟಿ' ಜನರಿಂದ ಅದು ಅಸ್ತಿತ್ವಕ್ಕೆ ಬಂದಿದೆ. ಜನರಿಂದ ದೇಶಕ್ಕೆ ಹೆಸರು ಬರುತ್ತದೆ ವಿನಾ: ದೇಶದಿಂದ ಜನರಿಗೆ ಹೆಸರು ಬರುವುದಿಲ್ಲ. ಮಹಾರಾಷ್ಟ್ರೀ ಪ್ರಾಕೃತದ ಕಲ್ಪನೆ ಮೂಡಲು ಯಾದವರ ವಸತಿ ಸ್ಥಾನದ ಬಗ್ಗೆ ತಿಳಿಯುವುದು ಅವಶ್ಯ. ಈ ಯಾದವರು ದ್ವಾರಕ-ವಿದರ್ಭದವರೆಗೂ ವ್ಯಾಪಿಸಿದ್ದು, ನಾಟರ ರಾಷ್ಟ್ರೀಕರು, ಭೋಜಕರೊಂದಿಗೆ ಸಂಬಂಧ ಹೊಂದಿರುವುದರಿಂದ, ಗಂಗಾ-ಯಮುನಾ ತೀರದಿಂದ ದ್ವಾರಕೆಯವರೆಗೂ 'ಹಟ್ಟಿ' ಜನ ವ್ಯಾಪಿಸಿದ್ದು ಅವರ ಭಾಷೆ ಪ್ರಚಲಿತದಲ್ಲಿದ್ದಿರಬೇಕು. ಬಂಗಾಳದ ಒಂದು ಭಾಗಕ್ಕೆ 'ಗೌಡ' ಎಂಬ ಹೆಸರು ಇದ್ದು ಒಂದು ಕಾಲಕ್ಕೆ ಅಲ್ಲಿ 'ಗೌಳ' ಜನ ವಾಸಿಸುತ್ತಿದ್ದಿರಬೇಕು. ಸಂಗೀತದಲ್ಲಿ ಸೌರಾಷ್ಟ್ರ, ಕಾನಾಡಾ, ಅರಬೀ ರಾಗಗಳು ದೇಶವಾಚಕವಾಗಿರುವಂತೆ 'ಗೌಳ' ರಾಗವೂ ದೇಶವಾಚಕವಾಗಿರಬೇಕು. ಈ 'ಗೌಳ'ರು 'ಪತ್ತಿ' (ಹಟ್ಟಿ) ಜನರ ಒಂದು ಶಾಖೆಯಾಗಿದ್ದಿರಬೇಕು ಎಂದು ಊಹಿಸುತ್ತಾ ಶಂಬಾ ಅವರು ಈ ದೂರದ

ಪ್ರದೇಶಗಳಲ್ಲಿ ಪ್ರಭಾವ ಬೀರಿದ ದ್ರಾವಿಡರು ಯಾರಿರಬಹುದು ಎಂದು ಪ್ರಶ್ನಿಸಿಕೊಳ್ಳುತ್ತಾ, ಇಲ್ಲಿಯ ಗ್ರಾಮನಾಮಗಳು ಕೂಡ 'ಪತ್ತಿ' (ಹಟ್ಟಿ) ಜನರ ಪ್ರಭಾವನ್ನು ಹೊಂದಿವೆ ಎನ್ನುತ್ತಾರೆ. ಈ ಹಟ್ಟಿಕಾರರೇ ಮರಾಠಿ-ಕನ್ನಡಿಗರ ಪೂರ್ವಜರಾಗಿದ್ದಿರಬೇಕು. ಮುಂದೆ ಆರ್ಯೀಕರಣ ಪ್ರಕ್ರಿಯೆಯಲ್ಲಿ ಉತ್ತರಭಾರತದ ಕಡೆ ಸಂಪೂರ್ಣವಾಗಿ ತಮ್ಮ ವೈಶಿಷ್ಟ್ಯವನ್ನು ಕಳೆದುಕೊಂಡರೂ ಕೂಡ ನರ್ಮದೆಯಿಂದ ಕೆಳಗೆ ಸಂಪೂರ್ಣವಾಗಿ ತಮ್ಮ ಮೂಲ ವೈಶಿಷ್ಟ್ಯಗಳನ್ನು ಉಳಿಸಿಕೊಂಡರು.[೧೦]

ಒಂದು ಪದ, ಸಂದರ್ಭ ಪರಿಸ್ಥಿತಿಗೆ ಅನುಗುಣವಾಗಿ ಭಿನ್ನ ಅರ್ಥಗಳನ್ನು ಪಡೆಯುತ್ತದೆ. ಮೇಲ್ ನೋಟಕ್ಕೆ ಒಂದು ಬಗೆಯ ಅರ್ಥವನ್ನು ಹೊಂದಿದ್ದರೆ, ಅದೇ ಸಾಂಸ್ಕೃತಿಕ ಸಂದರ್ಭದ ಸಮಯದಲ್ಲಿ ಇನ್ನೊಂದು ಬಗೆಯ ಅರ್ಥದ ಕಡೆ ವಾಲುತ್ತದೆ. ಈ ಭಾಷಿಕ ಪ್ರಮಾಣಗಳು ಎರಡು ಬಗೆಯವು. ಒಂದು ವಿಶಿಷ್ಟ ಸೂಚಕ ಪದ - ವ್ಯತ್ಯಾಸ ಹೊಂದದೇ ಇದ್ದರೂ ಅದರ ಅರ್ಥದ ನೆಲೆಯಲ್ಲಿ ವ್ಯತ್ಯಾಸ ಹೊಂದಿರುತ್ತದೆ. ಎರಡು- ಸಾಂಸ್ಕೃತಿಕ ವಿಶಿಷ್ಟ ಸೂಚಕ ಪದ. ಹೊರನೋಟದಲ್ಲಿ ವ್ಯತ್ಯಾಸ ಹೊಂದಿದ್ದರೂ ಒಳರೂಪದಲ್ಲಿ ಯಾವುದೇ ವ್ಯತ್ಯಾಸ ಹೊಂದಿರುವುದಿಲ್ಲ. ಈ ನೆಲೆಯಲ್ಲಿ ಶಂಬಾ ಅವರು ಕಂದಮಿಳ ಭಾಷಾವರ್ಗದ ಅನೇಕ ಶಬ್ದಗಳನ್ನೂ, ಅವುಗಳ ಮೂಲ ಸ್ವರೂಪದ ಒಳ ಅರ್ಥದ ಕಡೆಗೆ ಅನ್ವೇಷಣೆಗೆ ತೊಡಗುತ್ತಾರೆ. ಕೂಡು -ಗೂಡು, ಮಾನವ ಇರುವ ಸ್ಥಳವನ್ನು ಸೂಚಿಸುವ ಪ್ರತಿಮಾತ್ಮಕ ಶಬ್ದ. 'ಕುಡು'ವಿನಿಂದ ಬೆಳೆದ ಗೊಂಡ<ಕೊಂಡ, ಕುಂಡ>ಕುಂತ ಈ ಶಬ್ದಗಳು ಅಂಕು ಡೊಂಕಾದ ಗುಡ್ಡ ಪ್ರದೇಶಗಳ ಸೂಚಕ ಪ್ರದೇಶಗಳಾಗಿವೆ. ಇಂತಹ ಪ್ರದೇಶದಲ್ಲಿ ವಾಸಿಸುತ್ತಿದ್ದ ಕಂನಾಡ ಮೂಲಿಗರನ್ನು ನೆನಪಿಗೆ ತಂದುಕೊಡುವ ಪ್ರದೇಶಗಳಾಗಿದ್ದು, ನಮ್ಮ ಎದುರಿಗೆ ಪ್ರಾಚೀನ ಸಂಸ್ಕೃತಿಯನ್ನು ಅನಾವರಣಗೊಳಿಸುವ ಭಾಷಿಕ ಪ್ರತಿಮೆಗಳಾಗಿವೆ.[೧೧]

ಕಂದಮಿಳ ಭಾಷಿಕರ ಶಬ್ದಗಳನ್ನು, ಅವುಗಳ ಪೂರ್ವಾರ್ಥದ ನೆಲೆಗಳನ್ನು ಗಮನಿಸುತ್ತಾ ಕಂನಡ ಸಂಸ್ಕೃತಿಯ ನೆಲೆಗಳನ್ನು, ಆ ಮೂಲಕ ಇಡೀ 'ಕಂದಮಿಳ' ಸಂಸ್ಕೃತಿಯನ್ನು ಶೋಧಿಸಲು ತೊಡುಗುತ್ತಾರೆ. ಮರಾಠಿ ಭಾಷೆಯಲ್ಲಿನ ಕನ್ನಡ ಧಾತುಗಳ ಮತ್ತು ಅಲ್ಲಿಯ ಜನರಾಡುವ, ಅವರಲ್ಲಿ ರಕ್ತಗತವಾಗಿರುವ ಕನ್ನಡ ಶಬ್ದಗಳ ಮೂಲಕ; ಅಲ್ಲಿಯ ಜನಾಂಗಗಳ ಆಗು - ಹೋಗುಗಳನ್ನು ವಿಚಾರಿಸಿದರೂ ಕಂನಾಡು ಇಲ್ಲಿಯೇ ಇರಬೇಕಾದುದು ಸುಸ್ಪಷ್ಟ ಎಂಬ ತೀರ್ಮಾನಕ್ಕೆ ತಲುಪುತ್ತಾರೆ. ಸ್ಥಳನಾಮಗಳ ತುಲನಾತ್ಮಕ ಅಧ್ಯಯನ ಹಿನ್ನೆಲೆಯಲ್ಲಿ ಅಲ್ಲಿಯ ಜನರ ಮನೋಭಾವ ಅವರು ಬೆಳೆದುಕೊಂಡು ಬಂದ ದಿಕ್ಕು, ಸಂಸ್ಕೃತಿ ಮೊದಲಾದವುಗಳನ್ನು ಅರಿಯಬಹುದಾಗಿದೆ ಎನ್ನುವ ಶಂಬಾ ಕನ್ನಡದ ಮಟ್ಟಿಗೆ ಮೊದಲಿಗೆ ಇಂತಹ ಕಾರ್ಯಕ್ಕೆ ಕೈ ಹಾಕಿ ಯಶಸ್ವಿಯಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸ್ಥಳನಾಮದ ಅಧ್ಯಯನದ ಬಗ್ಗೆ ವಿಶೇಷವಾಗಿ ಚರ್ಚೆಗಳು ನಡೆಯುತ್ತಿವೆ. ಒಂದು ಸ್ಥಳಕ್ಕೆ ಹೆಸರು, ಸುಮ್ಮಸುಮ್ಮನೆ ಬಂದಿರುವುದಿಲ್ಲ. ಹಾಗೂ ಉಳಿದುಕೊಂಡಿರಲೂ ಸಾಧ್ಯವಿಲ್ಲ. ಪ್ರಾಚೀನಕಾಲದಲ್ಲಿ ಸಾಮೂಹಿಕವಾಗಿ ಹುಟ್ಟಿಕೊಂಡು ಬಂದಿರಬಹುದಾದ ಹೆಸರುಗಳು ಕೇವಲ ಹೆಸರುಗಳಾಗಿ ಉಳಿದಿಲ್ಲ; ಅವು ಮಾನವ ಸಂಸ್ಕೃತಿಯ ಕುರುಹುಗಳಾಗಿ, ಆ ಕಾಲದ ಜನರ ಜೀವನ, ಆಚಾರ - ಸಂಪ್ರದಾಯ, ಸಂಸ್ಕೃತಿಗಳನ್ನು ಪ್ರತಿಬಿಂಬಿಸುವಂತಿರುತ್ತವೆ. ಇಂತಹ ಸ್ಥಳನಾಮಗಳ ಉಗಮಕ್ಕೆ ಪ್ರಾಕೃತಿಕ ಪರಿಸರ ಜನಾಂಗಗಳು, ಐತಿಹ್ಯ, ಪೌರಾಣಿಕ ಹಿನ್ನೆಲೆ, ಕಸುಬಿನ ಕಾರಣ ಮತ್ತು ವ್ಯಕ್ತಿಗತ ಕಾರಣಗಳು ಮುಖ್ಯವಾಗಿವೆಯೆಂದು ನಿರ್ಣಯಿಸಲಾಗಿದೆ. ಆಯಾ ಜನಾಂಗದ ಅನುಭವ, ಅಭಿರುಚಿಗಳನ್ನು ಅರಿಯುವುದರ ಜೊತೆಗೆ, ಮಂತ್ರಗಳೂ, ಮಾಂತ್ರಿಕ ಶಕ್ತಿಯು ಆದ ಸ್ಥಳನಾಮಗಳು, ಮಾನವ ಸಂಸ್ಕೃತಿಯನ್ನು ತಿಳಿಯುವಲ್ಲಿ ಸಹಾಯಕವಾಗಿವೆ. ಇವುಗಳು ಹುಟ್ಟಿಕೊಂಡಿದ್ದ ಪರಿಸರ, ಅರ್ಥವನ್ನು ಗ್ರಹಿಸುವುದೇ ಸ್ಥಳನಾಮ ಶಾಸ್ತ್ರದ ಗುರಿಯಾಗಿರುತ್ತದೆ.[೨] ಕಂನಾಡ ಸಂದರ್ಭದಲ್ಲಿ ಸ್ಥಳನಾಮಗಳನ್ನು ಭಾಷಾ ವೈಜ್ಞಾನಿಕ ಇಲ್ಲವೆ ಸಾಂಸ್ಕೃತಿಕ ಹಾಗೂ ಶಾಸನ ಶಾಸ್ತ್ರೀಯ ವಿಧಾನಗಳನ್ನುಸರಿಸಿ ನಡೆದಿರುವ ಅಧ್ಯಯನವೇ ಅಧಿಕವಾಗಿದೆ. ಇವೆಲ್ಲವನ್ನೂ ಒಳಗೊಂಡ ಅಂತರಶಿಸ್ತೀಯ ಅಧ್ಯಯನದ ಕಡೆ ಸಾಗಿದಾಗ ಬಹುಶಃ ಸ್ಥಳನಾಮಗಳ ಹಿನ್ನೆಲೆಯನ್ನು ಇನ್ನಷ್ಟು ಸೂಕ್ಷ್ಮವಾಗಿ ತಿಳಿದುಕೊಳ್ಳಬಹುದು. ಶಂಬಾ ಅವರು ಸ್ಥಳನಾಮಗಳನ್ನು ಸಂಸ್ಕೃತಿಯ ಹಿನ್ನೆಲೆಯಲ್ಲಿ ಗುರುತಿಸಿ ಕಂನಾಡ ನೆಲೆ ಹಾಗೂ ಸಂಸ್ಕೃತಿಯನ್ನು ಅನ್ವೇಷಿಸಲು ತೊಡಗುತ್ತಾರೆ. "ಎಡೆಗಳು ಹೇಳುವ ಕಂನಾಡ ಕತೆ" ಈ ಹಿನ್ನೆಲೆಯಲ್ಲಿಯೇ ಹೊರಬಂದ ಕೃತಿಯಾಗಿದೆ.

೧೯೪೭ರ ಸುಮಾರಿಗೆ ಸ್ಥಳನಾಮಗಳನ್ನು ಆಕಾರವನ್ನಾಗಿ ಬಳಸಿಕೊಂಡು ಸಂಸ್ಕೃತಿ ಅಧ್ಯಯನ ನಡೆದಿರುವುದು ಗಮನಾರ್ಹ ಕನ್ನಡಿಗರನ್ನು ಒಂದು ಗೂಡಿಸುವ ದೃಷ್ಟಿಯಿಂದ ಇಂತಹ ಪ್ರಯತ್ನ ಶಾಸ್ತ್ರೀಯವಾಗಿ ಅಲ್ಲದಿದ್ದರೂ ಸಿಕ್ಕಷ್ಟು ಆಧಾರಗಳ ಮೇಲೆ ಪ್ರಮಾಣಿಕವಾಗಿ, ಶಂಬಾ ಅವರು ಕೆಲಸ ಮಾಡಿರುವುದನ್ನು ಮೆಚ್ಚಬೇಕಾದದ್ದೇ. ಮಾನವನ ಇತಿಹಾಸವನ್ನು ತಿಳಿಯುವ ಅನೇಕ ಸಾಧನಗಳಲ್ಲಿ ಸ್ಥಳನಾಮಗಳ ಅಭ್ಯಾಸವೂ ಒಂದು. ಒಂದು ವಿಶಿಷ್ಟ ಪ್ರದೇಶದ ಸ್ಥಳಗಳನ್ನು ಕಲೆ ಹಾಕುತ್ತ ಅವುಗಳ ಹೊಸ - ಹಳೆ ರೂಪಾಂತರಗಳನ್ನು ಅರಿಯಬೇಕು. ಹೀಗೆ ಸಂಗ್ರಹ ಮಾಡುತ್ತಾ ಹೋದಂತೆ ಅವುಗಳ ಗುಂಪುಗಳೂ ನಿರ್ಮಾಣವಾಗುತ್ತದೆ. ಕ್ರಿಮಿ, ಕೀಟ, ವೃಕ್ಷವನಸ್ಪತಿಗಳು, ಪೌರಾಣಿಕ ಪ್ರಸಂಗ ಮುಂತಾದ ಗುಂಪುಗಳನ್ನು ಸ್ಥಳನಾಮಗಳಲ್ಲಿ ಮಾಡಬಹುದು.ಯಾವುದೇ ಊರಿನ ಹೆಸರಿನಲ್ಲಿ ಎರಡು ಶಬ್ದಗಳು ಕೂಡಿರುತ್ತವೆ. ಪೂರ್ವಭಾಗ ವಿವರಣಾತ್ಮಕವಾಗಿದ್ದು, ಉತ್ತರಭಾಗ ತೀರ ಅಥವಾ ಪ್ರದೇಶವನ್ನು

ಸೂಚಿಸುತ್ತಿರುತ್ತದೆ. ಹೆಸರಿನ ಉತ್ತರಭಾಗದ ಮೇಲಿಂದ ವಸತಿ - ಸ್ಥಾನದ ವಿಶಿಷ್ಟತೆಯನ್ನು ಅರಿಯಬಹುದು. ಅಲ್ಲದೆ ಒಂದು ವಸತಿ ಸ್ಥಾನದ ಆರಂಭ ಹೇಗೆ ಆಯಿತು ಮತ್ತು ಅದರ ಬೆಳವಣಿಗೆಗೆ ಬಗ್ಗೆ, ಪಾಡಾವಾಡಿ ಪಾಡಿ ಪಾಡ - ಹಾಟ ಮೊದಲಾದ ಗ್ರಾಮಸೂಚಕ ಶಬ್ದಗಳಿಂದ ತಿಳಿಯಬಹುದು ಎನ್ನುತ್ತಾ ಈ ಶಬ್ದಗಳ ಬಗ್ಗೆ ಮೊಟ್ಟ ಮೊದಲಿಗೆ ಅಭ್ಯಾಸಕ್ಕೆ ತೊಡಗುತ್ತಾರೆ.

ಪಟ್ಟಿ, ಪಾಡಿ, ಪಾಡಾ - ವಾಡಿ, ವಾಡಾ, ಹಟ್ಟಿ - ಹಾಟ ಈ ಶಬ್ದಗಳು ಗ್ರಾಮನಾಮದ ಕೊನೆಯಲ್ಲಿ ಬರುತ್ತವೆ. ಸ್ಥಳ ಅಥವಾ ಪ್ರದೇಶ ಸೂಚಕವಾಗಿದ್ದು, ಅರ್ಥಸಾದೃಶ್ಯ, ರೂಪ ಸಾದೃಶ್ಯವನ್ನು ಹೊಂದಿವೆ. ಪಟ್ಟಿ - ಪಾಡಿಗಳೂ 'ಪಡು' ಧಾತುವಿನಿಂದ, ರೂಪಗೊಂಡು 'ಪಾಡಿ'ಯಿಂದ 'ವಾಡಿ' ನಿಷ್ಪನ್ನವಾಗಿದೆ. ಇದಕ್ಕೆ ಅನೇಕ ಆಧಾರಗಳು ದೊರಕುತ್ತವೆ. ಕನ್ನಡ ಸಮಾಸಗಳಲ್ಲಿ ಪ,ಬ,ಮ,ಗಳು 'ವ' ಕಾರಗಳಾಗುವುದಕ್ಕೆ ಉದಾಹರಣೆಗಳಿದ್ದು ಪ್ರಾಕೃತದಲ್ಲಿಯೂ ಈ ನಿಯಮ ಇದ್ದಿರಬೇಕು. ಈ ನಿಯಮವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಹೋದರೆ ಮರ್‍ಹಾಟಿಯ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ದೊರಕುವುದಿಲ್ಲ. ಮೇಲಿನ ಶಬ್ದಗಳಿಗೆ ಒಂದಕ್ಕಿಂತ ಹೆಚ್ಚಿಗೆ ಅರ್ಥವಿದ್ದು ಯಾವುದು ಮೊದಲು, ಯಾವುದು ಆಮೇಲೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಇದಕ್ಕೆ ಸಮಾಜಶಾಸ್ತ್ರದ ಬೆಂಬಲಕೂಡ ಬೇಕಾಗುತ್ತದೆ. 'ಪಟ್ಟಿ-ಹಟ್ಟಿ' ಶಬ್ದಗಳ ಜಾಡು ಹಿಡಿದು ಸಾಗಿದಾಗ, ಮಾನವನ ಮೊದಲಿನ ಅವಸ್ಥೆ ಪಶು ವೃತ್ತಿಯಿಂದ, ಬೇಸಾಯದವರೆಗಿನ ಸ್ಥಿತ್ಯಂತವನ್ನು, ವಿಕಾಸವನ್ನು, ತಿಳಿಯಬಹುದಾಗಿದೆ.[೨]

ಗ್ರಾಮ-ಊರು-ಪುರ-ಇವು ಅಷ್ಟು ಪ್ರಾಚೀನವಲ್ಲ ಎನ್ನುವ ಶಂಬಾ 'ಹಟ್ಟಿ'ಯೇ ಪ್ರಾರಂಭದ ಮಾನವನ ವಸತಿಸ್ಥಾನವಾಗಿರಬೇಕು ಮಹಾರಾಷ್ಟ್ರದಲ್ಲಿನ ಸ್ಥಳನಾಮಗಳನ್ನು ಉಲ್ಲೇಖಿಸುತ್ತಾ ಇವು ಕಂದಮಿಳ ಭಾಷಿಕವರ್ಗದ ಶಬ್ದಗಳಿಂದ ಸೂಚಿತಗೊಂಡಿರುವುದನ್ನು ಗುರುತಿಸುತ್ತಾರೆ. ಬಂಗಾಳದ ಒಂದು ಭಾಗಕ್ಕೆ 'ಗೌಡ' ಎಂಬ ಹೆಸರಿದೆ. ಆ ಹೆಸರು ಬರಲು ಕಾರಣರಾದ 'ಗೌಳ'ರು (ಕಂನಡ) ಹಟ್ಟಿಕಾರರೇ ಇರಬೇಕು. ಇದಕ್ಕೆ ಅಲ್ಲಿ ದೊರೆಯುವ ಪಟ್ಟಿ ಪಾಡಿ, ಪಾಟಕ, ಹಟ್ಟಿ, ಊರು ಸಂತಿ, ಗಡ್ಡ ಕಿಂಡಿ ಮೊದಲಾದ ಗ್ರಾಮನಾಮಗಳಿಗೆ ಕಾರಣವಾಗಿವೆ. ಇವುಗಳಿಗೆ ಪಟ್ಟಿಗಳು ಅಥವಾ ಹಟ್ಟಿಕಾರ ಗೋವಳರಿಂದಲೇ ಆ ನಾಡಿಗೆ ಹೆಸರು ಬಂದಿರಬೇಕು. ಕಂನಡ, ಹಟ್ಟಿಕಾರರಿಂದಲೇ ಆ ಭಾಗಕ್ಕೆ 'ಗೌಡ'ಎಂಬ ಹೆಸರು ಬಂದಿರುವುದು ಎಂದು ಊಹಿಸಿದ್ದಾರೆ.

ಕೋಲರು, ಮುಂಡರು, ಮಹಿಷರು, ಬಿಲ್ಲವರು, ಬೇಡರು, ಅಂಬಿಗರು ಇವರೆಲ್ಲ ಕಂನಾಡಿನ ಆದಿವಾಸಿಗಳಾಗಿದ್ದರಬೇಕು. ಕೋಲ ಹಾಗೂ ಮುಂಡರ ಹೆಸರಿನ ಸ್ಥಳನಾಮಗಳು ಕಂನಾಡಿನಲ್ಲಿ

ವಿಶೇಷವಾಗಿರುವುದು ಇದಕ್ಕೆ ಕಾರಣ. ಉದಾ- ಕೊಲ್ಲ, ಕೊಲ್ಲಗಿರಿ, ಕೋಲಾರ, ಕೊಲ್ಲಾಳಿ, ಮುಂಡರಗಿ, ಮುಂಡಗೋಡು ಮುಂಡೇವಾಡಿ ಮುಂತಾದವು. ಈ ಆಧಾರದಿಂದ ಕಂನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ಇವರು ವಾಸವಾಗಿದ್ದಿರುವುದನ್ನು ವ್ಯಕ್ತಪಡಿಸುತ್ತಾರೆ. ಇಂತಹ ಸ್ಥಳನಾಮಗಳ ಅಧ್ಯಯನದಿಂದ. ಆ ಜನಾಂಗದ 'ಪಾಡು' ತಿಳಿಯುವಂತೆ, ಕಂನಾಡ ನೆಲೆಯ 'ಪಾಡು' ತಿಳಿಯಬಹುದು. ದೇಶದ ವಿಭಾಗಗಳಿಗೆ ಇಟ್ಟ ಹೆಸರಿನಲ್ಲಿ ಭೌಗೋಳಿಕ ನೆಲೆಯ ಸ್ಥಿತಿಗತಿಯನ್ನು ಗುರುತಿಸಲು ಸಹಾಯವಾಗುತ್ತದೆ. ಶಂಬಾ ಜೋಶಿಯವರಿಗೆ ಕೇವಲ ಸ್ಥಳನಾಮದ ಅಧ್ಯಯನ ಮುಖ್ಯವಾಗಿರದೇ ಆ ಮುಖಾಂತರ ನಾಡಿನ ಒಟ್ಟು ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವ ನೆಲೆಯನ್ನು ಕುರಿತ ಕಡೆ ಅವರಿಗೆ ಆಸಕ್ತಿ ಇರುವುದನ್ನು ಗಮನಿಸಬಹುದು.”

ಕಂನಾಡ ಸಂಸ್ಕೃತಿಯ ನೆಲೆಗಳನ್ನು ಗುರುತಿಸುವಲ್ಲಿ ಶಂಬಾ ಅವರು ಭಾಷಿಕ ಅಂತಃಪ್ರಮಾಣ; ಸ್ಥಳನಾಮಗಳ ಹಿಂದಿರುವ ಮನೋಭಾವವನ್ನು ಪ್ರಮುಖ ಆಕರಗಳನ್ನಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ಅವರು ಹೇಳಿದ್ದೆಲ್ಲ ಸಂಪೂರ್ಣವಾಗಿ ಸತ್ಯವೆಂದು ಒಪ್ಪಿಕೊಳ್ಳದಿದ್ದರೂ ಬಹುಪಾಲು ತಥ್ಯ ಉಂಟೇ ಉಂಟು. ಒಂದು ಭಾಷೆಯ ಶಬ್ದ ರಚನೆಯ ಬಗ್ಗೆ ಅದರ ಹಿಂದಿರಬಹುದಾದ ಅರ್ಥದ ಬಗ್ಗೆ ಆಲೋಚನೆ ಮಾಡುತ್ತಾ 'ಹೀಗೆ ಇದ್ದಿರಬೇಕು' ಎಂಬ ತರ್ಕದ ನೆಲೆಯಲ್ಲಿ ತೀರ್ಮಾನಗಳನ್ನು ಕೊಡುತ್ತಾ ಹೋಗುತ್ತಾರೆ. ಭಾಷೆಯಿಂದಲೇ ಸಂಸ್ಕೃತಿ; ಸಂಸ್ಕೃತಿ ವಾಹಕ ಭಾಷೆಯಾಗಿರುವುದರಿಂದ, ಸ್ಥಳನಾಮದ, ದೈವತ ಪ್ರತಿಮೆಗಳನ್ನು ಪರಿಗಣಿಸಿ ಜೀವನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬಹುದು ಎಂಬ ಖಚಿತ ನಿಲುವನ್ನು ತಾಳುತ್ತಾರೆ. ಈ ರೀತಿಯಾಗಿ ಭಾಷಿಕ ಪ್ರಮಾಣಗಳನ್ನು, ಸ್ಥಳನಾಮಗಳ ಹಿನ್ನೆಲೆಯನ್ನು ಸಂಸ್ಕೃತಿ ಅರಿಯುವಲ್ಲಿ ಹಾಗೂ ಆ ಮೂಲಕ ಕಂನಾಡಿನ ಮೇರೆಯನ್ನು ಗುರುತಿಸುವಲ್ಲಿ ಶಂಬಾ ಮಾಡಿರುವ ಪ್ರಯತ್ನ ಶ್ಲಾಘನೀಯವಾದದ್ದು.

ಆಕರ ಗ್ರಂಥಗಳು

೧. ಪಾತಳಿ, ಪು.೧೩೨-೧೩೩

೨. ಮರಾಠಿ ಸಂಸ್ಕೃತಿ, ಪು.೯೬-೯೮

೩. ಸಂಸ್ಕೃತಿ ಮತ್ತು ಶಂಬಾ, ಪು.೫೨

೪. ಕ.ಸಂ.ಪೂ.ಪೀಠಿಕೆ ಭಾಗ ೧, ಪು.೮೮

೫. ಶಂಬಾ ಕೃತಿ ಸಮೀಕ್ಷೆ, ಪು.೮೧

೬. ಕ.ಸಂ.ಪೂ.ಪೀ.ಭಾಗ ೧, ಪು.೯೨-೯೬

೭. ಅದೇ, ಪು.೯೩-೧೦೩

೮. ಮರಾಠಿ ಸಂಸ್ಕೃತಿ, ಪು.೫೨-೫೩

೯. ಮಾನವ ಇತಿಹಾಸದ ನೆಲೆಯಿಂದ ಶಂಬಾ ಜೋಶಿಯವರ ಚಿಂತನೆ, ಡಾ|| ಜಿ ಗುರುಮೂರ್ತಿ, ಪುಟ ೪೭-೪೮

೧೦. ಮರಾಠಿ ಸಂಸ್ಕೃತಿ, ಪು.೯೮-೧೦೮

೧೧. ಸಂಸ್ಕೃತಿ ಮತ್ತು ಶಂಬಾ, ಪು.೫೨-೫೩

೧೨. ಜಾನಪದ ಜಗತ್ತು, ೧೯೯೬, ಸಂಪುಟ ೧೨, ಸಂಚಿಕೆ ೪

೧೩. ಮರಾಠಿ ಸಂಸ್ಕೃತಿ, ಪು.೧-೩೦

೧೪. ಡಾ|| ವಿದ್ಯಾಶಂಕರ ಎಡೆಗಳ ಹೇಳುವ ಕಂನಾಡ ಕತೆ ಪಠ್ಯ, ಶಂಬಾ ಕೃತಿ ಸಮೀಕ್ಷೆ

ಈ. ದೈವತಾಪ್ರತಿಮೆ ಮತ್ತು ಆಚರಣಾನೆಲೆಗಳ ಮೂಲಕ ಕಂನಾಡ(ನ) ವ್ಯಾಪ್ತಿ

ಮಾನವನು ಪ್ರಕೃತಿಯ ಶಿಶುವಾಗಿ ಬದುಕಿದ್ದ ಸಮಯದಲ್ಲಿ ಪ್ರಕೃತಿಯ ಪ್ರತಿಯೊಂದು ವಸ್ತುವೂ ಸ್ಪರ್ಧಿಯಂತೆ ಭಾಸವಾಗುತ್ತಿತ್ತು. ಬರುಬರುತ್ತಾ ಪ್ರಕೃತಿಯ ಉಗ್ರರೂಪಗಳನ್ನು ಕಂಡು,ಹೆದರಿ ಅವುಗಳಿಗೆ ಶಕ್ತಿಯ ಸ್ವರೂಪವನ್ನು ನೀಡಿ ದೇವರೆಂದು ಕರೆಯಲು ಆರಂಭಿಸಿದ. ಮಾನವನ ಮನಸ್ಸಿನ ಭಯದ ಭಾವನೆಯೇ ಹೊರಗೆ ವ್ಯಕ್ತವಾಗಿ ಅದನ್ನು ದೇವರು-ದಿಂಡಿರು ಎಂಬ ಹೆಸರು ನೀಡಿ ಭಯಭಕ್ತಿಯಿಂದ ಪೂಜಿಸಲು ಆರಂಭಿಸಿದ ಮನುಷ್ಯನ ಭಯದ ಭಾವನೆಯ ಮೂಲಕ ಹುಟ್ಟಿದ ದೇವರು ಆ ಮನುಷ್ಯನ ಸ್ವಭಾವಗಳ ಪ್ರತೀಕನೂ ಆಗಿರುತ್ತಾನೆ; ಆಗಿರಬೇಕು ಕೂಡಾ.

ಹಿಂದೂ ಸಂಪ್ರದಾಯ ಮನಸ್ಸು ಮೇಲಿನ ವಿಚಾರವನ್ನು ಅಲ್ಲಗಳೆದು ದೇವರ ಸೃಷ್ಟಿಯೇ ನಾವು ಎಂಬ ನಂಬಿಕೆಯನ್ನು ಬಲವಾಗಿ ನಂಬುತ್ತದೆ. ಇಂತಹ ಮನೋಭಾವದಿಂದ ಹೊರಬಂದು, ದೇವರುಗಳನ್ನು ಪೂಜಿಸುವ ಭಕ್ತರ ಮನಸ್ಥಿತಿಯನ್ನು ಅರಿತಾಗ ಸಂಶೋಧಕನು ದೇವರುಗಳ ಹಿಂದಿನ ರಹಸ್ಯವನ್ನು ಶೋಧಿಸಬಹುದು. ಈ ಹಿನ್ನೆಲೆಯಲ್ಲಿ ಶಂಬಾ ದೈವತಾ ಪ್ರತಿಮೆಗಳು, ಸಂಕೇತಗಳು, ಆಚರಣೆಯ ನೆಲೆಗಳ ಮೂಲಕ 'ಕಂನಾಡ ಸಂಸ್ಕೃತಿ'ಯ ನೆಲೆಯನ್ನು ಶೋಧಿಸಲು ತೊಡಗುತ್ತಾರೆ. ಈ ರೀತಿಯ ಶೋಧನೆಯೇ ಅವರನ್ನು ಇತರರು ತಲುಪದ ಸಂಸ್ಕೃತಿಯ ಮೂಲನೆಲೆಯ ಕಡೆಗೆ ದೃಷ್ಟಿಹಾಯಿಸುವಂತೆ ಮಾಡಿದೆ. ಭೌಗೋಳಿಕ, ಜನಾಂಗೀಯ ಭಾಷಿಕ ನೆಲೆಗಳ ಜೊತೆಗೆ ದೈವತಾ ಪ್ರತಿಮೆಗಳು ಅವರಿಗೆ ಕಂನಾಡ ಸಂಸ್ಕೃತಿಯ ಮೂಲನೆಲೆಯನ್ನು ಹಾಗೂ ಕಂ.ನಾಡರ ದೇವತೆಗಳ ಬಗ್ಗೆ ತಿಳಿಯಲು ಮುಖ್ಯ ಆಕರಗಳಾಗಿವೆ.

ಪುರಾಣ ಮತ್ತು ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಕಂಡು ಬರುವ ದೈವಗಳ ಅಧ್ಯಯನದ ಮೂಲಕ ಇಂದಿನ ಬದುಕನ್ನು ಅರ್ಥೈಸಿಕೊಳ್ಳಬಹುದು. ಇತಿಹಾಸ ಮತ್ತು ತತ್ವಶಾಸ್ತ್ರದ ನೆಲೆಗಳು ಒಂದಕ್ಕೊಂದು ಪೂರಕವಿದ್ದು ಇವೆರಡರ ತಾಳ-ಮೇಳದಲ್ಲಿ ಸಾಂಸ್ಕೃತಿಕ ಬದುಕನ್ನು ಅರಿಯಬಹುದು ಎಂದು ಶಂಬಾ ಅವರು ದೃಢವಾಗಿ ನಂಬಿದ್ದಾರೆ. ಈ ನಂಬಿಕೆಯೇ ಅವರ ದೈವತಾ ಅಧ್ಯಯನದ ಹಿಂದಿನ ಉದ್ದೇಶವೂ ಆಗಿದೆ. ದೈವತಗಳು ಆಯಾ ಸಂದರ್ಭಕ್ಕೆ ಹುಟ್ಟಿಕೊಂಡ, ನಂಬಿಕೆ, ಸಾಮಾಜಿಕ ಬಿಕ್ಕಟ್ಟುಗಳನ್ನು ತನ್ನ ಆಕೃತಿಯಲ್ಲಿ ಧರಿಸಿಕೊಂಡಿರುತ್ತವೆಂಬ ನಿಲುವು ಪ್ರಧಾನವಾಗಿರುವುದರಿಂದ ಇವುಗಳನ್ನು ವೈಜ್ಞಾನಿಕವಾಗಿ ಮತ್ತು ಸ್ವರೂಪಾಧ್ಯಾಯನದ ನಿಲುವಾಗಿಯೂ ಶಂಬಾ ಅವರು ಸ್ವೀಕರಿಸುತ್ತಾರೆ. ಈ ಅಧ್ಯಯನ ಮಾದರಿ

ಅವರೊಬ್ಬರಿಗೆ ಸೀಮಿತವಾಗಿದ್ದು, ಕರ್ಣಾಟಕ-ಮಹಾರಾಷ್ಟ್ರ ದೈವತಾ ಪ್ರತಿಮೆಗಳ ಆಕೃತಿ ವಿಚಾರವನ್ನು ಈ ನೆಲೆಯಲ್ಲಿಯೇ ಕೈಗೊಳ್ಳುತ್ತಾರೆ.[೧]

ಮಾನವನ ಸಂಸ್ಕೃತಿಯೊಳಗೆ 'ದೈವತಾ ಪ್ರತಿಮೆ' ಅಂಕೆಗೆ ಬರುವುದು ಒಂದು ವಿಶಿಷ್ಟ ಕಾಲಘಟ್ಟದಲ್ಲಿ. ಶಂಬಾ ಅವರು ಶಿವ-ರುದ್ರ, ಮತ್ತು ಚಂದ್ರ ದೈವತಾ ಪ್ರತಿಮೆಗಳನ್ನು ಸಾಂಕೇತಿಕ ಅರ್ಥಗ್ರಹಣಕ್ಕೆ ಬಳಸಿಕೊಂಡರು. ಮೂಲತಃ ಇವು ಕಂದಮಿಳ ಭಾಷಾವರ್ಗದ ದೈವತಗಳು ಇವು ಮುಂದೆ ಆರ್ಯೀಕರಣ ಹೊಂದಿವೆ. ಇವುಗಳ ಮೂಲವನ್ನು ಶೋಧಿಸುತ್ತಾ ಹೋದಾಗ 'ರಹಸ್ಯ' ಬಯಲುಗೊಳ್ಳುವುದು. 'ರುದ್ರಾಧ್ಯಾಯ'ದಲ್ಲಿ "ಪತ್ತೀನಾಂ ಪತಯೇ ನಮಃ" ಎಂಬ ನುಡಿಯೊಂದು ಬರುತ್ತದೆ. ಇಲ್ಲಿ 'ಪತ್ತಿ' ಎಂಬುದು ಜನಾಂಗವೆಂದು ಅನೇಕ ಕೋಶಗಳೇ ಹೇಳುತ್ತಿವೆ. 'ಪತ್ತಿ'ಎಂಬುದು ಕಂದಮಿಳ ಶಬ್ದ. ಇದು ಹೇಗೆ ಅಲ್ಲಿ ಸೇರಿಕೊಂಡಿತು? ಇಲ್ಲಿ ಬರುವ ರುದ್ರ-ಶಿವ, ಬೇರೆ ಬೇರೆ ಅಥವಾ ಅಭಿನ್ನರೇ ಎಂಬ ಬಗ್ಗೆ ಚರ್ಚಿಸುತ್ತಾ, ಕರ್ಣಾಟಕ ಮತ್ತು ಮಹಾರಾಷ್ಟ್ರದಲ್ಲಿ ದೊರೆಯುವ ದೈವತಾ ಪ್ರತಿಮೆ, ಆಚರಣೆಗಳ ಮೂಲಕ ಮೂಲವನ್ನು ಶೋಧಿಸಲು ತೊಡಗುತ್ತಾರೆ.

ಶಿವ-ರುದ್ರ ಒಂದೇ ಅರ್ಥದ ಎರಡು ಶಬ್ದಗಳು. ಪುರಾಣಗಳ ಕಾಲದಲ್ಲಿ 'ರುದ್ರ'ನಿಗೆ 'ಶಿವ' ಎಂಬ ಹೆಸರು ಪ್ರಾಪ್ತವಾಗಿರಬೇಕು. ವೈದಿಕ ಋಷಿಗಳು 'ರುದ್ರ'ನನ್ನು 'ನೀನು ಕಳ್ಳರ ದೇವತೆ, ಬೇಡರ ದೇವತೆ, ನೀನು ವನಚರರ ದೇವತೆ' ಎಂದು ಬಣ್ಣಿಸಿ, ಅವನಿಗೆ, ಹವಿಸ್ಸನ್ನು ನೀಡುವ ಮಂತ್ರಗಳನ್ನು ಪ್ರಾರ್ಥಿಸುತ್ತಾರೆ. ಇಂದಿಗೂ ಬ್ರಾಹ್ಮಣರಲ್ಲಿ 'ರುದ್ರ'ನ ಉಪಾಸಕರು ಇಲ್ಲ; ಶೈವಪಂಥ ಸ್ವೀಕರಿಸಿದವರಲ್ಲಿ ಈ ದೇವತೆ ಉಂಟು. ವೇದಗಳ ವರ್ಣನೆಯಲ್ಲಿ ಭಯಂಕರನಾಗಿ ಕಂಡು ಬರುವ 'ರುದ್ರ' ಮುಂದೆ ಪುರಾಣಗಳ ಕಾಲಕ್ಕೆ 'ಶಿವ'ನಾದ್ದು ಕಂಡುಬರುತ್ತದೆ. ಅಸುರರು 'ಶಿವ'ನ ಪರಮಭಕ್ತರಾಗಿದ್ದು ಗಮನಾರ್ಹ. 'ರುದ್ರ' ಶಬ್ದಾರ್ಥ 'ಕೆಂಪು' ಎಂದಿದ್ದು ಮುಂದೆ. ಆನುಷಂಗಿಕ ಅರ್ಥಗಳು ಹುಟ್ಟಿರುವ ಸಾಧ್ಯತೆ ಇದೆ. 'ಶಿವನು ಪತ್ತಿ ಜನರ ಕಂದಮಿಳ ಭಾಷಾ ವರ್ಗಕ್ಕೆ ಸೇರಿದ್ದಾಗಿದ್ದರೆ, ರುದ್ರ' ಆರ್ಯ ಭಾಷಾವರ್ಗಕ್ಕೆ ಸಂಬಂಧಿಸಿದ್ದಾಗಿದೆ. ವೀರಶೈವರಲ್ಲಿ 'ಶಿವರುದ್ರಪ್ಪ' ಎಂಬ ಹೆಸರಿಡುವ ಪದ್ಧತಿಯಿರುವುದರಿಂದ ಬಹುತೇಕ ಇವೆರಡು ಒಂದೇ ಅರ್ಥದ ಅಭಿನ್ನದೇವತೆಯಾಗಿದೆ.

'ಶಿವ' ಶಬ್ದದ ವಿಚಾರ ಮಾಡಬೇಕಾದರೆ 'ಚಂದ್ರ' ಶಬ್ದದ ಹಿನ್ನೆಲೆಯನ್ನು ಗಮನಿಸಬೇಕು. 'ಚಂದ್ರ' ಉಚ್ಚಾರ ಮೂಲದಲ್ಲಿ 'ಶ್ಚಂದ್ರ' ಎಂದಿದ್ದು ಇದರ ಅರ್ಥ 'ಕೆಂಪು' ಎಂದಾಗುತ್ತದೆ. 'ಶಿಂದೂರ'

ಎಂದರೆ 'ಕೆಂಪು'. ಕರ್ನಾಟಕದಲ್ಲಿ ಇದರ ಉಚ್ಚಾರ 'ಚೇಂದ್ರ' ಆದರೆ ಮಹಾರಾಷ್ಟ್ರದಲ್ಲಿ 'ಶ'ಕಾರ ಹಾಗೆಯೇ ಉಳಿಯುತ್ತದೆ.[೨]

'ಪತ್ತಿ' ಜನರಿಗೆ 'ಕೆಂಪು' ಪ್ರಿಯ ಶಿವ' ಎಂದರೆ 'ಮಂಗಲಕಾರಕ' 'ಕೆಂಪು' ಎಂಬ ಅರ್ಥವನ್ನು ಹೇಳಲಾಗಿದೆ. 'ಚಂದ್ರ'ನಂತೆ 'ಶಿವ' ಶಬ್ದ 'ಶಿನ್ ' 'ಚನ್ ' ವರ್ಗದ ಶಬ್ದವಾಗಿದ್ದರೆ, 'ಶಿವ' ಪತ್ತಿಜನರ ಮೂಲದೇವತೆಯಾಗಿರುವುದು ಸತ್ಯ. ಪತ್ತಿ ಜನರ ಪತಿಯಾಗಿದ್ದ 'ಶಿವ'ನು ಮುಂದೆ 'ಹಟ್ಟಿ'ಗಳ 'ಪತಿ'ಯಾಗಿ 'ಹಾಟಕೇಶ್ವರ'ನಾಗಿದ್ದಾನೆ. ಇದಕ್ಕೆ ದಕ್ಷಿಣಾಪಥದಲ್ಲಿ ವಿಪುಲವಾಗಿ ಈ ಕ್ಷೇತ್ರಗಳು ಕಂಡುಬರುತ್ತವೆ ಎಂದು ಶಂಬಾ ತರ್ಕಿಸುತ್ತಾರೆ.[೩]

'ಶಿವ'ನಿಗೆ ಅನೇಕ ಹೆಸರುಗಳಿವೆ. ಅವುಗಳಲ್ಲಿ 'ಕಾಲೇಶ್ವರ' 'ಕಲ್ಮೇಶ್ವರ' ಎಂಬ ಹೆಸರೂ ಒಂದು. ಕರ್ನಾಟಕದ ಅನೇಕ ಭಾಗಗಳಲ್ಲಿ ಈ ಹೆಸರಿನ ದೇವಾಲಯಗಳಿವೆ. 'ಕಲ್ಲಯ್ಯ' ಹೆಸರೂ ಪ್ರಚಲಿತದಲ್ಲಿದೆ. ಇಲ್ಲಿನ 'ಕಲ್ -ಕಳ್ ' ಕಂದಮಿಳ ಶಬ್ದವಾಗಿದ್ದು, ರಸಾರ್ಥಕವಾಗಿದ್ದು, 'ಪಾಲು' ಶಬ್ದದಂತೆ ಕ್ಷೀರವಾಚಕವಾಗಿದೆ. 'ಕಲ್ಮೇಶ್ವರ' ಎಂದರೆ 'ಹಾಲಿನ ದೇವತೆ' ಹಟ್ಟಿಕಾರರ ದೇವರು ಎಂಬ ಅರ್ಥ ಬರುತ್ತದೆ. ವಚನಗಳಲ್ಲಿ 'ಕಲ್ಲಿನಾಥ' ಎಂಬ ಅಂಕಿತ ಬರುತ್ತದೆ. ಆ ಜನರು ಕಲ್ಮೇಶ್ವರ, ಕಾಲೇಶ್ವರ, ಕಲ್ಲಯ್ಯ ಎಂಬ ಹೆಸರಿಡುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. 'ಕಲ್ಲಪ್ಪ' ಹೆಸರು ಇಂದು ಎಲ್ಲಜಾತಿಯಲ್ಲಿಯೂ ಸಿಗುತ್ತದೆ. ಈ ಕಾರಣಗಳಿಂದ 'ಕಾಲ್ಮೇಶ್ವರ' ಕಂನಾಡ ಹಟ್ಟಿಕಾರರ ಕುಲದೈವ. ಉಜ್ಜಯಿನಿಯ 'ಕಾಲೇಶ್ವರ'ನನ್ನು ನೆನಪಿಗೆ ತಂದುಕೊಳ್ಳುತ್ತಾ ಅಲ್ಲಿಯವರೆಗೂ 'ಕಂ'ಜನರ ಅಸ್ತಿತ್ವವಿದ್ದುದ್ದನ್ನು ಇದರಿಂದ ಗುರುತಿಸಬಹುದು.

ಮರಾಠಿಗರು ಮತ್ತು ಕನ್ನಡಿಗರು-ವಿಶೇಷವಾಗಿ ಶಿವನ ಭಕ್ತರು. ಮರಾಠಿಯಲ್ಲಿ 'ಖಂಡೋಬಾ' ಪ್ರಿಯ ದೈವ. ಆದರೆ, ಈ ಹೆಸರು ಇತ್ತೀಚೆಗೆ ಬಂದದ್ದು. ಪ್ರಾಚೀನ ಹೆಸರು. 'ಮಾಲ್ಹಾರಿ ಮಾರ್ತಾಂಡ' 'ಮಲ್ಹಾರಿ ಮೈರಾಳ' 'ಮಾಳಸಾ ಮಾರ್ತಾಂಡ' ಎಂಬ ವಿವಿಧ ಹೆಸರುಗಳಿವೆ. ಇವನ ಜಾತ್ರೆಯಲ್ಲಿ 'ಏಳುಕೋಟಿ' ಹರಹರ ಮಹಾದೇವ, 'ಜಯಮಲ್ಹಾರಿ' ಎಂಬ ಪರಾಕುಗಳು ಕೇಳಿಬರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಈ ಹೆಸರುಗಳು ಕೇಳಿಬಾರದೆ 'ಮಲ್ಲಯ್ಯ' ಎಂಬ ಹೆಸರು ಕೇಳಿಬರುತ್ತದೆ. ಕನ್ನಡಿಗರು ಈ ಹೆಸರನ್ನು ಇಷ್ಟಪಡುವಂತೆ ಖಂಡೇರಾವ್, ಮಲ್ಹಾರಿ, ಮಲ್ಹಾರರಾವ್ ಮುಂತಾದ ಹೆಸರುಗಳನ್ನು ತಮ್ಮವರಿಗೆ ಇಡುವುದಿಲ್ಲ. ಮರಾಠಿ ಬ್ರಾಹ್ಮಣರಲ್ಲಿ ಹೆಚ್ಚಾಗಿ ರೂಢಿಯಲ್ಲಿವೆ. ಇದರಿಂದ ಒಮ್ಮೆ

ಒಂದಾಗಿದ್ದ ಈ ನಾಡುಗಳು, ಬೇರೆಯಾದಾಗ 'ಮಲ್ಲಯ್ಯ' 'ಖಂಡೋಬಾ' ನಾಗಿ, ಮಹಾರಾಷ್ಟ್ರದಲ್ಲಿ ನೆಲೆಯೂರಿರಬೇಕು.

'ಮಲ್ಲಯ್ಯ' ಎಂಬ ಹೆಸರು ಮಹಾರಾಷ್ಟ್ರೀಕರಣಕ್ಕಿಂತ ಪೂರ್ವದಲ್ಲಿ ಪ್ರಚಾರದಲ್ಲಿರಬೇಕು. ಕರ್ಣಾಕಟದ ಮೂಲಮನೆತನಗಳಲ್ಲಿ ಹಳೆಯ ಸಂಪ್ರದಾಯ ಜೀವಂತವಾಗಿರುವಲ್ಲಿ 'ಮಲ್ಹಾರಿ' ಹೆಸರು ಇರದೆ ಮಲ್ಲಯ್ಯ, ಮಲ್ಲೇಶ, ಮಲ್ಲಪ್ಪ, ಮಲ್ಲಿಕಾರ್ಜುನ, ಮಲ್ಲಿನಾಥ ಎಂಬ ಹೆಸರುಗಳು ವೀರಶೈವ ಮತ್ತು ಕುರುಬ ಇವರಿಬ್ಬರಲ್ಲಿ ಕಂಡುಬರುತ್ತವೆ. 'ಮಲ್ಹಾರಿ' ದೇವರನ್ನು ಕನ್ನಡಿಗರು 'ಮಲ್ಲಯ್ಯ' ಎಂದೆ ಗುರುತಿಸುತ್ತಾರೆ. 'ಮಲ್ಹಾರಿ-ಮಲ್ಲಯ್ಯ' ಹೆಸರುಗಳು ಕರ್ಣಾಟಕ-ಮಹಾರಾಷ್ಟ್ರಗಳ ವೈಶಿಷ್ಟ್ಯವನ್ನು ಸೂಚಿಸುತ್ತವೆ ಎನ್ನಬಹುದು.[೪]

'ಮಲೆ+ಅಯ್ಯಾ' ಶಬ್ದದಲ್ಲಿ 'ಮಲೆ'ಎಂದರೆ ಪರ್ವತ. ಮಲೆಯ ದೇವರು ಎಂದರೆ 'ಪರ್ವತದ ದೇವರು' ಇದರಿಂದ ಕನ್ನಡಿಗರ ಮೂಲಿಗರು ಪರ್ವತ ಪೂಜಕರಿರಬೇಕು. 'ಮಲ್ಲಯ್ಯ' ಹೆಸರಿನ ಅರ್ಥದಂತೆ, ಗುಡ್ಡಪ್ಪ, ಅಡೆವಪ್ಪ, ಗಿರಿಯಪ್ಪ, ಪರ್ವತಪ್ಪ, ಎಂಬ ಹೆಸರುಗಳೂ ಜನರಲ್ಲಿ ರೂಢವಾಗಿವೆ. ರುದ್ರನಿಗೆ ವೇದಗಳಲ್ಲಿ 'ಗಿರೀಶ' ಗಿರಿತ್ರಯ ಹೆಸರುಗಳು ಇದೇ ಅರ್ಥಹೊಂದಿದ್ದು, ಪರ್ವತಪೂಜೆ, ಶಿವಪೂಜೆ ಎಂದಾಗಿ ಮೇಲಿನ ಪರ್ಯಾಯ ನಾಮಗಳು ಇಂದಿಗೂ ಉಳಿದು ಬಂದಿರುವುದರಿಂದ ಕಂನಾಡ ಜನರ ಮೂಲದೈವ 'ಮಲ್ಲಯ್ಯ' ವಿನಾ 'ಮಲ್ಹಾರಿ' ಅಲ್ಲ ಎಂದು ನಿರ್ಣಯಿಸುತ್ತಾರೆ.

ಮೇಲೆ ಹೇಳಿದ ಖಂಡೋಬಾ ಮತ್ತು ಮಲ್ಲಯ್ಯ ದೈವಗಳಿಗೆ ವ್ಯತ್ಯಾಸವುಂಟು. ಖಂಡೋಬಾನ ವಾಹನ ಕುದುರೆ, ಹಾಗೂ ಅವನು ಖಡ್ಗದಾರಿಯಾದರೆ ಮಲ್ಲಯ್ಯನ ವಾಹನ 'ನಂದಿ' ಹಾಗೂ ಅವನು ತ್ರಿಶೂಲಧಾರಿ. 'ಖಂಡೋಬಾ' ಖಡ್ಗ ಹಿಡಿದಿರುವುದರಿಂದ ಅವನು ವೀರರ ಪ್ರತೀಕವೆಂದು ನಂಬಿಕೆ. 'ಮಲ್ಹಾರಿ' ಖಂಡೋಬಾ ಆದದ್ದು ಅವನ ಕೈಯಲ್ಲಿನ ಖಡ್ಗದಿಂದ ನವರಾತ್ರಿಯ ಮಹಾನವಮಿ ದಿನ ಆಯುಧ ಪೂಜೆ ಇದ್ದು ಇದರಲ್ಲಿ ಖಡ್ಗಕ್ಕಿರುವ ಮಹತ್ವದಿಂದ ಆ ದಿವಸಕ್ಕೆ 'ಖಂಡೇನವಮಿ' ಎಂಬ ಹೆಸರೂ ಇದೆ. ಮಹಾನುಭಾವ ಭಾಸ್ಕರನ ' ರುಕ್ಮೀಣೀ ಸ್ವಯಂವರ 'ದಲ್ಲಿ 'ಖಾಂಡೇವಾಹೋ' ಎಂಬ ಪ್ರಯೋಗವಿರುವುದರಿಂದ, ಬಹುಶಃ 'ಖಾಂಡೋವಾಹೋ'ದಿಂದ 'ಖಂಡೋಬಾ' ಹೆಸರು ಬಂದಿರಬೇಕು ಎಂದು ಶಂಬಾ ಊಹಿಸುತ್ತಾರೆ.

'ಮಲ್ಲಯ್ಯ' ಶಿವನಾದರೆ 'ಮಲ್ಹಾರಿ' ಮಲ್ಲರನ್ನು ನಾಶಮಾಡಿದವ. ಈ ಮಲ್ಲರು ಮಲಯರುಗಳಾಗಿದ್ದು ಆರ್ಯ ವಿರೋಧಿಗಳಾಗಿದ್ದಿರಬೇಕು. ಋಗ್ವೇದದಲ್ಲಿ ಪರ್ವತಗಳ ಉಲ್ಲೇಖವಿದ್ದು

ಇವುಗಳ ವಾಸ್ತವ - ಅವಾಸ್ತವ ಸಂಗತಿಗಳು ಬಿಡಿಸಲಾರದ ರೀತಿಯಲ್ಲಿ ಸೇರಿವೆ. 'ಪುರ' ಎನ್ನುವುದು ಪರ್ವತಗಳಂತೆ ರೂಪಕಗಳಾಗಿವೆ. 'ಪುರ'ದ ವೈರಿ ಇಂದ್ರ. ಈ ಕಾರಣದಿಂದ 'ಮಲ್ಹಾರಿ' ಎಂದರೆ ಪರ್ವತೇಯರ ನಾಶಮಾಡಿದವ. ಅಂದರೆ ಇಂದ್ರ ಈ ಮಲ್ಹಾರಿ (ಖಂಡೋಬಾ) ಅಶ್ವಾರೋಹಿಯಾಗಿದ್ದು ಕೈಯಲ್ಲಿ ಖಡ್ಗದಂಥ ಆಯುಧ ಹಿಡಿದಿರುವಲ್ಲಿ ಈ ದೇವರು ಇಂದ್ರನೇ ಇರಬೇಕು ಎಂದು ಶಂಬಾ ಅವರ ಊಹೆಯಾಗಿದೆ."

ಕನ್ನಡ ನಾಡಿನಲ್ಲಿ ಕುರುಬರಿಗೆ 'ಮೈಲಾರ' ಆರಾಧ್ಯದೈವ. ಇವನು 'ಮಣಿಮಲ್ಲಾಸುರ'ನನ್ನು ಕೊಂದ ಕತೆಯಿದೆ. ಇದಕ್ಕೂ 'ಮಲ್ಹಾರಿ'ಗೂ ಸಂಬಂಧ ಇರಬಹುದು. ಇವನ ಭಕ್ತಗಣ ಇಂದೂರು, ಉಜ್ಜಯಿನಿವರೆಗೂ ವ್ಯಾಪಿಸಿರುವುದರಿಂದ, ಇವನಿಗೂ ಮಲ್ಹಾರಿಗೂ ಸಂಬಂಧವಿರಬೇಕು. ಮೈಲಾರ-ಮಹಾರಾಷ್ಟ್ರದಲ್ಲಿ ಮಲ್ಹಾರಿಯಾಗಿ 'ಶಿವ'ನ ರೂಪ ಪಡೆದರೂ ಒಳಗೆ ಹೆಸರು ಬದಲಾದ 'ಇಂದ್ರ' ನಿಂತಿದ್ದಾನೆ.

'ಮಹಿಷಾಸುರ ಮರ್ದಿನಿ- ದೇವಿಯನ್ನು ಕೊಲ್ಹಾಪುರದ ಕಡೆ ಮಹಾಲಕ್ಷ್ಮಿ, ಅಂಬಾಭವಾನಿಯೆಂದು ಕರೆಯಲಾಗುತ್ತದೆ. ಮಲ್ಲಾಸುರನ ನಾಶ ಮಾಡಿದವ ಮಲ್ಹಾರಿಯಾದರೆ, ಮಹಿಷರನ್ನು ನಾಶಮಾಡಿದ ದೇವಿ ಮಹಿಷಾಸುರ-ಮರ್ದಿನಿ. ನವರಾತ್ರಿ ಉತ್ಸವ 'ದೇವಿ'ಯ ಉತ್ಸವವೇ ಆಗಿದ್ದು, ಕರ್ನಾಟಕ-ಮಹಾರಾಷ್ಟ್ರದಲ್ಲಿ ಎಲ್ಲರ ಹಬ್ಬವಾಗಿದೆ. 'ಗೌಡ' ದೇಶಕ್ಕೆ ಈ ದೇವಿಯು ಇಲ್ಲಿಂದಲೇ ಹೋಗಿರುವ ಸಾಧ್ಯತೆಯನ್ನು ಶಂಬಾ ಮಾಡುತ್ತಾರೆ. (ಊಹಿಸುತ್ತಾರೆ) ಮಹಿಷ ಜನರು ನಮ್ಮ ನಾಡಿನಲ್ಲಿ ಇದ್ದಿರಬೇಕು ಎನ್ನುವುದಕ್ಕೆ ಅವರ ಹೆಸರಿನ ಊರುಗಳೇ ಸಾಕ್ಷಿ. ಮೈಸವಾಡಿ ಮೈಸೂರು, ಎಮ್ಮಿಗನೂರು, ಕೋಣನಕೆರೆ, ಮುಂತಾದ ಗ್ರಾಮನಾಮಗಳಲ್ಲಿ ಅವರು ಅಸ್ತಿತ್ವದ ಕುರುಹುಗಳಾಗಿವೆ. "ಕೋಲಾಸುರ-ಭಯಂಕರಿ" ಎಂಬ ವಿಶೇಷಣವೊಂದು ಮಹಿಷಾಸುರ ಮರ್ದಿನಿಗೆ ಇದ್ದು ಕೋಲಾ-ಮುಂಡಾ ಜನಾಂಗದವರನ್ನೂ ಸಂಹರಿಸಿದಳು. ಇವರ ಹೆಸರುಗಳಿಂದ ಪ್ರಾರಂಭವಾಗುವ ಊರುಗಳು ಕರ್ನಾಟಕ -ಮಹಾರಾಷ್ಟ್ರದಲ್ಲಿ ಹೇರಳವಾಗಿದ್ದು 'ಕೋಲ' ಹೆಸರಿನ ಊರುಗಳು ಈಕೆಯ ಕ್ಷೇತ್ರಗಳೆಂದು ಹೆಸರು ಪಡೆದಿವೆ. ಉದಾ-ಕೋಲಾರ,ಕೊಲ್ಲೂರು, ಕೊಲ್ಲಾಪುರ ಮುಂತಾದವು.

ಎಲ್ಲಮ್ಮ-ರೇಣುಕೆಯ ಪೂಜೆ ಕರ್ನಾಟಕ-ಮಹಾರಾಷ್ಟ್ರದಲ್ಲಿ ಪ್ರಚಲಿತದಲ್ಲಿದ್ದರೂ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿದೆ. ಮರಾಠಿಗರ ಮರ್ಗಜಾ, ಮರೀಆಯೀ, ದೇವತೆಗಳು ಕಂನಾಡಿನಲ್ಲಿ

'ಮರದಮ್ಮ' 'ಮಾರೀ' ಅಮ್ಮನಾಗಿದ್ದರೆ, 'ಗುಜರಾತಿ'ಯಲ್ಲಿ 'ಕೊಟ್ಟರಮ್ಮ' ಎಂಬ ಕನ್ನಡ ಹೆಸರನ್ನು ಹೊಂದಿರುವ 'ದೇವಿ' ಇಲ್ಲಿಂದ ಹೋಗಿರುವ ಸಾಧ್ಯತೆಯನ್ನು ಶಂಬಾ ಗುರುತಿಸುತ್ತಾರೆ.

ಶಂಬಾ ಅವರು ದೈವತಾ ಪ್ರತಿಮೆಗಳ ಜೊತೆ-ಜೊತೆಗೆ ಭಾಷಿಕ ನೆಲೆಯಲ್ಲಿಯೂ ಅವುಗಳ ಮೂಲವನ್ನು ಶೋಧಿಸಲು ಪ್ರಯತ್ನಿಸುತ್ತಾರೆ. ಕನ್ನಡದಲ್ಲಿ ಮಲ್ಲಯ್ಯ, ಸಂಸ್ಕೃತದಲ್ಲಿ ಪರ್ವತೇಶ್ವರ, ಮರ್‍ಹಾಟಿಯಲ್ಲಿ ಖಂಡೇರಾಯ, ಖಂಡೋಬಾ ಹಾಗೂ ಕುರ್ಪ್ ಜನಾಂಗದಲ್ಲಿ 'ಡೊಂಗರದೇವ' ಇವೆಲ್ಲಾ ಒಂದೇ ಮೂಲದ ದೈವತಾ ಪ್ರತಿಮೆಗಳಾಗಿವೆ. ವೇದಪೂರ್ವ ಜನಾಂಗಗಳಿಂದ ದೈವತಾ ಪ್ರತಿಮೆಗಳನ್ನು ಪಡೆದು ಆರ್ಯರು ತಮ್ಮದಾಗಿಸಿಕೊಂಡರು. ಶಂಬಾ ಇದಕ್ಕೆ ಪುರಾಣ ಕತೆಯೊಂದರ ಉಲ್ಲೇಖದಿಂದ ಸ್ಪಷ್ಟಪಡಿಸುತ್ತಾರೆ. ಪುರಾಣಗಳು ಆಧ್ಯತನವನ್ನು ತಮ್ಮ ಗರ್ಭದಲ್ಲಿಟ್ಟುಕೊಂಡು, ಹಾಗೆಯೇ ಪೂರ್ವಪರಂಪರೆಯ ಚಹರೆಯನ್ನು ತನ್ನ ಒಡಲಲ್ಲಿಟ್ಟುಕೊಂಡಿರುತ್ತವೆ. ಹಟಗಾರ-ಜಾಡರು ಇಂದಿನ ನೇಗಿಯರು. ಇವರಿಗೆ 'ದೇವಾಂಗ' ಎಂಬ ಹೆಸರೂ ಉಂಟು. 'ದೇವಾಂಗ ಪುರಾಣ' ಎಂಬ ಪುರಾಣವೊಂದಿದೆ. ಇದರ ಪ್ರಕಾರ ಇವರು 'ನಂದಿಧ್ವಜ'ರೆಂದು ಹೇಳುತ್ತಾರೆ. ನಂದಿಧ್ವಜ ಇರುವುದರಿಂದ, ಇವರು ಶಿವನ ಆರಾಧಕರು. ಎತ್ತು - ಆಕಳುಗಳಿಂದ ಉಪಜೀವಿಸುವವರು ಎಂಬ ಅರ್ಥವೂ ಬರುತ್ತದೆ. ಇದೇ ಪುರಾಣದಲ್ಲಿ ಪಾರ್ವತಿ ಇವರಿಗೆ 'ಕಂಕಣ'ವನ್ನು ದಯಪಾಲಿಸಿದ್ದು, ಆ ಕಂಕಣ ಪಡೆದವರು 'ನೇಯ್ಗೆ' ವೃತ್ತಿಯನ್ನು ಕಂಡುಕೊಂಡರು ಎನ್ನುತ್ತದೆ. ಇದರ ಆಶಯದ ಮೂಲಕ ಪ್ರಾಚೀನ ಜನಾಂಗದ ಜೀವನ ವಿಧಾನದ ಎಳೆಗಳನ್ನು ತಿಳಿಯಲು ಸಾಧ್ಯವಿದೆ.[೭]

ದೈವತಾ ಪ್ರತಿಮೆಗಳಿಗೆ ಬೆಲೆ ಸಿಗುವುದು ಅವುಗಳ ಆಚರಣೆಯ ಸಂದರ್ಭದಲ್ಲಿ ಆಚರಣಾ ಮೂಲದ ನೆಲೆಗಳಲ್ಲಿ ಕೂಡ 'ಕಂನಾಡ ಸಂಸ್ಕೃತಿ'ಯ ಹಿನ್ನೆಲೆಗಳನ್ನು ಅದರ ವೈಶಿಷ್ಟ್ಯವನ್ನು ಗುರುತಿಸಬಹುದು.'ದೀಪಾವಳಿ'ಗೆ ಜನಪದರಲ್ಲಿ 'ಹಟ್ಟಿಹಬ್ಬ' ವೆಂದು ಹೆಸರು. ಇಲ್ಲಿ 'ಹಟ್ಟಿ' ಎಂದರೆ ದನಕರುಗಳ ಬೀಡು; ಹಟ್ಟಿಹಬ್ಬ ಹಟ್ಟಿಕಾರರ ಹಬ್ಬ. ಅಂದು ದನಕರುಗಳನ್ನು ಸಿಂಗರಿಸಿ ಮೆರೆಸುವುದುಂಟು. ಮೊದಲಿಗೆ ದನಗಾರರ ಹಬ್ಬ 'ದನ'ವು ಧನಗಾರರಿಂದ - ಮೇಟಿ ಒಕ್ಕಲಿಗರ - ಕೈಯಿಂದ ಜಾರುತ್ತಾ ವರ್ತಕರನ್ನು ಸೇರುತ್ತಲೇ 'ದೀವಳಿಗೆ'ಯಾಗಿ ಇಂದಿನ 'ದೀಪಾವಳಿ' ಎನಿಸಿದೆ. ನಮ್ಮ ಅನೇಕ ಆಚರಣೆಗಳ ಹಿಂದೆ ಸಂಸ್ಕೃತಿಯ ಒಂದಿಲ್ಲೊಂದು ಅಂಶ ಉಳಿದುಕೊಂಡು ಬಂದಿರುತ್ತದೆ. ಅದನ್ನು ಗುರುತಿಸುವ ದೃಷ್ಟಿ ಇರಬೇಕಾದ್ದು ಅವಶ್ಯ. ಮದುವೆಯ ದಿನ ಕರಿ ಉಣ್ಣೆಯ ದಾರವನ್ನು ಕಂಕಣವನ್ನಾಗಿ ಕಟ್ಟುವುದು, ಹುಡುಗಿ ಮೈನೆರೆದಾಗ ಹಸಿರು ಗುಡ್ಲು ಹಾಕುವುದು, ಮುಂತಾದ ಆಚರಣೆಗಳನ್ನು ಸಾಂಸ್ಕೃತಿಕ ಅಧ್ಯಯನ ಮೂಲಕ ವಿಶ್ಲೇಷಿಸುತ್ತಾ ಅವುಗಳ ಉದ್ದೇಶವನ್ನು ಅರಿಯಬಹುದಾಗಿದೆ.[೮]

'ಕಂನಾಡ ಸಂಸ್ಕೃತಿ'ಯ ನೆಲೆಗಳನ್ನು ಶೋಧಿಸಲು, ಭೌಗೋಳಿಕ, ಜನಾಂಗಿಕ, ಭಾಷಿಕ, ಸ್ಥಳನಾಮಗಳ ಅಧ್ಯಯನ, ದೈವತಾ ಪ್ರತಿಮೆ ಮತ್ತು ಆಚರಣೆಗಳನ್ನು ಮುಖ್ಯ ಆಕರಗಳನ್ನಾಗಿ ಬಳಸಿಕೊಂಡು ಶಂಬಾ ಅವರ ಅನ್ವೇಷಣೆ ಮುಂದುವರೆಯುತ್ತದೆ. ಪ್ರಶ್ನೆಯೊಳಗೆ, ಪ್ರಶ್ನೆಯನ್ನು ಹಾಕುತ್ತಾ ಅದಕ್ಕೆ ಉತ್ತರವನ್ನು ಹುಡುಕಲು ಪ್ರಯತ್ನಿಸುತ್ತಾರೆ. ಆಕರಗಳ ಸಾಧ್ಯತೆಯನ್ನು ಒರೆಗೆ ಹಚ್ಚುತ್ತಾ, ಕೆಲವೊಮ್ಮೆ ಊಹೆ, ತರ್ಕಗಳಿಂದ, ಸಮಸ್ಯೆಯನ್ನು ಬಿಡಿಸಲು ಯತ್ನಿಸುವುದರಿಂದ, ಅವರ ಆಲೋಚನಾ ವಿಧಾನ ಕಗ್ಗಂಟಾಗಿ ಕಂಡುಬರುತ್ತದೆ. ಆದರೂ, ಅವರು, ಆಧಾರಗಳನ್ನು ಕೊಡುವ ವಿಶ್ಲೇಷಣಾ ಕೌಶಲ್ಯಕ್ಕೆ ತಲೆ ತೂಗುವುದಂತೂ ನಿಜ. ಭಾರತೀಯ ಸಂಸ್ಕೃತಿಯೊಳಗೆ ಕಂನಾಡ ಸಂಸ್ಕೃತಿಯನ್ನು ಕಂಡುಕೊಂಡು ಅದರ ಮೂಲ ಶೋಧನೆಗೆ ತೊಡಗುತ್ತಾರೆ. ನೆಲೆಗಳನ್ನು ಗುರುತಿಸುವುದಷ್ಟೇ ಅವರಿಗೆ ಮುಖ್ಯವಾಗಿರಲಿಲ್ಲ. ವರ್ತಮಾನದ 'ಸ್ಥಿತಿ' ಹೀಗಾಗಲು ಕಾರಣವಾದ ಕಾರಣಮೀಮಾಂಸೆಯನ್ನು ಕುರಿತು ಆಲೋಚಿಸುವುದು ಅವಶ್ಯವಾಗಿತ್ತು. ಇಂದಿನ ಬದುಕು 'ಸ್ಥಿತಿ' ರೂಪದಲ್ಲಿ, ಇದಕ್ಕೆ ಕಾರಣ 'ನೆನ್ನೆ'ಯಲ್ಲಿ ಹುಡುಕುತ್ತಾ ಮುಂದಿನ (ಭವಿಷ್ಯ) ದಾರಿಯನ್ನು ಕುರಿತು ಆಲೋಚಿಸುವುದೇ ಅವರಿಗೆ ಮುಖ್ಯವಾಗಿತ್ತು. 'ಕಂನಾಡ ಸಂಸ್ಕೃತಿ'ಯ ನೆಲೆಗಳನ್ನು ಗುರುತಿಸುವ ಆಕರಗಳನ್ನು ಪ್ರಮಾಣೀಕವಾಗಿ ಬಳಸಿಕೊಂಡು ಸಂಸ್ಕೃತಿಯನ್ನು ಪುನರಚಿಸುವ ಕೆಲಸವನ್ನು ಮಾಡಿದ್ದಾರೆ.

ಆಕರ ಗ್ರಂಥಗಳು

೧. *ಶಂಬಾ ಕೃತಿ ಸಮೀಕ್ಷೆ*, ಪು.೧೨೯

೨. *ಮರಾಠಿ ಸಂಸ್ಕೃತಿ*, ಪು.೧೩೪-೧೩೫

೩. ಅದೇ, ಪು.೧೪೨

೪. ಅದೇ, ಪು.೧೫೨-೧೫೩

೫. ಅದೇ, ಪು.೧೫೭-೧೫೮

೬. *ಕ.ಸಂ.ಪೂ.ಪೀ.ಭಾಗ ೧*, ಪು.೧೨೮

೭. *ಸಂಸ್ಕೃತಿ ಮತ್ತು ಶಂಬಾ*, ಪು. ೫೬-೫೭

೮. *ಅದೇ*, ಪು.೫೪.೫೫

ಅಧ್ಯಾಯ ೭

ಮುಕ್ತಾಯಕ್ಕೆ ಮುನ್ನ

'ಸಂಸ್ಕೃತಿ' ಪದ ಇಂದು ವ್ಯಾಪಕವಾಗಿ ಬಳಕೆಗೊಳ್ಳುತ್ತಿದೆ. ಇದಕ್ಕೆ ಎಲ್ಲವನ್ನು 'ಧಾರಣ' ಮಾಡಿಕೊಳ್ಳುವ ಸಾಮರ್ಥ್ಯ ಇರುವುದೇ ಅದರ ಬಹು ವ್ಯಾಪ್ತಿಗೆ ಕಾರಣವಾಗಿದೆ. ಸಂಸ್ಕೃತಿಯನ್ನು ಕುರಿತು ಮಾತನಾಡುವಾಗ ನಮಗೆ ನಮ್ಮದೇ ಆದ ಪ್ರಶ್ನೆಗಳು ಎದುರಾಗುತ್ತವೆ.ಸಂಸ್ಕೃತಿಯೆಂದರೇನು? ಯಾವ, ಯಾರ, ಸಂಸ್ಕೃತಿ ಹಾಗೂ ಅದನ್ನು ವ್ಯಷ್ಟಿ ನೆಲೆಯಲ್ಲಿ ವ್ಯಾಖ್ಯಾನಿಸಿಕೊಳ್ಳಬೇಕು ಅಥವಾ ಸಮಷ್ಟಿ ನೆಲೆಯಲ್ಲಿ ವ್ಯಾಖ್ಯಾನಿಸಿಕೊಳ್ಳಬೇಕೆ? ಈ ಬಗೆಯ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಕಷ್ಟಸಾಧ್ಯ. ಬಹುತೇಕವಾಗಿ ಎಲ್ಲ ಸಂಸ್ಕೃತಿ ಚಿಂತಕರನ್ನು ಕಾಡುವ ಪ್ರಶ್ನೆಗಳು ಇವಾಗಿವೆ.

ನಮ್ಮದಲ್ಲದ 'Culture' ಪದಕ್ಕೆ ಸಂವಾದಿಯಾಗಿ ಬಳಸಿಕೊಂಡು ಬರುತ್ತಿರುವ 'ಸಂಸ್ಕೃತಿ' ಪದವು ವಾಸ್ತವ ಜಗತ್ತಿನೊಳಗೆ ತನ್ನದೇ ಆದ ಹಿಡಿತವನ್ನು ಇಟ್ಟುಕೊಂಡಿದೆ. ನಮ್ಮ ಬದುಕಿನೊಡನೆ ತಳುಕು ಹಾಕಿಕೊಂಡು, ನಿನ್ನೆ-ಇಂದು-ನಾಳೆಗಳೊಡನೆ ತೀವ್ರವಾದ ಸಂಬಂಧಗಳನ್ನು ಹೊಂದಿರುವುದರಿಂದ, ಈ ಸಂಸ್ಕೃತಿ ಅಧ್ಯಯನವೆಂದರೆ ನಮ್ಮ ಒಟ್ಟು ಜೀವನದ ವಿಧಾನಗಳ ಅಧ್ಯಯನವೇ ಆಗುತ್ತದೆ.

'ಸಂಸ್ಕೃತಿ' ಕುರಿತು ವ್ಯಾಪಕ ಚರ್ಚೆಗೆ ನಾನಾ ಕಾರಣಗಳಿವೆ. ತಾನು ನಂಬಿಕೊಂಡು ಬಂದ ನಂಬಿಕೆಗಳಿಗೆ ಪೆಟ್ಟು ಬೀಳತೊಡಗಿದಂತೆ. ತನ್ನನ್ನು ಇನ್ನೊಂದರ ಹಿಡಿತದಲ್ಲಿ ಕರಗಿ ಹೋಗಲು ಬಿಡದ ಮನಸ್ಸಿನ ಒಳ ಒತ್ತಡಗಳು; ನನ್ನದು-ನಮ್ಮದು ಎಂಬ ಅಭಿಮಾನಗಳಿಗೆ; ಇತರೆ ಸಂಸ್ಕೃತಿಗಳ ಪ್ರಭಾವ-ಪ್ರಚಾರಗಳ ಭರದಲ್ಲಿ ಮುಳುಗಿಹೋಗುತ್ತಿರುವ ಭಾವನೆ ಬಂದಾಗ ಸಂಸ್ಕೃತಿಯ ಬಗೆಗೆ ಮಾನವ ಚಿಂತಿಸಲು ತೊಡಗುತ್ತಾನೆ.ಇವೆಲ್ಲವನ್ನು ಒಟ್ಟಾಗಿ ಹೇಳಬೇಕೆಂದರೆ, ರಾಜಕೀಯ, ಆರ್ಥಿಕ, ಸಾಮಾಜಿಕ ಒತ್ತಡಗಳೇ ಸಂಸ್ಕೃತಿ ಕುರಿತ ಚಿಂತನೆಗೆ ಆಹಾರವಾಗುತ್ತವೆ.

'ಸಂಸ್ಕೃತಿ' ಬಗೆಗಿನ ಚರ್ಚೆ ಈ ಶತಮಾನದ ಪ್ರಾರಂಭದಲ್ಲಿ ಬಿರುಸಾಗಿ ನಡೆಯಿತು. ಇದಕ್ಕೆ ಕಾರಣಗಳು ಹಲವು. ಭಾರತ ಆಂಗ್ಲರ ಆಳ್ವಿಕೆಯಲ್ಲಿ ಇದ್ದದ್ದು; ಆ ಮೂಲಕ ಜ್ಞಾನ ಜಗತ್ತನ್ನು ತನ್ನೊಳಗೆ ಬರ ಮಾಡಿಕೊಂಡದ್ದು, ಇಲ್ಲಿ ಆಂಗ್ಲರ ವಿದ್ಯಾಭ್ಯಾಸ ಕ್ರಮ ನಮ್ಮೊಳಗೆ ಒಂದು ಹೊಸ ಜಗತ್ತನ್ನು

ತೋರಿಸಿಕೊಡುತ್ತಿರುವ ಸಂದರ್ಭದಲ್ಲಿಯೇ ಪರಂಪಾರಾಗತ ರೂಢಿ-ಸಂಪ್ರದಾಯಗಳನ್ನು ವಿರೋಧಿಸುವ ಮನೋಭಾವನೆಯ ಕಡೆಗೆ ಅವಕಾಶ ಮಾಡಿಕೊಡುತ್ತಿತ್ತು. ಭಾರತಕ್ಕೆ ಇತಿಹಾಸವಿಲ್ಲ. ಭಾರತೀಯರಿಗೆ ಇತಿಹಾಸದ ಪ್ರಜ್ಞೆಯಿಲ್ಲ, ಎಂದು ಪಾಶ್ಚಾತ್ಯರು ತಮ್ಮವೇ ಮಾದರಿಯ ಕನ್ನಡಕದೊಳಗಿಂದ ಸಂಸ್ಕೃತಿಯನ್ನು ವಿವರಿಸುತ್ತಾ ಒಂದು ಬಗೆಯ ಸಂಕುಚಿತತೆಯನ್ನು ಉಂಟುಮಾಡಲು ಪ್ರಯತ್ನಿಸಿದ್ದರು. ಜಗತ್ತಿನಲ್ಲಿ ಭಾರತವನ್ನು 'ಪುರಾತನ' ದೇಶವೆಂಬ ಕಲ್ಪನೆಯ ಈ ಮಾದರಿಗಳನ್ನು ಭಾರತೀಯ ಮನಸ್ಸು ಒಪ್ಪದೇ 'ಪೂರ್ವಕಲ್ಪನೆ'ಗಳನ್ನು ಅಲ್ಲಗಳೆದು ಭಾರತದ ಸಂಸ್ಕೃತಿಯನ್ನು ಸಾಂಸ್ಕೃತಿಕವಾಗಿ ಪುನರ್ ನಿರ್ಮಿಸಲು ಯತ್ನಿಸಿತು. ಇಂಥ ಮನಸ್ಸಿನ ಚಿಂತಕರು ಆಂಗ್ಲ ವಿದ್ಯಾಭ್ಯಾಸ ಪಡೆದಿದ್ದವರೆಂಬುದು ಗಮನಾರ್ಹ.

ಪ್ರಸ್ತುತ ಸಂದರ್ಭದಲ್ಲಿ ವಸಹಾತುಶಾಹೀ ವಿರುದ್ಧ ತಮ್ಮವರನ್ನು ಎತ್ತಿಕಟ್ಟಲು 'ಸಂಸ್ಕೃತಿ' ಪದ ಒಂದು ಮಂತ್ರದಂಡದಂತೆ ಮಾರ್ಪಡಿಸಿಕೊಂಡರು. ಬ್ರಿಟಿಷರು ನಮ್ಮ ಶತ್ರುಗಳು; ಅವರ ಕಪಿಮುಷ್ಟಿಯಿಂದ ಭಾರತವನ್ನು ಬಿಡಿಸಿಕೊಳ್ಳಬೇಕು ಎನ್ನುವುದೇ ಆಗಿನ ನಾಯಕರ ಮುಖ್ಯ ಧೋರಣೆಯಾಗಿತ್ತು. ಇದಕ್ಕಾಗಿ ಅವರಿಗೆ ನೆರವಿಗೆ ಬಂದದ್ದು 'ಸಂಸ್ಕೃತಿ' ಪದ. ಇಂತಹ ಸಮಯದಲ್ಲಿ ಈ ಪದ ತನ್ನನ್ನು ತಾನು ವಿಶಾಲವಾಗಿ ತೆರೆದುಕೊಂಡು ಎಲ್ಲವನ್ನು ತನ್ನೊಳಗೆ ಬರಮಾಡಿಕೊಂಡು ಬಹುವ್ಯಾಪ್ತಿಗೆ ಒಳಗಾಯಿತು.

ರಾಷ್ಟ್ರಮಟ್ಟದಲ್ಲಿ ಈ ರೀತಿಯ ಸಂಸ್ಕೃತಿಯನ್ನು ವಿವರಿಸಿಕೊಳ್ಳುವ ಆವಶ್ಯಕತೆ ತಲೆದೋರಿದಂತೆ ಪ್ರಾದೇಶಿಕ ಮಟ್ಟದಲ್ಲೂ ಸಂಸ್ಕೃತಿಯನ್ನು ಒಂದು ನಿರ್ದಿಷ್ಟ ಭೂ ಪ್ರದೇಶಕ್ಕೆ ಅನ್ವಯಿಸಿ, ವಿವರಿಸಿಕೊಳ್ಳುವ ಪ್ರಯತ್ನಗಳು ನಡೆಯತೊಡಗಿದವು. ಇಂಥ ಪ್ರಯತ್ನದ ಮುಖ್ಯ ಉದ್ದೇಶ ರಾಷ್ಟ್ರೀಯ ಸಂಗ್ರಾಮದಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದೇ ಆಗಿತ್ತು. ಇದರ ಜೊತೆಗೆ ನಮ್ಮ ನಾಡು-ನುಡಿ-ಬಗೆಗೆ ಅಭಿಮಾನ ಮೂಡಿಸಲು ಪ್ರಯತ್ನಿಸಬೇಕಾಗಿತ್ತು. ಈ ಹಿನ್ನೆಲೆಯಲ್ಲಿಯೇ 'ಸಂಸ್ಕೃತಿ' ಪದದ ವಿಶಾಲವಾದ ಅರ್ಥವು ಪ್ರಾಂತೀಯವಾಗಿ. ಬಳಕೆಗೊಂಡು 'ಸೀಮಿತ' ಅರ್ಥಗ್ರಹಿಕೆಗೆ ಕಾರಣವಾಯಿತು. 'ಕರ್ನಾಟಕ ಸಂಸ್ಕೃತಿ' 'ತಮಿಳು ಸಂಸ್ಕೃತಿ' 'ತೆಲುಗು ಸಂಸ್ಕೃತಿ' ಎಂಬ ಪರಿಕಲ್ಪನೆ ಬೆಳೆದು ಬಂದವು.

'ಕಂನಾಡ ಸಂಸ್ಕೃತಿ' ತನ್ನದೇ ಆದ ವೈಶಿಷ್ಟ್ಯಗಳೊಂದಿಗೆ ರೂಪುಗೊಂಡು ಬೆಳೆದಿದೆ. ಈ ಸಂಸ್ಕೃತಿ ರೂಪುಗೊಳ್ಳಲು 'ಕರ್ನಾಟಕ ಏಕೀಕರಣ'ವೇ ಮುಖ್ಯ ಕಾರಣವಾಗಿದೆ. ಏಕೀಕರಣದ ಜೊತೆಯಲ್ಲಿಯೇ ಭಾರತೀಯ ಸ್ವಾತಂತ್ರ ಸಂಗ್ರಾಮದತ್ತ ತನ್ನನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಿರುವ ವೈಶಿಷ್ಟ್ಯದ ಜೊತೆಗೆ, ಕಂನಾಡ ಸಂಸ್ಕೃತಿಯ ಚಿಂತನೆ ನೆಡೆದಿದೆ. ಹಂಚಿಹೋಗಿದ್ದ ಕರ್ನಾಟಕವನ್ನು ಒಂದುಗೂಡಿಸಲು, ಅದರ ಗತಕಾಲದ ಸಂಸ್ಕೃತಿ, ಇತಿಹಾಸವನ್ನು ಪರಿಚಯಿಸುತ್ತಾ ಜನರೊಳಗೆ ಸ್ವ-ಅಭಿಮಾನದ ಆವೇಶವನ್ನು

ತುಂಬುವ ಕೆಲಸ ಕನ್ನಡ ಸಂಸ್ಕೃತಿ ಚಿಂತಕರ ಮುಖ್ಯ ಉದ್ದೇಶವಾಗಿತ್ತು. ಹಾಗೆ ನೋಡಿದರೆ ಇದು ಕಾಲದ ದೃಷ್ಟಿಯಿಂದ ಮಹತ್ವದ್ದೇ ಆಗಿದೆ.

ಕಂನಾಡ ಸಂಸ್ಕೃತಿ ಕುರಿತ ಚಿಂತನೆಗೆ ಬಳಸಿಕೊಳ್ಳುವ ಆಕರಗಳು ಬೇರೆ ಬೇರೆಯಾಗಿದ್ದರೂ; ಮುಖ್ಯವಾಗಿ ದಾಖಲೆ(ಲಿಖಿತ)ಗಳನ್ನೇ ಪ್ರಮಾಣಭೂತವಾಗಿ ಬಳಸಿಕೊಂಡು ಸಂಸ್ಕೃತಿಯ ವಿಶ್ಲೇಷಣೆಗೆ ತೊಡಗಿದ್ದಾರೆ. 'ಮಾರ್ಗಮುಖಿ' ಸಂಶೋಧನೆಗೆ ಒತ್ತು ಕೊಟ್ಟು ಅದರ ಇನ್ನೊಂದು ಮಗ್ಗುಲನ್ನು ಗಮನಿಸಲಿಲ್ಲವೆನ್ನಬಹುದು. ಎಂಪಿರಿಯಲಿಸ್ಟ್ ಮಾದರಿಯ ಸಂಶೋಧನೆ ಲಿಖಿತ ದಾಖಲೆಗಳನ್ನು ಗಮನಿಸಿ ಅವನ್ನೇ ಸಂಸ್ಕೃತಿ ವಕ್ತಾರರನ್ನಾಗಿ ಮಾಡಿಕೊಂಡು ಬಿಡುತ್ತದೆ. ಇದೇ ಸಮಯದಲ್ಲಿ ಬದುಕಿದ್ದ ಅಲಿಖಿತ ಮೌಖಿಕ ಆಕರಗಳತ್ತ ನಿರ್ಲಕ್ಷ್ಯದಿಂದ ನೋಡಲಾಗುತ್ತಿತ್ತು. ಈ ಬಗೆಯ ಸಂಶೋಧನೆಗಳು ಸಂಸ್ಕೃತಿಯ ಅಸಂಖ್ಯಾತ ಸೃಜನ ಕ್ರಿಯೆಗಳಿಗೆ ನ್ಯಾಯವನ್ನು ಒದಗಿಸುವುದಿಲ್ಲ.

ಕಾಲದ ದೃಷ್ಟಿಯಿಂದ ಸಾಂಸ್ಕೃತಿಕ ಇತಿಹಾಸವನ್ನು ಅದರ ವೈಭವದ ಆದರ್ಶದ ನೆಲೆಯಲ್ಲಿ ಗುರುತಿಸಿ, ಆ ಮೂಲಕ ಆಗಿನ ಜನರಲ್ಲಿ ಜನಜಾಗೃತಿ ಮೂಡಿಸುತ್ತಾ, ಕರ್ನಾಟಕ ಏಕೀಕರಣದ ಚಳುವಳಿಗೆ ಪ್ರೇರಣೆ ದೊರಕಿಸಿಕೊಡುವ ಪ್ರಯತ್ನ ನಡೆದಿತ್ತಷ್ಟೆ. ಈ ಎಲ್ಲ ವೈಭವ ಆದರ್ಶದ ಹಿಂದೆ ಏನಾದರೂ ತಥ್ಯವೆಂಬುದು ಇದೆಯೇ? ಕನ್ನಡ ನಾಡು ಗೋದಾವರಿವರೆಗೆ ಹಬ್ಬಿತ್ತು, ಅದರಲ್ಲಿಯ ಜನರು ಸದ್ಗುಣಿಗಳು, ವಿವೇಕಿಗಳು, ವಿವೇಕಶೀಲರು, ಎಂಬ ಮಾತು ಬರಿಯ ಮಾತೇ? ಹಾಗಿದ್ದರೆ ಅಂತಹ ನಾಡು-ಜನರು ಇಂದು ತಮ್ಮತನದ 'ಅರಿವು' ಮರೆತಿರಲು ಕಾರಣವೇನು? ಈ ಎಲ್ಲದರ ಅರಿವು ಮರೆಯಾಗಲು ಕಾರಣಗಳನ್ನು ಹುಡುಕುವುದೇ ಶಂಬಾ ಜೋಶಿಯವರಿಗೆ ಮುಖ್ಯವಾಗುತ್ತದೆ. 'ಕಂನಾಡು ಸಂಸ್ಕೃತಿ' ಗ್ರಹಿಕೆಯ ಹಿಂದೆ ಈ ಮನೋಭಾವವೇ ಎದ್ದು ಕಾಣುತ್ತದೆ.

ಸಂಸ್ಕೃತಿಯೆನ್ನುವುದು ವಿಶ್ವಕರ್ಮನ ಉಳಿಯ ಪೆಟ್ಟು ತಿಂದು ರೂಪಗೊಂಡ ಶಿಲ್ಪದಂತೆ. ಅದನ್ನು ಮಾನವ ಕ್ಷಣಶಃ ಕಣಶಃ ಚ ಏವ ವಿದ್ಯಾಂ ಅರ್ಥ ಚ" ದಂತೆ ಸಾಧಿಸುತ್ತಾ ಬಂದಿದ್ದಾನೆ ಭಾಷೆಯೊಡನೆ 'ಸಂಸ್ಕೃತಿ'ಯು ಆರಂಭ; ಇವೆರಡಕ್ಕೂ ಬೇರೆ ಬೇರೆ ಆಕೃತಿಗಳಿದ್ದರೂ, 'ಸಂಸ್ಕೃತಿ'ಯು ಭಾಷೆಯ ಮಾಧ್ಯಮದ ಮೂಲಕ ಸ್ವತಂತ್ರ ರೂಪ ಪಡೆದು ಮೈದಾಳುತ್ತದೆ. ಭಾಷೆಯಿಲ್ಲದಿದ್ದರೆ, ಸಂಸ್ಕೃತಿಗೆ ಸ್ವತಂತ್ರ ಆಸ್ತಿತ್ವವಿಲ್ಲ. ಕಂನಾಡಿನ, ಕಂನುಡಿಯು ಮೈದಾಳಿದ ಸ್ಥಳ-ಕಾಲಗಳ ಮೂಲವನ್ನು ಊಹಿಸುತ್ತಾ, ಆ ಮೂಲಕ ಕಂನಾಡಿನ ಜನಾಂಗದ 'ಸಂಸ್ಕೃತಿ'ಯ ಕುರಿತು ಶಂಬಾ ಅನ್ವೇಷಣೆಗೆ ತೊಡಗಿರುವುದನ್ನು ಕಾಣಬಹುದು.

'ಇವತ್ತು' ರೂಪುಗೊಳ್ಳಲು 'ನಿನ್ನೆ'ಗಳು ಕಾರಣವಾಗಿದ್ದು; ನಿನ್ನೆಗಳನ್ನು ತಿಳಿಯುವುದರ ಮೂಲಕ ಇವತ್ತಿನ ಸ್ಥಿತಿ ಅರಿಯಲು ಸಾಧ್ಯವಾಗುತ್ತದೆ. ನಮ್ಮ ಸಂಸ್ಕೃತಿಯ ನಿನ್ನೆಗಳನ್ನು ಅರಿಯದವರಿಗೆ ಇಂದಿನ ಸ್ಥಿತಿಯ ಸ್ವರೂಪದ ಆಕೃತಿ ಅರ್ಥವಾಗುವುದಿಲ್ಲ ನಿನ್ನೆಗಳನ್ನು ಅರ್ಥೈಸಿಕೊಳ್ಳಲು ಮುಕ್ತ ಮನಸ್ಸುಬೇಕು. ಸಹಸ್ರಾರು ವರ್ಷಗಳಿಂದ ಸಾಗಿ ಬಂದ ಸನಾತನ ಪರಂಪರೆಯನ್ನು, ಆದರ ಬಗೆಗಿನ ಎಲ್ಲ ಅಭಿಮಾನವನ್ನು ಪಕ್ಕಕಿಟ್ಟು ವಿಮರ್ಶಿಸುವ ನೈತಿಕ ಹೊಣೆಗಾರಿಕೆ ಬೇಕಾಗುತ್ತದೆ. ಆದರೆ ನಮ್ಮ ಬಹುತೇಕ ಸಂಸ್ಕೃತಿ ಚಿಂತನಗಳು ಇದನ್ನು ಮೀರದೇ ಅದರೊಳಗಿಂದಲೇ ವಿವರಿಸಿಕೊಳ್ಳುವ ಕಾರ್ಯಕ್ಕೆ ಕೈ ಹಾಕಿ ಆದರ್ಶದ ಚಿತ್ರಣವನ್ನೇ ಕಟ್ಟಿಕೊಡಲು ಪ್ರಯತ್ನಿಸುವ ನೆಲೆಯಲ್ಲಿ ನಿಂತು ಬಿಡುತ್ತವೆ. ನಿನ್ನೆಯ ಆಕೃತಿಗಳನ್ನು ವೈಚಾರಿಕ ದೃಷ್ಟಿಕೋನದಿಂದ ವಿವರಿಸುವ ಒರೆಗೆ ಹಚ್ಚಿ ನೋಡುವ ಎದೆಗಾರಿಕೆಯನ್ನು ಶಂಬಾ ಪ್ರಕಟಪಡಿಸಿದ್ದು ನಿಜಕ್ಕೂ ಅನುಕರಣೀಯವಾದದ್ದು. ಆದರೆ ಆ ಮಾರ್ಗದ ಹಾದಿ ಅವರೊಬ್ಬರಿಗೆ ಸೀಮಿತವಾಗಿದ್ದು ಮಾತ್ರ ನಮ್ಮಗಳ ದೌರ್ಭಾಗ್ಯವೆನ್ನಬಹುದು.

ನವೋದಯದ ಉತ್ಕರ್ಷ ಕಾಲವು ನಾಡು-ನುಡಿ-ಸಂಸ್ಕೃತಿಯ ಬಗೆಗೆ ಅಪಾರವಾದ ಅಭಿಮಾನ ಇಟ್ಟುಕೊಂಡು ಕೃತಿರಚನೆಯಾಗುತ್ತಿದ್ದ ಕಾಲವಾಗಿತ್ತು. ಕರ್ಣಾಟಕ ಏಕೀಕರಣಕ್ಕೆ ಜವರಲ್ಲಿ ಸ್ಥೈರ್ಯ-ಧೈರ್ಯದ ಕಿಚ್ಚನ್ನು ತುಂಬುತ್ತಿದದ್ದು ಇಂತಹ ಸಮಯದಲ್ಲಿಯೇ. ಮರೆತುಹೋದ ಇತಿಹಾಸ ಹಾಗೂ ಐತಿಹಾಸಿಕ ಸ್ಮಾರಕಗಳನ್ನು ಗುರುತಿಸುತ್ತಾ, ಕನ್ನಡಿಗರ ಪರಂಪರೆಯನ್ನು ಸಂಸ್ಕೃತಿಯ ಹಿರಿಮೆ-ಗರಿಮೆಯನ್ನು ಸಾರುವ ಕಾಲವೂ ಇದಾಗಿತ್ತು. ಇಂತಹ ಕಾಲದಲ್ಲಿ ಬದುಕಿದ್ದ ಶಂಬಾ,. ಇವರೆಲ್ಲ ಹೇಳಿಕೊಳ್ಳತ್ತಿದ್ದ ಕನ್ನಡ ನಾಡು, ನುಡಿ, ಎಂಬ ಶಬ್ದಗಳು ಸರಿಯೇ ಎಂದು ಆಲೋಚಿಸುತ್ತಾ, ಅತಿಯಾದ ಸ್ವ-ಅಭಿಮಾನದಿಂದ ಹೊರಗುಳಿದು ಹೊಸ ರೀತಿಯ ಚಿಂತನೆಗೆ ತೊಡಗಿಕೊಂಡರು. ಆದರೂ ಅವರಿಗೆ ಆ ಕಾಲದ ಆವೇಶವನ್ನು ಮೀರಲು ಸಾಧ್ಯವಾಗಲಿಲ್ಲ ಎಂದೇ ಹೇಳಬೇಕು. ಒಂದು ಕಾಲದ ಪರಿಸ್ಥಿತಿಯು ಆ ಕಾಲದಲ್ಲಿ ಬದುಕಿದ್ದ ಸಾಹಿತಿ ಅಥವಾ ಲೇಖಕನ ಮೇಲೆ ಆಗಿಯೇ ಆಗುತ್ತದೆ. ಇದಕ್ಕೆ ಹೊರತಾಗಿ ಶಂಬಾ ಕೂಡ ನಿಲ್ಲಲಿಲ್ಲ ಎನ್ನಬೇಕು.

ಕನ್ನಡದ ಕೊಲಂಬಸ್, ತಾರ್ಕಿಕ ಚಿಂತನೆಯಲ್ಲಿ ಸಾಕ್ರೇಟಿಸಗೆ ಹೋಲಿಸಬಹುದೆಂದೂ ಹೇಳಿಕೊಂಡರೂ, ಅವರ ಮಾರ್ಗ ಅವರಿಗೆ ಮಾತ್ರ ಸೀಮಿತಗೊಂಡಿದೆ. ಈ ಅರ್ಥದಲ್ಲಿ 'ಒಂಟಿಸಲಗ'ವೆನಿಸಿಕೊಂಡರೆ ಆಶ್ಚರ್ಯವೇನಲ್ಲ. ಕನ್ನಡ ಸಂಸ್ಕೃತಿಗೆ ತಮ್ಮದೇ ಆದ ಹೊಸ ರೀತಿಯ ಆಲೋಚನೆಗಳಿಂದ ಅನ್ವೇಷಣೆಗೆ ತೊಡಗಿಕೊಂಡ; ಆ ಮೂಲಕ ಏಕೀಕರಣದ ಕೆಲಸವನ್ನು ಇನ್ನೂ

ಸಮರ್ಥವಾಗಿ ನಿರ್ವಹಿಸಿದರೆನ್ನಬೇಕು. ಕನ್ನಡಿಗರಲ್ಲಿ ಅರಿವನ್ನು ಉಂಟು ಮಾಡಲು, ಕನ್ನಡವೆಂದರೇನು? ನಾಡೋ-ನುಡಿಯೋ? ಈ ಕನ್ನಡ ಸಾಗಿಬಂದ ಹಾದಿ; ಹಾಗೆ ಸಾಗಿ ಬರುವಾಗ ಆದ ಸ್ಥಿತ್ಯಂತರಗಳು; ಇದರ ಮೂಲ ನೆಲೆ ಮುಂತಾದ ವಿಷಯಗಳನ್ನು ಕುರಿತು ಸಮಕಾಲೀನರಿಗಿಂತ, ಮುಂದುವರೆದು ಯೋಚಿಸುವ ಸಾಹಸ ಮಾಡಿದರು. ಈ ದೃಷ್ಟಿಯಿಂದಲೇ ಉಳಿದವರಿಗಿಂತ ಭಿನ್ನವಾಗಿ ಅವರನ್ನು ಗುರುತಿಸಲಾಗುತ್ತದೆ.

ಕರ್ಣಾಟಕ-ಮಹಾರಾಷ್ಟ್ರದ ದೇಶ, ಸ್ಥಳನಾಮ, ಭಾಷಾವಾಚಕ ಪದಗಳನ್ನು ಹೊಸ ರೀತಿಯಿಂದ ವಿಮರ್ಶಿಸಿ, ಕರ್ಣಾಟಕಕ್ಕೆ'ಕನ್ನಾಡು' ವೆಂದು ಅದರ ಭಾಷೆಗೆ 'ಕಂನುಡಿ' ಎಂದು ಪುನರ್ ನಾಮಕರಣ ಮಾಡಿದರು. ದ್ರಾವಿಡ ಸಂಸ್ಕೃತಿಗೆ 'ಕಂದಮಿಳಸಂಸ್ಕೃತಿ' ಎಂಬ ಪದವನ್ನು ಸೂಚಿಸಿಕೊಂಡರು.

ಕಂದಮಿಳ ಸಂಸ್ಕೃತಿಯ ಒಡಲಿನಲ್ಲಿಯೇ ಕಂನಾಡ ಸಂಸ್ಕೃತಿಯು ರೂಪುಗೊಂಡು ಬಂದಿದ್ದರೂ ಅದು ತನ್ನದೇ ಆದ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡು ಬರುತ್ತಿದೆ. ತನ್ನ ನೆಲದಲ್ಲಿ ಇತರರನ್ನು ಬಾಳಲು ಬಿಟ್ಟು ಅಲ್ಲಿಂದ ಹೊರಬಂದಿದೆ. ಮರಾಠಿ ಸಂಸ್ಕೃತಿಗೆ ಮೂಲ ಕನ್ನಡ ಸಂಸ್ಕೃತಿಯೇ ಆಗಿದೆ; ಇಂತಹ ಸತ್ಯವನ್ನು ಮರಾಠಿ ಮನಸ್ಸು ಒಪ್ಪಿಕೊಳ್ಳಲು ಹಿಂಜರಿದರೂ ಶಂಬಾ ಕೊಡುವ ಆಧಾರಗಳು ತರ್ಕಗಳು 'ಹೌದು' ಎನ್ನುವಂತೆ ಮಾಡುತ್ತವೆ. ಈ ಸತ್ಯಗಳನ್ನು ತೋರಿಸಲು ಬಳಸುವ ಆಕರಗಳು ವಿಪುಲವಾದವುಗಳು. ವೇದ, ದೈವತ ಪ್ರತಿಮೆ, ಸಂಕೇತಗಳು, ಸ್ಥಳನಾಮಗಳು, ಭಾಷಿಕ ನೆಲೆಗಳು, ಶಾಸನ, ರೂಢಿ-ಸಂಪ್ರದಾಯ, ಆಚಾರ-ವಿಚಾರ, ವಿದೇಶಿಯರ ಬರಹಗಳು ಹೀಗೆ ಎಲ್ಲಿಂದ ಎಲ್ಲಿಗೂ ಸಂಬಂಧವನ್ನು ಕಲ್ಪಿಸುತ್ತಾ 'ಕಂನಾಡ ಸಂಸ್ಕೃತಿ'ಯನ್ನು ಪುನಾರಚಿಸಲು ಪ್ರಯತ್ನಿಸುತ್ತಾರೆ. ಈ ರೀತಿಯ ಆಕರಗಳ ವಿಪುಲತೆಯನ್ನು ಬಳಸಿಕೊಂಡಿದ್ದರಿಂದ; ಉಳಿದವರು ತಲುಪದ 'ಸಂಸ್ಕೃತಿ'ಯ ಮೂಲನೆಲೆಗಳ ಕಡೆಗೆ ದೃಷ್ಟಿ ಹಾಯಿಸುವಂತೆ ಮಾಡಿತು ಎನ್ನಬಹುದು.

ತಮಗೆ ಸಿಕ್ಕಷ್ಟು ಆಧಾರಗಳನ್ನು, ಮಾಹಿತಿಗಳನ್ನು, ಪ್ರಮಾಣೀಕವಾಗಿ ವಿಶ್ಲೇಷಿಸಿ ಕಂನಾಡ ಸಂಸ್ಕೃತಿಯ ರಚನೆಗೆ ಕೈ ಹಾಕುತ್ತಾರೆ. ಹಾಗೆ ನೋಡಿದರೆ, ಅವರು ಕೊಡುವ ಎಲ್ಲ ಅದಾರಗಳು ಸತ್ಯವಾದುದೆಂದೇನೂ ಅಲ್ಲ. ಕೆಲವೊಮ್ಮೆ ಅವರ ಊಹೆ-ತರ್ಕಗಳು ವಿಪರೀತವೆನಿಸಿ ನಮ್ಮನ್ನು ಗೊಂದಲದಲ್ಲಿ ಕೆಡಹುತ್ತವೆ. 'ರೆ'ಗಳ ಪ್ರಪಂಚವನ್ನು ಎದುರಿಗಿಟ್ಟುಕೊಂಡು ಆ ಮೂಲಕ ತಮ್ಮ ವಿಶ್ಲೇಷಣೆಗೆ ತೊಡಗುತ್ತಾರೆ. ಇದೂ ಒಂದು ಒಗೆಯ ಅನುಮಾನಿತ್ಯ ಸತ್ಯದ ಅಧ್ಯಯನಾತ್ಮಕ ನೆಲೆ.

'ಕಂನಾಡು ಸಂಸ್ಕೃತಿ' ಎಂದರೆ ಮಾನವ ಜೀವನದ ಇತಿಹಾಸವೇ ಆಗಿದೆ. ಇಲ್ಲಿಯ(ಬದುಕಿದ್ದ)ಜನರ ಏಳು-ಬೀಳುಗಳನ್ನು ಅರಿಯುವುದರ ಮೂಲಕ ಇಡೀ 'ಮಾನವ ಸಂಸ್ಕೃತಿಯ' ಕಡೆಗೆ ವಾಲುತ್ತಾರೆ. ಇದುವರೆಗಿನ ಸಂಸ್ಕೃತಿ ಅಧ್ಯಯನಗಳು ಮೂಲತಃ ಘಟನಾವಳಿಗಳ ಅಧ್ಯಯನವಾಗಿದ್ದು; ಏಕಘನಾಕೃತಿಯಾಗಿ 'ಸಂಸ್ಕೃತಿ'ಯನ್ನು ವಿವರಿಸಿಕೊಳ್ಳುವ ಹಂತದಲ್ಲಿಯೇ ನಿಂತಿವೆ ಹೊರತು, ವರ್ತಮಾನದ ಜನದ ಭಾಷೆ ಆಚಾರ-ವಿಚಾರಗಳನ್ನು ಗಮನಿಸುವುದಿಲ್ಲ. ಹಿಂದಿನ ಬದುಕನ್ನು ಅರ್ಥಮಾಡಿಕೊಳ್ಳಲು ಇತಿಹಾಸದ ಪಾತ್ರ ಆಗತ್ಯವಾದರೂ, ಇತಿಹಾಸವೇ ಸಂಸ್ಕೃತಿ ಆಗಲಾರದು. ಆ ಮೂಲಕ ಸಂಸ್ಕೃತಿ ಅಧ್ಯಯನ ಹೆಚ್ಚು ಪ್ರಸ್ತುತವಾಗಬೇಕಾದರೆ, ಇತಿಹಾಸವನ್ನು ಗಮನಿಸುವುದು ಅವಶ್ಯವಾಗಿರುತ್ತದೆ. ಶಂಬಾ ಹೇಳುವಂತೆ, ಇತಿಹಾಸವನ್ನು ದುರ್ಲಕ್ಷಿಸಿದ್ದರಿಂದಲೇ ನಾವಿಂದು ಕೀಳು ಸ್ಥಿತಿಗೆ ತಲುಪಿದ್ದೇವೆ; ಇತಿಹಾಸವನ್ನು ಸರಿಯಾಗಿ ಅರ್ಥಮಾಡಿಕೊಂಡು 'ಕಂನಾಡ ಸಂಸ್ಕೃತಿ' ಪುನಾರಚನೆಗೆ ಕೈ ಹಾಕುತ್ತಾರೆ.

ಕಂನಾಡ ಸಂಸ್ಕೃತಿಗೆ ಸಂಬಂಧಿಸಿದ ಅವರ ಎಲ್ಲ ಕೃತಿಗಳು, ಒಂದು ಬಗೆಯ ಭಾವುಕತೆಯನ್ನೇ ಸೂಚಿಸುತ್ತವಾದರೂ, ಅನೇಕ ಅಧ್ಯಯನದ ಒಳಹುಗಳತ್ತ ನಮ್ಮ ದೃಷ್ಟಿಯನ್ನು ಹರಿಸುವಂತೆ ಮಾಡುತ್ತವೆ. ಆಗಿನ ಕಾಲದ ಇತರ ಚಿಂತಕರಂತೆ ಕನ್ನಡತನವನ್ನು ಎಚ್ಚರಿಸುವುದೇ ಮುಖ್ಯವಾಗಿತ್ತು ಎಂಬುದನ್ನು ಮರೆಯುವಂತಿಲ್ಲ. 'ಭಾಷೆ'ಯನ್ನು ಪ್ರಮುಖ ಆಕರವನ್ನಾಗಿ ಮಾಡಿಕೊಂಡು ಆ ಮೂಲಕ ಅರ್ಥದ ಅನ್ವೇಷಣೆ, ಕಾರಣಾನ್ವೇಷಣೆ ಮಾಡುತ್ತಾ 'ಕಂನಾಡ ಸಂಸ್ಕೃತಿ' ಕಡೆಗೆ ಹೊರಳಿರುವುದನ್ನು ಗುರುತಿಸಬಹುದು. ಒಟ್ಟಾರೆ ಅವರ ಎಲ್ಲ ಅಧ್ಯಯನಕ್ಕೆ ಮೂಲ 'ಕಂನಾಡ ಸಂಸ್ಕೃತಿ' ಎನ್ನುವುದನ್ನು ಮರೆಯುವಂತಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತ ನಿಬಂಧವು ಯೋಚಿಸಲು ತೊಡಗಿದೆ.

ಪರಾಮರ್ಶನ ಗ್ರಂಥಗಳು

೧. ಆಲೂರು ವೆಂಕಟರಾಯರು, ೧೯೬೪, *ಕರ್ನಾಟಕ ವೈಭವ,* ಸಮಾಜ ಪುಸ್ತಕಾಲಯ, ಧಾರವಾಡ

೨. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, *ಕನ್ನಡ ಪರಂಪರೆ,* ಮೈಸೂರು

೩. ಕಪಟರಾಳ ಕೃಷ್ಣರಾವ, ೧೯೭೦, *ಕರ್ನಾಟಕ ಸಂಸ್ಕೃತಿ ಸಂಶೋಧನೆ,* ವಿದ್ವಾನ್ ಕುರುಡಿ ಹನುಮಂತಾಚಾರ್ಯ (ಸಂ). ಉಷಾ ಸಾಹಿತ್ಯ ಮಾಲೆ, ಮೈಸೂರು

೪. ಕನ್ನಡ ಅಧ್ಯಯನ ಸಂಸ್ಥೆ, ೧೯೭೪, *ಕನ್ನಡ ಸಾಹಿತ್ಯ ಚರಿತ್ರೆ,* ಸಂಪುಟ ೧, ಮೈಸೂರು ವಿಶ್ವವಿದ್ಯಾಲಯ ಮೈಸೂರು.

೫. ಕುಲಕರಣೆ ಪ್ರ.ಗೋ, ೧೯೬೭, *ಕನ್ನಡ ಭಾಷೆಯ ಚರಿತ್ರೆ,* ಕುಲಕರ್ಣಿ ಟಿ.ಎ., ನೂತನ ಪ್ರಿಟಿಂಗ್ ಪ್ರೆಸ್, ಬೆಳಗಾಂ

೬. ಕೃಷ್ಣಶರ್ಮ ಬೇಟಗೇರಿ, ೧೯೮೩, *ಕರ್ನಾಟಕ ಜನಜೀವನ,* ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ, ಸಾಹಿತ್ಯ ಮಾಲೆ ೬೫, ಕರ್ನಾಟಕ ಸರ್ಕಾರ

೭. ಗುಂಡಪ್ಪ ಡಿ.ವಿ., ೧೯೮೭, *ಡಿ.ವಿ.ಜಿ. ಸಮಗ್ರ ಕೃತಿಶ್ರೇಣಿ,* ಹಾ.ಮಾ.ನಾಯಕ (ಸಂ). ಸಂಪುಟ ೧, ವಿಚಾರ ವಿಮರ್ಶೆ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೮. ಗೋವಿಂದರಾಜು ಸಿ.ಆರ್., ೧೯೯೫, *ಕನ್ನಡ - ಕರ್ನಾಟಕತ್ವ, ಆಲೂರು ವೆಂಕಟರಾಯರ -ಚಿಂತನೆಗಳು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

೯. ಚಿದಾನಂದಮೂರ್ತಿ ಎಂ. (ಸಂ). ೧೯೮೦, *ಅಧ್ಯಯನ* ಶಂಬಾ ಅಭಿನಂದನಾ ಗ್ರಂಥ, ಡಾ. ಶಂಬಾ ಜೋಶಿ ಸನ್ಮಾನ ಸಮಿತಿ, ತಿಂಮನ ಮನೆ, ನಂಜಪ್ಪ ರಸ್ತೆ, ಶಾಂತಿನಗರ, ಬೆಂಗಳೂರು.

೧೦. ಚಿದಾನಂದಮೂರ್ತಿ ಎಂ., ೧೯೯೧, *ಕರ್ನಾಟಕ ಸಂಸ್ಕೃತಿ,* ಕ.ಸಾ.ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೧೧. ತಿಪ್ಪೇರುದ್ರಸ್ವಾಮಿ ಎಚ್., ೧೯೯೨, *ಕರ್ನಾಟಕ ಸಂಸ್ಕೃತಿ ಸಮೀಕ್ಷೆ,* ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು

೧೨. ತಿಮ್ಮಪ್ಪಯ್ಯ ಮುಳಿಯ, ೧೯೭೪, *ಕರ್ನಾಟಕ ಸಂಸ್ಕೃತಿ,* ಕ.ಸಾ.ಪರಿಷತ್, ಚಾಮರಾಜ ಪೇಟೆ, ಬೆಂಗಳೂರು

೧೩. ಧಾರವಾಡಕರ ರಾ.ಯ. ೧೯೯೦, *ಕನ್ನಡ ಭಾಷಾ ಶಾಸ್ತ್ರ,* ಗೀತಾ ಬುಕ ಹೌಸ್, ಮೈಸೂರು.

೧೭. ನರಸಿಂಹಶಾಸ್ತ್ರಿ ದೇವುಡು, ೧೯೮೮, *ಕರ್ನಾಟಕ ಸಂಸ್ಕೃತಿ,* ಶಾರದ ಪ್ರಕಾಶನ, ಗಾಂಧಿನಗರ, ಬೆಂಗಳೂರು

೧೪. ನಾಗರಾಜು ಡಿ.ಆರ್., ೧೯೯೩, ಲೇಖನ, *ವೇದ: ಆಪ್ತವಾಗದೆ ಹೋದ ಮತ್ಸ್ಯಕನ್ಯೆಯ ವಿಷಾದಗೀತ,* [''ಧರ್ಮಚಕ್ರ - ಋಗ್ವೇದದ ಇತಿಹಾಸದರ್ಶನ - ಪ್ರೊ. ಜೆ.ಎನ್. ಚಕ್ರವತಿ] ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೧೮. ನಾಯಕ ಹಾ.ಮಾ. (ಪ್ರಧಾನ ಸಂಪಾದಕ), ೧೯೮೩, *ಆಲೂರು ವೆಂಟಕರಾಯರು* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೫. ನಾಗರಾಜಯ್ಯ ಹಂಪ, ೧೯೯೧, *ದ್ರಾವಿಡ ಭಾಷಾವಿಜ್ಞಾನ* ಲಕ್ಷ್ಮಿ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು

೧೬. ನೆಹರೂ, ೧೯೪೭, *ಭಾರತ ದರ್ಶನ ಭಾಗ I*, ಕೃಷ್ಣಮೂರ್ತಿ (ಅನು). ಪ್ರಕಾಶಕರು ಕಾವ್ಯಾಲಯ, ಮೈಸೂರು

೧೯. ಬೆನಡೆಕ್ಟರೂತ, ೧೯೭೮, *ಸಂಸ್ಕೃತಿ ರೂಪಿಕೆಗಳು*, ಶಂಕರನಾರಾಯಣ ಎನ್.ಪಿ. (ಅನು). ಕನ್ನಡ ಅಧ್ಯಯನ ವಿಭಾಗ, ಕೃಷಿವಿಶ್ವವಿದ್ಯಾಲಯ, ಬೆಂಗಳೂರು

೨೦. ಬೇಂದ್ರೆ ದ.ರಾ., ೧೯೭೪, *ಸಾಹಿತ್ಯದ ವಿರಾಟಸ್ವರೂಪ* ವಾಮನ ಬೇಂದ್ರೆ (ಸಂ), ಸಮಾಜ ಪುಸ್ತಕಾಲಯ, ಧಾರವಾಡ

೨೧. ಮರುಳಯ್ಯ ಸಾ.ಶಿ., ೧೯೯೨, *ಕನ್ನಡ ಭಾಷಾ ಚರಿತ್ರೆ* ರಾಗಿಣಿ ಶಿಕ್ಷಣ ಪ್ರತಿಷ್ಠಾನ ವಿಜಯನಗರ ಎರಡನೇ ಹಂತ ಬೆಂಗಳೂರು

೨೨. ಮಲ್ಲೇಪುರಂ ಜಿ.ವೆಂಕಟೇಶ (ಸಂ). ೧೯೯೪, *ಪಾತಳಿ* ಶಂಬಾ ವಿಚಾರ ವೇದಿಕೆ, ಬೆಂಗಳೂರು

(೨) (ಸಂ). ೧೯೯೨, *ಶಂಬಾ ಕೃತಿ ಸಮೀಕ್ಷೆ*, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು

(೩) ೧೯೯೩, *ಸಂಸ್ಕೃತಿ ಮತ್ತು ಶಂಬಾ* ಸಾಹಿತ್ಯ ಭಂಡಾರ, ಜಂಗಮ ಮೇಸ್ತ್ರಿಗಲ್ಲಿ, ಬಳೇಪೇಟೆ, ಬೆಂಗಳೂರು

೨೩. ಮಾಸ್ತಿ ವೆಂಕಟೇಶ ಐಯ್ಯಂಗಾರ, ೧೯೭೩, *ಜನತೆಯ ಸಂಸ್ಕೃತಿ*, ಜೀವನ ಕಾರ್ಯಾಲಯ, ಬೆಂಗಳೂರು

೨೪. ಪುಟ್ಟಪ್ಪ ಕೆ.ವಿ. (ಸಂ). ೧೯೭೦, *ಯುಗಯಾತ್ರಿ ಭಾರತೀಯ ಸಂಸ್ಕೃತಿ* ಸಂಪುಟ-೧, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨೫. ರೆಹಮತ್ ತರೀಕೆರೆ, ೧೯೯೩, *ಪ್ರತಿ ಸಂಸ್ಕೃತಿ* ಕನ್ನಡ ಸಂಘ, ಕ್ರೈಸ್ತ ಕಾಲೇಜು, ಬೆಂಗಳೂರು

೨೬. ರೇಣುಕ ಪ್ರಸಾದ್ ಪಿ.ಆರ್., ೧೯೯೪, *ಕನ್ನಡ ಚಿಂತನೆಯಲ್ಲಿ ಸಂಸ್ಕೃತಿ ವ್ಯಾಖ್ಯಾನಗಳು* ಎಂ.ಫಿಲ್. ನಿಬಂಧ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

೨೭. ಲಕ್ಷ್ಮಣ ತೆಲಗಾವಿ (ಸಂ). ೧೯೯೧, *ಸಂಶೋಧನ* ಎಂ. ಚಿದಾನಂದಮೂರ್ತಿ ಗೌರವ ಸಂಪುಟ, ಡಾ. ಎಂ.ಚಿದಾನಂದಮೂರ್ತಿ ಅಭಿನಂದನಾ ಸಮಿತಿ, ೩ ರಾಗಿಣಿ ಸರ್ವೀಸ್ ರಸ್ತೆ, ವಿಜಯನಗರ ೨ನೇ ಹಂತ, ಬೆಂಗಳೂರು

೨೮. ಲಿಂಗಣ್ಣ ಸಿಂಪಿ, ೧೯೬೭, *ಭಾರತೀಯ ಸಂಸ್ಕೃತಿ ಸಂಘಟನೆ* ಬುರ್ಲಿ ಬಿಂದು ಮಾಧವ (ಸಂ). ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ

೨೯. ವೆಂಕಟಾಚಲ ಶಾಸ್ತ್ರಿ ಟಿ.ವಿ., ಲೇಖನ: *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*, ೧೯೭೯, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೩೦. ವಿವಿಧ ಲೇಖಕರು, *ಕರ್ನಾಟಕ ವೈಭವ* ಆಕಾಶವಾಣಿ ಭಾಷಣ, ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಚಾರ ಸಚಿವಾಲಯದ ಪ್ರಕಾಶನ ವಿಭಾಗ

೩೧. ವಿವೇಕ ರೈ ಬಿ.ಎ., ೧೯೮೯, *ಮುಳಿಯ ತಿಮ್ಮಪ್ಪಯ್ಯನವರ ಸಾಹಿತ್ಯ*, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

೩೨. ಶ್ರೀಕಂಠ ಶಾಸ್ತ್ರಿ ಎಸ್., ೧೯೫೪, *ಭಾರತೀಯ ಸಂಸ್ಕೃತಿ* ಕುವೆಂಪು (ಪ್ರಧಾನ ಸಂಪಾದಕ), ಮೈಸೂರು ವಿಶ್ವವಿದ್ಯಾಲಯ, ಮೈಸೂರು

೩೩. ಹಿರೇಮಠ ಎಸ್.ಎಸ್., ೧೯೯೨, *ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ ೧*, ಸಮತಾ ಪ್ರಕಾಶನ, ಹರಪನಹಳ್ಳಿ

ಪತ್ರಿಕೆಗಳು

೧. *ಸಿರಿಗನ್ನಡ* ವಸಂತ ಸಂಚಿಕೆ, ೧೯೯೩, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಗೋವಿಂದರಾಜು ಸಿ.ಆರ್., ೧೯೯೬, *ಕರ್ನಾಟಕ ಸಂಸ್ಕೃತಿ ಗ್ರಹಿಕೆಯಲ್ಲಿರುವ ತೊಡಕುಗಳು*, ಸಂಕ್ರಮಣ (ನವೆಂಬರ್ ಡಿಸೆಂಬರ್ ೩೧,೧೧,೧೨, ಸಂಪಾದಕ ಚಂದ್ರಶೇಖರ ಪಾಟೀಲ

೩. ಲಿಂಗಯ್ಯ ಡಿ., ೧೯೯೬, *ಸ್ಥಳನಾಮಗಳ ಅದ್ಯಯನ ನಡೆದು ಬಂದ ದಾರಿ*, ಜಾನಪದ ಜಗತ್ತು, ಸ್ಥಳನಾಮಗಳ ಅದ್ಯಯನ ವಿಶೇಷ ಸಂಚಿಕೆ, ಅಕ್ಟೋಬರ್-ಡಿಶೆಂಬರ್ ೧೨,೪, ೧೯೯೬

೪. *ಕರ್ನಾಟಕ ಗೆಜಿಟಿಯರ್ ಭಾಗ I*, ಕರ್ನಾಟಕ ಸರ್ಕಾರ

ಅನುಬಂಧ

ಶಂಬಾ ಬದುಕಿನ ಮೈಲಿಗಲ್ಲುಗಳು

ಮತ್ತು

ಅವರ ಕೃತಿಗಳು

ಶಂಬಾ ಬದುಕಿನ ಮೈಲಿಗಲ್ಲುಗಳು

ಅ. ವ್ಯಕ್ತಿ ಜೀವನ

೧೮೯೬ ಜನನ, ಗುರ್ಲ ಹೊಸೂರು (ಬೆಳಗಾವಿ ಜಿಲ್ಲೆ) ಜನವರಿ ೪
ತಂದೆ: ಬಾಳದೀಕ್ಷಿತ ಜೋಶಿ

೧೯೧೧ ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸ, ಗುರ್ಲ ಹೊಸೂರು

೧೯೧೯ *ಟ್ರೈಂಡ್ ಕನ್ನಡ ಶಿಕ್ಷಕ,* (ಪ್ರಥಮ ದರ್ಜೆ, ಪ್ರಥಮ ಶ್ರೇಣಿಯೊಂದಿಗೆ) ಸರಕಾರೀ ಟ್ರೈನಿಂಗ್ ಕಾಲೇಜು, ಧಾರವಾಡ

೧೯೨೦ ಕನ್ನಡ ಶಿಕ್ಷಕನಾಗಿ ಕೆಲಸ ಮಾಡಿದ್ದು, ಚಿಕ್ಕೋಡಿ

೧೯೨೧ ಕರ್ನಾಟಕ ವೃತ್ತ, ಧನಂಜಯ ಪತ್ರಿಕೆಗಳಿಗೆ ಲೇಖನ ವ್ಯವಸಾಯ. ಕೆಲಕಾಲ ಕರ್ಮವೀರ ಪತ್ರಿಕೆಗೆ ಸಂಪಾದಕತ್ವ

೧೯೨೧ ಮದುವೆ: ಪತ್ನಿ; ಪಾರ್ವತೀ ಬಾಯಿ
ಮಕ್ಕಳು: ೨ ಗಂಡು, ೧ ಹೆಣ್ಣು

೧೯೨೬

೧೯೨೭ ಕನ್ನಡ ಶಿಕ್ಷಕನಾಗಿ ನೇಮಕ, ಕರ್ನಾಟಕ ಹೈಸ್ಕೂಲ್, ಧಾರವಾಡ

೧೯೨೮

೧೯೪೬ ಕನ್ನಡ ಶಿಕ್ಷಕ, ವಿಕ್ಟೋರಿಯಾ ಹೈಸ್ಕೂಲ್, ಧಾರವಾಡ

೧೯೯೧ ಮರಣ, ಧಾರವಾಡ, ಸೆಪ್ಟೆಂಬರ್ ೨೮

ಆ. ಸಾಹಿತ್ಯಕ ಜೀವನ

೧೯೧೯ *ಅವತಾರಿ,* ಪ್ರಥಮ ಲೇಖನದ ಪ್ರಕಟಣೆ

೧೯೨೧ ಪ್ರಥಮ ಕೃತಿ ಪ್ರಕಟಣೆ *ಮಹರ್ಷಿ ಅರವಿಂದ ಘೋಷರ ಚರಿತ್ರವು,* ಜೀವನ ಚರಿತ್ರೆ

೧೯೨೪ ಮೊದಲನೆಯ ಕರ್ನಾಟಕ ಏಕೀಕರಣ ಸಮ್ಮೇಳನದ ಕಾರ್ಯದರ್ಶಿ

೧೯೪೭ *ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ ಭಾಗ ೧,* ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೭೧ ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ

೧೯೮೧ ಅಧ್ಯಕ್ಷರು, ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ, ಮಡಿಕೇರಿ

೧೯೮೬ ರಾಜ್ಯೋತ್ಸವ ಪ್ರಶಸ್ತಿ

ಶಂಬಾ ಅವರ ಕೃತಿಗಳು

೧. *ಮಹರ್ಷಿ ಅರವಿಂದ ಘೋಷರ ಸಂಕ್ಷಿಪ್ತ ಚರಿತ್ರೆ,* (ಜೀವನ ಚರಿತ್ರೆ) ೧೯೨೧, ದಿ. ಕರ್ನಾಟಕ ಟ್ರೇಡಿಂಗ್ ಕಂ., ಧಾರವಾಡ.

೨. *ಉಪನಿಷತ ರಹಸ್ಯ,* ೧೯೨೮, (ಅನುವಾದ) ಮೂಲ. ಆರ್.ಡಿ. ರಾನಡೆ. ಅನು: ದಿವಾಕರ ಮತ್ತು ದ.ರಾ.ಬೇಂದ್ರೆ ಅವರೊಂದಿಗೆ ಧಾರವಾಡ.

೩. *ಟಿಳಕ ಕಥಾಮೃತಸಾರ,* ೧೯೩೨, (ಜೀವನ ಚರಿತ್ರೆ) ಲೋಕಮಾನ್ಯ ಸ್ಮಾರಕ ಮಂಡಳ ಧಾರವಾಡ.

೪. *ಕಣ್ಮರೆಯಾದ ಕನ್ನಡ,* ೧೯೩೩, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಬಿಡಿಮುತ್ತು ಪ್ರ: ಶಂಬಾ ಜೋಶಿ, ಸಾಧನಕೇರಿ, ಧಾರವಾಡ.

೫. *ಮಹಾರಾಷ್ಟ್ರ ಮೂಲ ಅಥವಾ ಮೂಲ ಮಹಾರಾಷ್ಟ್ರ,* ೧೯೩೪, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಪ್ರ: ಗೋವಿಂದ ವೆಂಕಟೇಶ ಚುಳಕಿ, ಸಾಧನಕೇರಿ, ಧಾರವಾಡ.

೬. *ಕರ್ನಾಟಕ ವೀರಕ್ಷತ್ರೀಯರು,* ೧೯೩೬, ಮನೋಹರ ಗ್ರಂಥ ಬಂಡಾರ ಧಾರವಾಡ. (ಮುಂದೆ ಕ.ಸಂ.ವೊ.ವೇ. ಪ್ರಸ್ತಾಪ ಹೆಸರಿನಲ್ಲಿ, ೧೯೬೬.

೭. *ಕಂನುಡಿಯ ಹುಟ್ಟು ಅಥವಾ ನಿರುಕ್ತಿ,* ೧೯೩೭, ಮಾಧವ ಬಲ್ಲಾಳ ಬಂಧುಗಳು ಸಾಧನ ಕೇರಿ, ಧಾರವಾಡ.

೮. *ಶಿವರಹಸ್ಯ,* ೧೯೩೯, ಶ್ರೀ.ಕೆ.ಜಿ.ರಾಯದುರ್ಗ, ಮೋಹನ ಮುದ್ರಣಾಲಯ, ಧಾರವಾಡ.

೯. *ಕಂನಡದ ನೆಲೆ,* ೧೯೩೯, ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ.

೧೦. *ರೂಢಿ ಹಾಗೂ ಭಾವಿಕ ಕಲ್ಪನೆಗಳು,* ೧೯೪೦, (ವೈಚಾರಿಕ) ಕೆಳೆಯರ ಕೂಟ, ಗೋಕರ್ಣ.

೧೧. *ಎದ್ದೇಳು ಕನ್ನಡಿಗಾ,* (ವೈಚಾರಿಕ) ೧೯೪೩, ರಾಷ್ಟ್ರಧರ್ಮ ಕಾರ್ಯಾಲಯ, ಧಾರವಾಡ.

೧೨. *ಅಗ್ನಿವಿದ್ಯೆ,* (ಶಾಂಡಿಲ್ಯಪ್ರಣೀತ) ವೈಚಾರಿಕ. ೧೯೪೬, ಮಾ.ಬ.ಬಂ.ಸಾ.ಧಾರವಾಡ.

೧೩. *ಕರ್ಣನ ಮೂರು ಚಿತ್ರಗಳು,* ೧೯೪೭. (ಸಾಹಿತ್ಯ ವಿಮರ್ಶೆ).

೧೪. *ಎಡೆಗಳು ಹೇಳುವ ಕಂನಾಡ ಕತೆಗಳು,* ೧೯೪೭.

೧೫. *ಯಕ್ಷಪ್ರಶ್ನೆ ಅಥವಾ ಅಥವಾ ಬರಲಿರುವ ಸಮಾಜ,* (ವೈಚಾರಿಕ) ೧೯೪೮, ಪರ್ಣಕುಟಿ ಗ್ರಂಥಮಾಲೆ ಧಾರವಾಡ.

೧೬. *ಸಮಾಜ ದರ್ಶನ,* ೧೯೪೯, (ವೈಚಾರಿಕ) ಬುರ್ಲಿಬಿಂದು ಮಾಧವ. ಮಿಂಚಿನ ಬಳ್ಳಿ ಪ್ರಕಾಶನ. ಧಾರವಾಡ.

೧೭. *ಸೌಂದರ್ಯ ವಿಚಾರ,* (ವೈಚಾರಿಕ) ೧೯೪೯. ಉ.ಕ.ಜಿಲ್ಲೆಯ ೨ನೇ ಸಾ.ಸ. ಕಾರವಾರ.

೧೮. *ಕಂನಡನುಡಿಯ ಜೀವಾಳ,* ೧೯೫೦, ಸರಸ್ವತಿ ನಿಲಯ, ಧಾರವಾಡ.

೧೯. *ದಾರಿಯ ಬುತ್ತಿ,* ೧೯೫೦, (ವೈಚಾರಿಕ) ಸಮಾಜ ಪುಸ್ತಕಾಲಯ, ಧಾರವಾಡ.

೨೦. *ಹಾಲುಮತ ದರ್ಶನ* (೧೯೬೦) ಪುನಃಮುದ್ರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೨೧. *ಮಕ್ಕಳ ಒಡಪುಗಳು,* ೧೯೬೬, ಮಾಧವ ಬಲ್ಲಾಳ ಬಂಧುಗಳು, ಧಾರವಾಡ.

೨೨. *ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ,* ಭಾಗ-೧ (೧೯೬೭) ಸಮಾಜ ಪುಸ್ತಕಾಲಯ, ಧಾರವಾಡ

೨೩. *ಋಗ್ವೇದ ಸಾರ; ನಾಗಪ್ರತಿಮಾ ವಿಚಾರ,* ೧೯೭೨, ಪ್ರಸಾರಾಂಗ. ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೪. *ಭಾಷೆ ಮತ್ತು ಸಂಸ್ಕೃತಿ;* ೧೯೭೫, ವಿದ್ಯಾವರ್ಧಕ ಸಂಘ. ಧಾರವಾಡ.

೨೫. *ಸತ-ತ್ವ ಮತ್ತು ಸತ್ಯ,* ೧೯೭೫, ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು ಇಡುಪಿ.

೨೬. *ಕನ್ನಡ ಸಾಹಿತ್ಯ ಅಭಿವೃದ್ಧಿ* ೧೯೭೬, (ಸಾಹಿತ್ಯ ಸಂಸ್ಕೃತಿ ವಿಮರ್ಶೆ) ಕಾದಂಬರೀ ಸಂಗ್ರಹ ಆಫೀಸು ಚಾಮರಾಜನಗರ ಮೈಸೂರು(ಜಿ).

೨೭. *ಪ್ರವಾಹ ಪತಿತರ 'ಹಿಂದೂ ಎಂಬ ಧರ್ಮ'* ೧೯೭೬, ಪ್ರಸಾರಾಂಗ. ಜ್ಞಾನಭಾರತಿ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೮. *ಭಗವದ್ಗೀತೆಯೊಳಗಿನ ರಾಜಯೋಗ,* ೧೯೭೭, ಬುಕ್ ಸೆಂಟರ ಹುಬ್ಬಳ್ಳಿ.

೨೯. *ಸಾಂಸ್ಕೃತಿಕ ಮೂಲದಲ್ಲಿನ ತಾತ್ವಿಕ ಚಿಂತನೆಗಳು,* (ವೈಚಾರಿಕ) ೧೯೭೮.

೩೦. *ಮಾನವ ಧರ್ಮದ ಆಕೃತಿ,* ೧೯೭೯, ಕಾಲಗತಿ ಪ್ರಕಾಶನ ರಾಯಬಾಗ ಬೆಳಗಾವಿ.

೩೧. *ಬುಧನ ಜಾತಕ,* ೧೯೮೦.

೩೨. *ಬಿತ್ತಿದ್ದನ್ನು ಬೆಳಕೋ,* ೧೯೮೪.

೩೩. *ಜೀವನದ ಅರ್ಥಗ್ರಹಣ ಪದ್ಧತಿ,* ೧೯೮೬, ಸಮಾಜ ಪುಸ್ತಕಾಲಯ ಧಾರವಾಡ.

೩೪. *ಮರ್ಹಾಟಿ ಸಂಸ್ಕೃತಿ; ಕೆಲವು ಸಮಸ್ಯೆಗಳು,* (ಅನುವಾದ: ಕುರ್ತಕೋಟಿ) ೧೯೯೦, ಮರ್ಹಾಟಿ ಸಂಸ್ಕೃತಿ ಕಾಂಹಿ ಸಮಸ್ಯಾ ಮರ್ಹಾಟಿ ಕೃತಿ ಅನುವಾದ).

೩೫. *ಶ್ರೀ ಮತ ಭಗವದ್ಗೀತೆ* (ಮೂಲ ಸಾತವಾಳೇಕರ) ಸರಸ್ವತೀ ನಿಲಯ ಧಾರವಾಡ.

೩೬. *ಸನಾತನ ಧರ್ಮ,* (ವೈಚಾರಿಕ)